ಸಂಪುಟ 24 ಸಂಚಿಕೆ 9-10
ಮಾರ್ಚ್ 10, 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ



ಅಯೋಧ್ಯಾ ದಳ್ಳುರಿ ಖಾವಿ ಪಡೆಗಳ ಪಿತೂರಿ

ಗುಜರಾತ್ : ಭೀಭತ್ಸ ನರಮೇಧ

ಚುನಾವಣೆ: ನೆಲಕಚ್ಚಿದ ಬಿಜೆಪಿ


ಜನರ ದೋಚುವ ಬಜೆಟ್

ಗೊಂದಲದ ಸಾಹಿತ್ಯ ಸಮ್ಮೇಳನ

ಬಹುಕೋಟಿ ಷೇರು ಹಗರಣ

ಹಿಂದಿನ ಸಂಚಿಕೆಯಲ್ಲಿ ಪಂಚಾಯತ್‌ಗಳಲ್ಲಿ ಮಹಿಳಾ ಮೀಸಲಾತಿ, ಕಾಂಗ್ರೆಸ್-ಬಿಜೆಪಿ ಹೊಂದಾಣಿಕೆ, ಎಡರಂಗದ ಜಯಭೇರಿ, ಕೇಂದ್ರ ಸರ್ಕಾರದ ವಿರುದ್ಧ ಅವಿಶ್ವಾಸ ಮಂಡನೆ, ಉತ್ತರ ಪ್ರದೇಶ ಮುಖ್ಯಮಂತ್ರಿಯಾಗಿ ಮುಲಾಯಂ ಸಿಂಗ್ ಯಾದವ್ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಮುಲಾಯಂ ಸರ್ಕಾರಕ್ಕೆ ಬಿಎಸ್‌ಪಿ ಬೆಂಬಲ ವಾಪಸ್, ಮುಖ್ಯಮಂತ್ರಿಯಾಗಿ ಮಾಯಾವತಿ, ಸರ್ಕಾರದ ಪತನ, ರಾಷ್ಟ್ರಪತಿ ಆಳ್ವಿಕೆ ಜಾರಿ, ವಿಧಾನಸಭೆ ವಿಸರ್ಜನೆ, ಗೂರ್ಖಾ ಗುಡ್ಡಗಾಡು ಮಂಡಳಿ ಚುನಾವಣೆ, ಶೇರು ಹಗರಣ, ಮನಮೋಹನ ಸಿಂಗ್ ವಿಚಾರಣೆ, ರಾಜೀನಾಮೆ ನೀಡಿಕೆ, ಮತ್ತೆ ವಾಪಸ್ಸು, 'ಭಾರತ ಬಂದ್', ಗ್ಯಾಟ್ ವಿರುದ್ಧ ಕರಾಳ ದಿನಾಚರಣೆ, ಚುನಾವಣೆ ಆಯೋಗದ ತುಘಲಕ್ ವರ್ತನೆ ಈ ಬಗ್ಗೆ ಓದಿ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 90

ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಹಿಮಾಚಲ ಪ್ರದೇಶದಲ್ಲಿ ಬಿಜೆಪಿ ಪರಾಭವಗೊಂಡಿತು. ಆದರೆ ಅದು ರಾಜಸ್ಥಾನದಲ್ಲಿ ಮಿತ್ರಪಕ್ಷಗಳ ನೆರವಿನಿಂದ ಸರಕಾರ ರಚಿಸಿತು. ದೆಹಲಿಯಲ್ಲಿ ಕೂಡ ಅದು ಅಧಿಕಾರ ಹಿಡಿಯಿತು. ಉತ್ತರ ಪ್ರದೇಶದಲ್ಲಿ ಸರಕಾರ ರಚಿಸಲು ಮುಲಾಯಂಸಿಂಗ್ ಕಾಂಗ್ರೆಸ್ ಬೆಂಬಲ ಪಡೆಯಬೇಕಾಯಿತು. ಎಲ್ಲಾ ಜಾತ್ಯಾತೀತ ಶಕ್ತಿಗಳು ಒಗ್ಗಟ್ಟಾದರೆ ಬಿಜೆಪಿಗೆ ಆಗ ಪಡೆದಷ್ಟು ಸ್ಥಾನಗಳನ್ನು ಪಡೆಯಲು ಆಗುತ್ತಿರಲಿಲ್ಲ ಹಾಗೂ ಮುಲಾಯಂ ಸಿಂಗ್ ಕಾಂಗ್ರೆಸನ್ನು ಅವಲಂಬಿಸ ಬೇಕಾಗಿರಲಿಲ್ಲ ಎಂಬುದನ್ನು ನಾವು ಮೊದಲೇ ತಿಳಿದುಕೊಳ್ಳಬೇಕಾಗಿತ್ತು.

1995 ಜನವರಿಯಲ್ಲಿ ಮುಲಾಯಂ ಸರಕಾರದಿಂದ ಕಾಂಗ್ರೆಸ್ ಬೆಂಬಲ ವಾಪಸ್ ಪಡೆಯಿತು. ಆದರೆ ಎಐಸಿಸಿ ಮಧ್ಯ ಪ್ರವೇಶಿಸಿದ್ದರಿಂದ ಬಲಾಬಲ ಪ್ರದರ್ಶನ ನಿವಾರಣೆಯಾಯಿತು. ಅದಾದಮೇಲೆ ಬಿ.ಎಸ್.ಪಿ. ಸಮಸ್ಯೆ ಸೃಷ್ಟಿಸಿತು. ಜೂನ್ ಒಂದರಂದು ಬಿ.ಎಸ್.ಪಿ. ಬೆಂಬಲ ವಾಪಸ್ ಪಡೆಯಿತು. ಬಿಜೆಪಿ ಬೆಂಬಲದೊಂದಿಗೆ ಬಿಎಸ್‌ಪಿಯ ಮಾಯಾವತಿ ಮುಖ್ಯಮಂತ್ರಿ ಆದರು. ಏನಿದ್ದರೂ ಅನಿವಾರ್ಯವಾದದ್ದು ನಡೆಯಲೇ ಬೇಕಿತ್ತು. ಬಿಜೆಪಿ ಬೆಂಬಲವನ್ನು ಹಿಂತೆಗೆದುಕೊಂಡಿತು. ರಾಜ್ಯದಲ್ಲಿ ಮತ್ತೆ ರಾಷ್ಟ್ರಪತಿ ಆಡಳಿತವನ್ನು ಹೇರಲಾಯಿತು. ಅಕ್ಟೋಬರ್ 27 ರಂದು ವಿಧಾನಸಭೆಯನ್ನು ವಿಸರ್ಜಿಸಲಾಯಿತು. ಇದು ನಮ್ಮ ಮುಖ್ಯ ಬೇಡಿಕೆಗಳಲ್ಲಿ ಒಂದಾಗಿತ್ತು.

ಡಾರ್ಜಿಲಿಂಗ್‌ನಲ್ಲಿ ಗೂರ್ಖಾ ಗುಡ್ಡಗಾಡು ಮಂಡಳಿಗೆ 1993 ಡಿಸೆಂಬರ್ 31 ರಂದು ಎರಡನೇ ಚುನಾವಣೆ ನಡೆಯಿತು. 28ರಲ್ಲಿ 24 ಸ್ಥಾನಗಳನ್ನು ಜಿಎನ್‌ಎಲ್‌ಎಫ್ ಗೆದ್ದುಕೊಂಡಿತು. ಸಿಪಿಐ(ಎಂ) ಒಂದು, ಪಕ್ಷೇತರರು ಮೂರು ಸ್ಥಾನಗಳಲ್ಲಿ ಗೆದ್ದರು. ಬೆಟ್ಟ ಪ್ರದೇಶಗಳಲ್ಲಿ ನಾವು ದುರ್ಬಲರಾಗಿದ್ದೆವು ಎನ್ನುವುದರಲ್ಲಿ ಅನುಮಾನವಿರಲಿಲ್ಲ. ನಮಗೆ ಕಳುಹಿಸಲು ಸಾಕಷ್ಟು ಅಭ್ಯರ್ಥಿಗಳು ಕೂಡ ಇರಲಿಲ್ಲ. ಆದರೆ ಪ್ರತಿಪಕ್ಷಗಳು ಪಡೆದ ಒಟ್ಟು ಮತಗಳು ಜಿ.ಎಸ್.ಎಸ್ ಎಫ್ ಪಡೆದದ್ದಕ್ಕಿಂತ ಹೆಚ್ಚಾಗಿದ್ದವು. ಇದು ಜಿ.ಎನ್.ಎಲ್.ಎಫ್. ನಾಯಕತ್ವದ ವಿರುದ್ಧ ಅತೃಪ್ತಿ ಬೆಳೆಯುತ್ತಿದ್ದುದರ ಸಂಕೇತವಾಗಿತ್ತು.

ಷೇರು ಹಗರಣ

ಸರಕಾರದ ದುರಂತಮಯ ಆರ್ಥಿಕ ನೀತಿಗಳ ಹಿನ್ನೆಲೆಯಲ್ಲಿ ಹಗರಣಗಳ ಮೇಲೆ ಹಗರಣಗಳು ಬೆಳಕಿಗೆ ಬಂದವು. ಪತ್ರಿಕೆಗಳ ಮುಖಪುಟಗಳಲ್ಲಿ ರಾರಾಜಿಸಿದವು. ಮೊದಲು ಷೇರು ಹಗರಣ ಸ್ಫೋಟಗೊಂಡಿತು. ಬಹಳ ಸಮಯದಿಂದಲೂ ಅದು ನಡೆಯುತ್ತಲೇ ಇತ್ತು. ಆದರೆ ಹಣಕಾಸು ಸಚಿವ ಮನಮೋಹನಸಿಂಗ್ ಅದನ್ನು ಮುಚ್ಚಿಹಾಕಲು ಯತ್ನಿಸಿದ್ದರು. ಏಪ್ರಿಲ್ 26 ರಂದು ಜಂಟಿ ಸಂಸದೀಯ ಸಮಿತಿ ಮನಮೋಹನಸಿಂಗ್‌ರನ್ನು ವಿಚಾರಣೆಗೆ ಕರೆಸಿತು. ಜೂನ್ 22ರಂದು ಅದರ ಕರಡು ವರದಿ ಪತ್ರಿಕೆಗಳಿಗೆ ಸೋರಿಕೆಯಾಯಿತು. ಮನಮೋಹನಸಿಂಗ್, ಆರೋಗ್ಯ ಸಚಿವ ಬಿ. ಶಂಕರಾನಂದ ಮತ್ತು ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ವೆಂಕಟರಾಮನ್‌ರಿಗೆ ವರದಿ ಛೀಮಾರಿ ಹಾಕಿತ್ತು. ಈ ವಿಷಯವನ್ನು ಬಹಳ ಲಘುವಾಗಿ ಪರಿಗಣಿಸಲು ಕಾಂಗ್ರೆಸ್ ಪ್ರಯತ್ನಿಸಿತು. ಅಂತಿಮ ವರದಿಯನ್ನು ಡಿಸೆಂಬರ್ 21ರಂದು ಸಂಸತ್ತಿನಲ್ಲಿ ಮಂಡಿಸಲಾಯಿತು. ಹಣಕಾಸು, ತೈಲ, ಭೂ, ಇಂಧನ ಹಾಗೂ ಪೆಟ್ರೋಲಿಯಂ ಖಾತೆಗಳು ತೀವ್ರಟೀಕೆಗೆ ಒಳಗಾದವು. ಮೂರು ದಿನಗಳ ನಂತರ ಮನಮೋಹನ್ ರಾಜಿನಾಮೆ ನೀಡಿದರು. ಎಲ್ಲವೂ ಸರಿಯಾಗುವುದೆಂದು ನಾವು ಯೋಚಿಸಿದೆವು. ಆದರೆ ಇದೆಲ್ಲ ನಾಟಕ ಎಂಬಂತೆ ಕಂಡಿತು. ನಾನಾ ವಿಭಾಗಗಳ ಮನವಿಗಳ ಮೇರೆಗೆ ಮನಮೋಹನ ರಾಜಿನಾಮೆ ವಾಪಸ್ ಪಡೆದರು.

ಸರಕಾರದ ಬಹುತೇಕ ಎಲ್ಲರೂ ಆರೋಪದ ಸುಳಿಯಲ್ಲಿ ಸಿಲುಕಿದ್ದು ದೊಡ್ಡ ಒಗಟಾಗಿತ್ತು. ಪ್ರಧಾನಿ ನರಸಿಂಹರಾವ್‌ಗೆ ಒಂದು ಕೋಟಿ ರೂಪಾಯಿ ಲಂಚ ನೀಡಿರುವುದಾಗಿ ಷೇರು ಹಗರಣದ ಮುಖ್ಯ ಸೂತ್ರದಾರ ಹರ್ಷದ್ ಮೆಹ್ತಾ ಹೇಳಿದರು. ಆಗ ನಾನು ವಾರಣಾಸಿಯಲ್ಲಿದ್ದೆ ಇಂಥ ಗಂಭೀರ ಆರೋಪ ಬಂದಾಗಲೂ ಪ್ರಧಾನಿ ರಾಜಿನಾಮೆ ನೀಡಲು ಮುಂದಾಗದಿರುವುದು ನನಗೆ ಪರಮಾಶ್ಚರ್ಯವಾಯಿತು. ರಾವ್‌ರ ಮಗನ ಮಾಲಿಕತ್ವದ ಒಂದು ಕಂಪೆನಿಯಲ್ಲಿ ಹಗರಣದ ಮುಖ್ಯ ಆರೋಪಿಯೊಬ್ಬ ಎರಡು ಕೋಟಿ ರೂಪಾಯಿ ಹೂಡಿದ್ದ ಎಂದು ಜೂನ್ ಕೊನೆಯಲ್ಲಿ ಸುದ್ದಿ ಬಂತು.

ಸೆಪ್ಟೆಂಬರ್ ಒಂಬತ್ತರಂದು 'ಭಾರತ ಬಂದ್'ಗೆ ಎಡಪಕ್ಷಗಳು ಕರೆ ನೀಡಿದವು. ಆಗಸ್ಟ್ 9 ರಿಂದ ಕಾನೂನು ಭಂಗ ಕಾರ್ಯಕ್ರಮಗಳು ನಡೆದವು. ಸೆಪ್ಟೆಂಬರ್ ಎರಡರಂದು ವಿಮೆ ನೌಕರರು ಸಂಪು ನಡೆಸಿದರು. ಡಿಸೆಂಬರ್ 9 ರಂದು ಪಾರ್ಲಿಮೆಂಟ್ ಚಲೋ ಸಂಘಟಿಸಲಾಯಿತು. ಡಿಸೆಂಬರ್ 7-10ರಂದು ಅಂಚೆ ಮುಷ್ಕರ ಯೋಜಿಸಲಾಯಿತು. ಗ್ಯಾಟ್ ಒಪ್ಪಂದದ ವಿರುದ್ಧ 'ಕರಾಳದಿನ'ವನ್ನು ಆಚರಿಸಲಾಯಿತು. ಸಾಂಕೇತಿಕ ಪ್ರತಿಭಟನೆಯಾಗಿ ಪಶ್ಚಿಮ ಬಂಗಾಳದಾದ್ಯಂತ ಎಲ್ಲಾ ಕಾರ್ಖಾನೆಗಳು ಐದು ನಿಮಿಷ ಕೆಲಸ ಸ್ಥಗಿತಗೊಳಿಸಿದವು.

ಚುನಾವಣೆ ಆಯೋಗದ ವರ್ತನೆ

ಮುಖ್ಯ ಚುನಾವಣೆ ಕಮಿಷನರ್ (ಸಿಇಸಿ)ಆಗಿ ಟಿ.ಎನ್.ಶೇಷನ್‌ರ ವ್ಯಕ್ತಿತ್ವದ ಮೌಲ್ಯಮಾಪನವನ್ನು ನಾನು ಮಾಡುವುದಿಲ್ಲ. ಅವರನ್ನು ಚಂದ್ರಶೇಖರ್ ನೇಮಿಸಿದ್ದರು. ಆದರೆ ಎರಡೇ ವರ್ಷಗಳಲ್ಲಿ ತಾನೇ ಕಾನೂನು ಎನ್ನುವ ರೀತಿಯಲ್ಲಿ ಶೇಷನ್ ವರ್ತಿಸತೊಡಗಿದರು. ಚುನಾವಣೆ ವ್ಯವಸ್ಥೆಯಲ್ಲಿ ದೋಷವಿದೆ ಎಂಬುದನ್ನು ನಾವೂ ಒಪ್ಪುತ್ತೇವೆ. ಆದರೆ ಹಾಗೆಂದ ಮಾತ್ರಕ್ಕೆ ನಮಗೆ ಇಷ್ಟಬಂದಂತೆ ಯಾವಾಗ ಬೇಕಾದರೂ ಚುನಾವಣೆಗಳನ್ನು ನಿಲ್ಲಿಸಬಹುದು ಎಂಬುದು ಅದರ ಅರ್ಥವಲ್ಲ. ಏನಿದ್ದರೂ ಶೇಷನ್ ಪ್ರಯತ್ನಿಸಿ ಹಲವು ಚುನಾವಣೆ ಸುಧಾರಣೆಗಳನ್ನು ತಂದರೇನೋ ವಾಸ್ತವ ಸಂಗತಿ. ರಾಜ್ಯಸಭೆ ಚುನಾವಣೆಯೂ ಅವುಗಳಲ್ಲಿ ಒಂದು. ಆದರೆ ಪ್ರಜಾಪ್ರಭುತ್ವದ ಈ ಯೋಜನೆ ತಪ್ಪಾಗಿ ಅವರ ಸುತ್ತವೇ ಸುತ್ತುತ್ತಿತ್ತು. ಅವರನ್ನು 'ಆತ್ಮಸ್ತುತಿಯ ಹುಚ್ಚ' ಎಂಬುದಾಗಿ ನಾನು ವರ್ಣಿಸಿದ್ದು ನೆನಪು. ಅದು ಪತ್ರಿಕೆಗಳಲ್ಲಿಯೂ ಪ್ರಕಟವಾಗಿತ್ತು. ಆದರೆ ಚುನಾವಣೆ ಆಯೋಗವನ್ನೇ ತುಚ್ಛೀಕರಿಸುವುದು ನನ್ನ ಉದ್ದೇಶವಾಗಿರಲಿಲ್ಲ. 1993ರ ಮಧ್ಯಭಾಗದಲ್ಲಿ ಮತದಾರರ ಗುರುತುಪತ್ರ ವ್ಯವಸ್ಥೆಯನ್ನು ಶೇಷನ್ ಆರಂಭಿಸಿದರು. ಯಾವುದೇ ಪೂರ್ವತಯಾರಿ ಕೆಲಸವಿಲ್ಲದೆ ಇದನ್ನು ಮಾಡಲಾಯಿತು. ಅವರ ವರ್ತನೆ ಮಹಮದ್ ಬಿನ್ ತೊಘಲಕ್‌ನನ್ನು ನೆನಪಿಸುವಂತಿತ್ತು. ಅವರು ಪಶ್ಚಿಮ ಬಂಗಾಳದಲ್ಲಿನ ರಾಜ್ಯಸಭೆ ಚುನಾವಣೆಯನ್ನೂ ನಿಲ್ಲಿಸಿದರು. ಇದರ ವಿರುದ್ಧ ನ್ಯಾಯಾಲಯದಲ್ಲಿ ನಮಗೆ ಜಯ ಸಿಕ್ಕಿತು. ಕನಿಷ್ಠವೆಂದರೂ ಐದು ಸಲ ನಾವು ಕಾನೂನು ಕ್ರಮಕ್ಕೆ ಮುಂದಾಗಬೇಕಾಯಿತು. ಹಾಗೂ ಪ್ರತಿಸಲವೂ ನಾವೇ ಗೆದ್ದೆವು. ಚುನಾವಣೆ ವ್ಯವಸ್ಥೆ ಬಗ್ಗೆ ಚರ್ಚಿಸಲು ಜನವರಿ 19 ರಂದು ನವದೆಹಲಿಯಲ್ಲಿ ಮುಖ್ಯಮಂತ್ರಿಗಳ ಸಭೆ ನಡೆಯಿತು.

1995 ಜನವರಿಯಲ್ಲಿ ಭಾವಚಿತ್ರಸಹಿತ ಗುರುತುಚೀಟಿಯನ್ನು ಜಾರಿಗೆ ತರಲಾಯಿತು. ಆದರೆ ಮತದಾನಕ್ಕೆ ಅದು ಅಗತ್ಯವಿಲ್ಲ ಎಂದು ನ್ಯಾಯಾಲಯಗಳು ಹೇಳಿದವು. ಈ ಪ್ರಕ್ರಿಯೆಯಲ್ಲಿ ಹಲವು ಕೋಟಿ ರೂಪಾಯಿ ನೀರು ಪಾಲಾಯಿತು.

ಆರ್ಥಿಕ ನೀತಿಯ ವಿರುದ್ಧ

ರಿಸರ್ವಬ್ಯಾಂಕ್‌ನ ಮಾಜಿ ಗವರ್ನರ್ ನೇತೃತ್ವದ ಮಲ್ಹೋತ್ರ ಸಮಿತಿ 1994 ಜನವರಿ 7 ರಂದು ತನ್ನ ವರದಿಯನ್ನು ಸಲ್ಲಿಸಿತು. ವಿಮೆ ಮತ್ತು ಬ್ಯಾಂಕಿಂಗ್ ಕ್ಷೇತ್ರಗಳ ಖಾಸಗೀಕರಣ ಮಾಡಬೇಕೆಂದು ವರದಿ ಶಿಫಾರಸು ಮಾಡಿತು. ಅಂತರ್ರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಷರತ್ತುಗಳಿಗೆ ಅನುಗುಣವಾಗಿ ಹೀಗೆ ಮಾಡಲಾಗಿತ್ತು. ಜನವರಿ 12 ರಂದು ವಿಮೆ ನೌಕರರು ಎರಡು ಗಂಟೆಗಳ ಮುಷ್ಕರ ನಡೆಸಿದರು. ಆಗಿನಿಂದ ಈ ಚಳವಳಿ ತೀವ್ರವಾಗಿ ಬೆಳೆಯಿತು. ಏಪ್ರಿಲ್ 8 ಂದು ಬ್ಯಾಂಕಿಂಗ್ ವಲಯದವರೂ ಸೇರಿದರು. ರಾಷ್ಟ್ರವ್ಯಾಪಿ ಬ್ಯಾಂಕ್ ಮುಷ್ಕರ ನಡೆಯಿತು. ಮಲ್ಹೋತ್ರ ಸಮಿತಿ ವರದಿಯ ವಿರುದ್ಧ ಎಡಪಕ್ಷಗಳು ದೃಢ ನಿಲುವನ್ನು ತಳೆದವು. ವರದಿ ಅನುಷ್ಠಾನ ಮಾಡಲು ರಾವ್ ಸರ್ಕಾರಕ್ಕೆ ಆಗಲಿಲ್ಲ.

ಮಾರ್ಚ್ 14 ರಂದು ದೇಶಾದ್ಯಂತ ಕಾರ್ಮಿಕರ ಉಗ್ರ ಪ್ರತಿಭಟನೆಗೆ ಕರೆ


ಬೆಂಗಳೂರಿನಲ್ಲಿ ಯಶಸ್ವಿ ರಾಜ್ಯ ಸಮಾವೇಶ

ಕೇಂದ್ರ ಸರ್ಕಾರದ ವಿವೇಚನಾ ರಹಿತವಾದ ಖಾಸಗೀಕರಣ ನೀತಿಯಿಂದ ದೇಶದ ಸಂಪತ್ತು ದೇಶೀಯ ಹಾಗೂ ವಿದೇಶಿ ಬಂಡವಾಳಗಾರರಿಗೆ ಅತ್ಯಂತ ಅಗ್ಗವಾಗಿ ಪರಬಾರೆ ಮಾಡಲಾಗುತ್ತಿದೆ.

ಇದರಿಂದಾಗಿ ಲಕ್ಷಾಂತರ ಕಾರ್ಮಿಕ ಬೀದಿಪಾಲಾಗುತ್ತಿದ್ದಾರೆ. ತೆರಿಗೆ ಜಾಲದಲ್ಲಿ ಕಾರ್ಮಿಕರಿಗೆ / ನೌಕರರಿಗೆ ನೀಡಲಾಗುವ ಸೌಲಭ್ಯ, ಭತ್ಯೆಗಳನ್ನು ಕಡಿತಗೊಳಿಸಿ ಆದಾಯತೆರಿಗೆ ಹೇರಲಾಗುತ್ತಿದೆ. ಸಣ್ಣ ಉಳಿತಾಯ ಹಾಗೂ ಭವಿಷ್ಯ ನಿಧಿಗಳ ಬಡ್ಡಿದರ ಕಡಿತ ಮಾಡಿ ಕಾರ್ಮಿಕರ ಉಳಿತಾಯಕ್ಕೆ ಕನ್ನಹಾಕಲಾಗಿದೆ. ಔದ್ಯಮಿಕ ವಿವಾದಗಳ ಕಾಯಿದೆಯ ಅಧ್ಯಾಯ 5 ರ ಕಲಂ 25K ಗೆ ತಿದ್ದುಪಡಿ ಮಾಡಲು ಕೇಂದ್ರ ಹೆಣಗಾಡುತ್ತಿದೆ. ಇದರಿಂದಾಗಿ 1000ಕ್ಕೂ ಕಡಿಮೆ ಕಾರ್ಮಿಕರಿರುವ ಕೈಗಾರಿಕಾ ಮಾಲೀಕರಿಗೆ ಸರ್ವ ಹಕ್ಕು ನೀಡಿ ಯಾವಾಗಬೇಕಾದರೂ ಕಾರ್ಮಿಕರನ್ನು ರಿಟ್ರೆಂಚ್‌ಮಾಡಲು, ಲೇ ಆಫ್ ಮಾಡಲು ಹಾಗೂ ಮುಚ್ಚಿ ಮೋಸ ಮಾಡಲು ಅವಕಾಶ ನೀಡಲಾಗುತ್ತಿದೆ. ಇದರಿಂದಾಗಿ ಲಕ್ಷಾಂತರ ಕಾರ್ಮಿಕರು ತೀವ್ರ ಆತಂಕದಲ್ಲಿ ಗುಲಾಮರಂತೆ ದುಡಿಯುವ ಭೀಕರ ಪರಿಸ್ಥಿತಿ ನಿರ್ಮಾಣ ಮಾಡಲಾಗುತ್ತಿದೆ. ನೂರಾರು ವರ್ಷಗಳ ಹೋರಾಟದಿಂದ ಪಡೆದ ಹಕ್ಕುಗಳನ್ನು ಮೊಟಕುಗೊಳಿಸಲಾಗುತ್ತಿದೆ. ವಿಶ್ವಬ್ಯಾಂಕ್, ಐಎಂಎಫ್, ಡಬ್ಲ್ಯುಟಿಓ ಹಾಗೂ ನೀತಿಗಳನ್ನು ಹಿಮ್ಮೆಟ್ಟಿಸಲು ಕಾರ್ಮಿಕ ಸಂಘಗಳ ಜಂಟಿ ಸಮಾವೇಶ ಒಕ್ಕೊರಲಿನ ಕರೆ ನೀಡಿದೆ. ಈಗ ಹಬ್ಬುತ್ತಿರುವ ಕೋಮುವಾದದ ವಿಷ ದುಡಿಯುವ ಜನರ ಐಕ್ಯತೆಗೆ ಧಕ್ಕೆ ಮಾಡದಂತೆ ಎಚ್ಚರ ವಹಿಸಿ ಒಗ್ಗಟ್ಟಿನ ಹೋರಾಟವನ್ನು ಮಾರ್ಚ್ 14 ರಂದು ದೇಶವ್ಯಾಪಿ ಯಶಸ್ವಿಗೊಳಿಸಲು ಹಾಗೂ ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಮುಷ್ಕರಕ್ಕೆ ಸಜ್ಜಾಗಲು ಮಾರ್ಚ್ 1 ರಂದು ಬೆಂಗಳೂರಿನಲ್ಲಿ ನಡೆದ ಸಮಾವೇಶ ಕರೆ ನೀಡಿದೆ.

ಈ ಸಮಾವೇಶದಲ್ಲಿ ಎಐಟಿಯುಸಿ, ಸಿಐಟಿಯು, ಬಿಎಂಎಸ್, ಹೆಚ್‌ಎಂಎಸ್, ಐಎನ್‌ಟಿಯುಸಿ, ಸಾರ್ವಜನಿಕ ಉದ್ದಿಮೆ, ವಿಮಾ-ಬ್ಯಾಂಕ್ ಮುಂತಾದ ಎಲ್ಲಾ ಕಾರ್ಮಿಕ

ಈ ವಾರ ಕರ್ನಾಟಕ ಒಂದು ನೋಟ



ಎಸ್.ವೈ.ಗುರುಶಾಂತ್

ಮೂರನೇ ಪರ್ಯಾಯಕ್ಕೆ ಬಲ ತುಂಬಿದ ದೇವೇಗೌಡರ ಆಯ್ಕೆ

ಕನಕ ಪುರದ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು 53000 ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ. ಗೌಡರಿಗೆ 5,81,669 ಮತಗಳು ದೊರೆತಿವೆ. ಕಾಂಗ್ರೆಸ್ ಅಭ್ಯರ್ಥಿ ಸಚಿವ ಡಿ.ಕೆ.ಶಿವಕುಮಾರ್‌ಗೆ 5,28,133 ಮತ ಪಡೆದು ಸೋಲನ್ನಪ್ಪಿದ್ದಾರೆ.

ಜನತಾದಳ ಮತ್ತು ಕಾಂಗ್ರೆಸ್‌ಗಳ ಹಣಾಹಣಿಯಲ್ಲಿ ಬಿಜೆಪಿ ಅಭ್ಯರ್ಥಿ ಕೆ.ಎಸ್.ಈಶ್ವರಪ್ಪ ಗೆದ್ದುಬಿಡುವರೆಂಬ ಭ್ರಮೆ ಹರಿದು, ಸುಮಾರು ಎರಡು ಲಕ್ಷ ಮತ ಪಡೆದು ಠೇವಣಿಯನ್ನು ಕಳೆದುಕೊಂಡು ನೆಲಕಚ್ಚಿದ ಹೀನಾಯ ಸ್ಥಿತಿ ತಲುಪಿದ್ದಾರೆ.

ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯವಾದ ಅಭಿನಂದನೀಯ ಆಯ್ಕೆ ಇದು. ದೇವೇಗೌಡರನ್ನು ಸೋಲಿಸಲು ಇವೆರಡೂ ಪಕ್ಷಗಳೂ ಆಡದ ಆಟಗಳಿಲ್ಲ. ಇಂತಹ ಸ್ಥಿತಿಯಲ್ಲಿ ಇದು ಗಮನಾರ್ಹ ಗೆಲುವು. ಆದರೆ ಕಾಂಗ್ರೆಸ್ ಮತ್ತು ಬಿಜೆಪಿಗಳು ಸೋತು ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ವಿಶ್ಲೇಷಣೆಯಲ್ಲಿ ತೊಡಗಿ ಜನರೆದುರು ಮುಖ ಉಳಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಕಾಂಗ್ರೆಸ್‌ನ ಓಟುಗಳು ಯಥಾರೀತಿ ಬಿಗಿಯಾಗಿಯೇ ಇದ್ದು ಕೊಂಚ ಗಳಿಸಿದ್ದೇವೆ ಎಂದು ತೃಪ್ತಿ, ತೇಗುತ್ತಿರುವ ಶಿವಕುಮಾರ್, ದೇವೇಗೌಡರ ಗೆಲುವಿಗೆ 'ಸಿಂಪಥಿ' ಓಟುಗಳೇ ಕಾರಣವೆನ್ನುವ ಬಿಜೆಪಿ ನಾಯಕರು ನಿಜಕ್ಕೂ ಜನತೆಗೆ ಯಾಮಾರಿಸುವ ಯತ್ನ ನಡೆಸತಿದ್ದಾರೆ. ಅಲ್ಲದೇ ಈ ಗೆಲುವಿಗೆ ಜಾತಿ ಬೆಂಬಲ, ಮಠಾಧೀಶರ ಆಶೀರ್ವಾದ, ಯಜ್ಞ, ಯಾಗಗಳ ಫಲ ಶೃತಿ, ಇತ್ಯಾದಿ ವಿಶ್ಲೇಷಣೆಗಳು ನಡೆದಿವೆ. ಇದು ಜನತೆಯ ತೀರ್ಪಿನ್ನು ನಿರಾಕರಿಸುವ, ಅವಮಾನಿಸುವ ಪ್ರಜ್ಞಾಪೂರ್ವ ಪ್ರಯತ್ನ. ದೇವೇಗೌಡರ ಆಯ್ಕೆ ಕೇಂದ್ರದ ಕೋಮುವಾದಿ ಬಿಜೆಪಿ ಹಾಗೂ ಕಾಂಗ್ರೆಸ್‌ನ ಕೃಷ್ಣರ ರಾಜ್ಯ ಸರ್ಕಾರಗಳ ವಿನಾಶಕಾರಿ ನೀತಿಗಳಿಗೆ ಜನತೆ ನೀಡಿರುವ ತಿರುಗೇಟು. ಆದ್ದರಿಂದ ಈ ವ್ಯಕ್ತಿನಿಷ್ಠ ಕಾರಣಗಳಿಂದ ಈ ಗೆಲುವನ್ನು ಅರ್ಥೈಸದೇ ಮುಂದೆ ರಾಜ್ಯದಲ್ಲಿ ಮುಖ್ಯವಾಗಿ ಮೂರನೇ ಪರ್ಯಾಯದ ರಾಜಕೀಯಕ್ಕೆ ಜನತೆ ನೀಡಿದ ಸ್ಫೂರ್ತಿದಾಯಕ ಸಂಕೇತವೆಂದು ಪರಿಗಣಿಸಬೇಕು. ಈ ಫಲಿತಾಂಶವು ಆ ದಿಕ್ಕಿನಲ್ಲಿ ರಾಜ್ಯದ ರಾಜಕಾರಣ ಸಾಗಲು ನಾಂದಿ ಹಾಡಬಲ್ಲದು. ಆದ್ದರಿಂದಲೇ ಜನತೆಯ ಜ್ವಲಂತ ಸಮಸ್ಯೆಗಳನ್ನೆತ್ತಿ ಹೋರಾಟ ನಡೆಯಬೇಕು. ಈ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷ ಇಡೀ ಕ್ಷೇತ್ರದಲ್ಲಿ ಜೆಡಿ(ಎಸ್) ಅಭ್ಯರ್ಥಿ ದೇವೇಗೌಡರನ್ನು ಬೆಂಬಲಿಸಿ ಪ್ರಚಾರಿಸಿತು. ನಿರ್ದಿಷ್ಟ ಪ್ರಶ್ನೆಗಳನ್ನು ವಿಶ್ಲೇಷಿಸಿ ಜನತೆಯ ಗಮನ ಸೆಳೆಯಿತು. ಹಾಗೇ ಹಲವಾರು ಜನಪರ ಸಂಘಟನೆಗಳು ಗೌಡರಿಗೆ ಬೆಂಬಲಿಸಿದ್ದವು.

ನಡುವೆ ಎಂದು ಕೃಷ್ಣರವರು ವ್ಯಾಖ್ಯಾನಿಸಿದ್ದರು. ಅಂದರೆ ಜೆಡಿ(ಎಸ್)ನ ದೇವೇಗೌಡರು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂದು. ಆದರೆ ಚುನಾವಣಾ ಪ್ರಕ್ರಿಯೆ ಆರಂಭಗೊಂಡಂತೆ ತಮ್ಮ ಈ ನಟನೆಯ ಮಾತನ್ನು ಪುನರುಚ್ಚರಿಸುವ ಧೈರ್ಯವೂ ಬರಲಿಲ್ಲ. ದೇವೇಗೌಡರನ್ನು ಸೋಲಿಸಲೆಂದೇ ಕುಖ್ಯಾತಿಯ ಡಿ.ಕೆ.ಶಿವಕುಮಾರ್‌ನನ್ನು ಅಭ್ಯರ್ಥಿಯನ್ನಾಗಿಸಿ ಸಕಲ ಕುತಂತ್ರ, ಸಂಪನ್ಮೂಲಗಳನ್ನು ಬಳಸಿ ಶತಾಯಗತಾಯ ಪ್ರಯತ್ನಿಸಲಾಯಿತು. ಬಿಜೆಪಿ ಅಭ್ಯರ್ಥಿ ಕೆ.ಎಸ್.ಈಶ್ವರಪ್ಪ, ಎಷ್ಟೆಲ್ಲಾ ಹಾರಾಡಿದರೂ ಮೂರನೇ ಸ್ಥಾನದಲ್ಲಿ ತಳ್ಳಲ್ಪಟ್ಟಿರುವುದು ಅವರಿಗೂ ಗೋಚರಿಸಿತು. ಮತದಾನದ ದಿನದಂದು ಬಿಜೆಪಿ ಕಾರ್ಯಕರ್ತರು ಬಹುತೇಕ ಕಡೆಗಳಲ್ಲಿ ವಿಶ್ರಾಂತಿ ಅನುಭವಿಸುತ್ತಿದ್ದು ಕಂಡಿತು. ಆದರೆ ಹೆಂಡ, ಹಣ ಹಂಚುವಲ್ಲಿ ಅವರೇನು ಹಿಂದೆ ಉಳಿಯಲಿಲ್ಲ.



ದೇವೇಗೌಡರು ಗೆದ್ದದ್ದಾರೆ ಮೂರನೇಯ ಶಕ್ತಿಗೆ ಹೆಚ್ಚಿನ ಚಾಲನೆ ಸಿಗುವುದು, ಕರ್ನಾಟಕದಲ್ಲಿ ಜನತಾದಳದ ಬಣಗಳು ಒಂದಾಗಿ, ಪರ್ಯಾಯ ರೂಪುಗೊಳ್ಳುವುದು ಎಂಬುದು ಕಾಂಗ್ರೆಸ್ - ಬಿಜೆಪಿಗಳಿಗೆ ಆತಂಕದ ವಿಷಯವಾಗಿತ್ತು. ಹೀಗಾಗಿ ಯಥೇಚ್ಛವಾಗಿ ಹಣ, ಹೆಂಡ, ತೋಳ್ಬಲ, ಅಧಿಕಾರದ ದುರ್ಬಳಕೆ ನಡೆದವು. ಈ ಕ್ಷೇತ್ರದ ಗಂಗಸಂದ್ರ ಹಳ್ಳಿಯಲ್ಲಿ ಹಂಚಲಾದ ಕಲಬೆರಕೆ ಮದ್ಯ ಸೇವಿಸಿ ಯುವಕನೊಬ್ಬ ಸಾವಿಗೀಡಾದ.

ಡಿಕೆಶಿ ಶಾಸಕರಾಗಿರುವ ಸಾತನೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಗೂಂಡಾಪಡೆ ಜೆಡಿ(ಎಸ್) ಕಾರ್ಯಕರ್ತ ರಾಜು ಎಂಬಾತನ ಮೇಲೆ ಹಲ್ಲೆ ನಡೆಸಿ ಕೊಂದಿದೆ. ಚುನಾವಣಾ ಅಕ್ರಮ ಮತದಾನಕ್ಕೆಂದೇ ಮೈಸೂರು, ಬೆಂಗಳೂರು ನಗರ, ಮಂಡ್ಯ ಮುಂತಾದೆಡೆಗಳಿಂದ ಸಾವಿರಾರು ಜನರನ್ನು ಹಿಂದಿನ ದಿನಗಳಲ್ಲೇ ಕರೆತಂದು ಛತ್ರಗಳಲ್ಲಿ ಇಟ್ಟಿದ್ದು ಬಯಲಾಗಿದೆ. ಅಲ್ಲಿ ಕಾಂಗ್ರೆಸ್‌ನ ಪ್ರಚಾರದ ಕರಪತ್ರಗಳು, ವಿವಿಧ ಬ್ರಾಂಡ್‌ಗಳ ವಿಸ್ಕಿ, ಬ್ರಾಂದಿಗಳ ಬಾಟಲುಗಳು ದೊರೆತಿವೆ. ಸ್ವತಃ ದೇವೇಗೌಡರೇ ಕಾರ್ಯಕರ್ತರೊಂದಿಗೆ ಅಲ್ಲಿಗೆ ತೆರಳಿ ಖೊಟ್ಟಿ ಮತದಾರರನ್ನು ಹಿಡಿದುಕೊಟ್ಟಿದ್ದಾರೆ. ತಲಘಟ್ಟಪುರದ ಬಳಿಯ ತಾತಗುಣಿ ಗ್ರಾಮದಲ್ಲಿ ಮತದಾನ ಮಾಡಲು ಎರಡು ಲಾರಿಗಳ ತುಂಬಾ ಜನ ಬಂದಿದ್ದು, ಸಿಪಿಐ(ಎಂ) ಹಾಗೂ ಜನತಾದಳದ ಕಾರ್ಯಕರ್ತರ ಪ್ರತಿರೋಧದಿಂದಾಗಿ ನಿಂತಿತು. ಹೀಗೆ ಹಲವೆಡೆ ಯತ್ನಿಸಲಾಗಿದೆ.ಸರ್ಕಾರಿ ನೌಕರರು ಅವರ ಕುಟುಂಬದವರು ತನಗೆ ಮತ ನೀಡಬೇಕೆಂದು ಸಚಿವ ಡಿ.ಕೆ.ಶಿವಕುಮಾರ್ ಪತ್ರ ಬರೆದದ್ದನ್ನು ಚುನಾವಣಾ ಆಯೋಗ ತೀವ್ರವಾಗಿ ತರಾಟೆಗೆ ತೆಗೆದುಕೊಂಡು ಕ್ರಮವಹಿಸಬಹುದೆಂದು ಹೇಳಿದೆ. ಮತದಾನದ ದಿನದಂದು ನಮ್ಮ ತಂಡ ಗ್ರಾಮಾಂತರದಲ್ಲಿ ಸಂಚರಿಸುವಾಗ ನೋಡಿದ್ದು, ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಇದ್ದ ಜೀಪಿನಲ್ಲಿ ಕಾಂಗ್ರೆಸ್ ಕಾರ್ಯಕರ್ತನೊಬ್ಬ ಸದಾ ಅವರೊಂದಿಗೆ ಪ್ರಯಾಣಿಸುತ್ತಿದ್ದುದು ಗಮನಕ್ಕೆಬಂತು. ಆತ ಖೋಟಾ ಮತದಾನಕ್ಕೆ ಬಂದವರನ್ನು ಮತ ಹಾಕಲು ಬಿಡಬೇಕೆಂದು ವಾದಿಸುತ್ತಿದ್ದ. ಪ್ರತಿ ಕ್ಷೇತ್ರಗಳಲ್ಲಿಯೂ ಸಚಿವರು, ಶಾಸಕರು, ಎಂಎಲ್‌ಸಿಗಳು, ಕಾರ್ಪೋರೇಟರ್ ಹೀಗೆ ತಳವೂರಿ ಮತದಾನಕ್ಕೆ ಹುರಿಗೊಳಿಸುತ್ತಿರುವುದು ಕಂಡುಬಂತು. ಇವು ಆಡಳಿತ ಪಕ್ಷದ ಎಗ್ಗಿಲ್ಲದ ಗೂಂಡಾಗಿರಿ, ಅಕ್ರಮಗಳಿಗೆ ಆಡಳಿತ ಯಂತ್ರದ ಬಳಕೆಗೆ ಕೆಲ ಉದಾಹರಣೆಗಳು ಮಾತ್ರ.

ಕನಕಪುರದ ಈ ಚುನಾವಣೆಯಲ್ಲಿ ವ್ಯಾಪಕ ಹಿಂಸೆಯ ಭೀತಿ ಇತ್ತು. ಆದರೆ ಕಾಂಗ್ರೆಸ್‌ನ ಆಟಗಳಿಗೆ ಜನತೆಯ ಪ್ರತಿರೋಧವೂ ಪ್ರಬಲವಿದ್ದುದರಿಂದ ಅವು ಅಷ್ಟು ಸಾಗಿಲ್ಲ. ಈ ಫಲಿತಾಂಶದಿಂದ ಕಾಂಗ್ರೆಸ್-ಬಿಜೆಪಿ ಪಾಠ ಕಲಿಯುವುದಿಲ್ಲ, ಆದ್ದರಿಂದ ಪರ್ಯಾಯ ಹೋರಾಟಕ್ಕೆ ಮುಂದಾಗಲು ಇದು ಸ್ಫೂರ್ತಿ ತರಲಿ.

ರಾಜ್ಯದಲ್ಲಿಯೂ ಕೋಮುದಳ್ಳುರಿ ಹಬ್ಬಿಸುವ ಹವಣಿಕೆ

ಶಾಂತಿ ಸಾಮರಸ್ಯ ಕಾಪಾಡುವುದು ತುಂಬಾ ಅಗತ್ಯ

ಗೋದ್ರಾಬಳಿಯ ಸಬರಮತಿ ಎಕ್ಸ್‌ಪ್ರೆಸ್‌ನ ಮೇಲಿನ ಭೀಭತ್ಸ ಧಾಳಿಯನ್ನು ಖಂಡಿಸಲು ಕರೆನೀಡಿದ ಭಾರತ ಬಂದ್‌ಗೆ ಕರ್ನಾಟಕದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೆಲವು ಜಿಲ್ಲಾ ಕೇಂದ್ರಗಳಲ್ಲಿ ಬಂದ್ ನಡೆದ ವರದಿಯಾಗಿದೆ. ಆದರೆ ಕರ್ನಾಟಕದಲ್ಲಿ ಸಂಘಪರಿವಾರ ಬಿಜೆಪಿ ನಿರೀಕ್ಷಿಸಿದಂತೆ ಆಗಲಿಲ್ಲ. ಕೋಲಾರ, ಚಿಕ್ಕಮಗಳೂರು, ಅರಸೀಕೆರೆ, ಹೊಳೆಆಲೂರುಗಳಲ್ಲಿ ಗಲಭೆ ಎಬ್ಬಿಸಲು ಯತ್ನಿಸಲಾಗಿದೆ. ಕೆಲವೆಡೆ ಅಲ್ಪಸಂಖ್ಯಾತರ ಪ್ರಾರ್ಥನಾ ಮಂದಿರಗಳಿಗೆ ಕಲ್ಲುತೂರಲಾಗಿದೆ.

ಇದಾದ ನಂತರದಲ್ಲಿಯೂ ಮತೀಯ ದ್ವೇಷ ಹಬ್ಬಿಸಲು ಗಲಭೆ ಸೃಷ್ಟಿಸುವ ಪ್ರಯತ್ನಗಳು ನಿಂತಿಲ್ಲ. ಹಿಂಸೆ ಭುಗಿಲೇಳಲು ಏನಾದರೊಂದು ತಂತ್ರ ಹೂಡಲು ಕೋಮುವಾದಿಗಳ ಹುನ್ನಾರ ನಡೆದಿದೆ. ರಾಜಧಾನಿ ಬೆಂಗಳೂರಿನಲ್ಲಿ ಬಂದ್ ಆಗಲೇ ಇಲ್ಲ. ಆದರೆ ವಿಶ್ವ ಹಿಂದೂ ಪರಿಷತ್ ಕೆಲವು ಮಠಾಧೀಶರನ್ನು ಕಲೆಹಾಕಿ ಪ್ರತಿಭಟನಾ ಸಭೆಯನ್ನು ಯೋಜಿಸಿದೆ. ಅದರ ಆಹ್ವಾನ ಪತ್ರದಲ್ಲಿ ಘೋಷಿಸಿರುವುದು ಮತೀಯ ಉದ್ದೇಶದ ಕಿಚ್ಚುಹಚ್ಚುವ ಅಂಶಗಳನ್ನೇ.

ಆದುದರಿಂದ ಕರ್ನಾಟಕದ ಜನತೆ ಯಾವುದೇ ಮತಾಂಧರ ಮಾತುಗಳಿಗೆ ಸೊಪ್ಪುಹಾಕದೇ ಅವುಗಳನ್ನು ತಿರಸ್ಕರಿಸಬೇಕು. ವಿಫಲಗೊಳಿಸಬೇಕು. ಕೋಮುಸೌಹಾರ್ದತೆ - ಶಾಂತಿ ಕಾಪಾಡಿಕೊಳ್ಳಬೇಕು, ಬಜೆಟ್ ನಂತಹ ಆಘಾತಕಾರಿ ನಿರ್ಧಾರಗಳು ದೈನಂದಿನ

ಬಿಜೆಪಿಯೊಳಗಿನ ಕಚ್ಚಾಟ ತಾತ್ಕಾಲಿಕ ಶಮನ

ದೇಶದಲ್ಲಿ ಹಾಗೂ ರಾಜ್ಯದಲ್ಲಿ ಮತದಾನ ಮುಗಿಯುತ್ತಿದ್ದಂತೆಯೇ ಕರ್ನಾಟಕದ ಬಿಜೆಪಿ ಪಕ್ಷದಲ್ಲಿನ ಆಂತರಿಕ ಕಚ್ಚಾಟ ಭುಗಿಲೆದ್ದಿತು. 13 ಶಾಸಕರು ತಮಗೆ ಪ್ರತ್ಯೇಕ ಆಸನದ ವ್ಯವಸ್ಥೆ ಕಲ್ಪಿಸಬೇಕೆಂದು ಸಭಾಧ್ಯಕ್ಷರಿಗೆ ಪತ್ರ ಬರೆಯಲು ನಿರ್ಧರಿಸಿದ್ದರು. ಒಟ್ಟು 15 ಶಾಸಕರು ಹೊರ ಬರುವ ಯತ್ನ ನಡೆದಿರುವುದು ವರದಿಯಾಗಿದೆ: ಈ ಹಿಂದೆಯೇ ಬಿ.ಬಿ.ಶಿವಪ್ಪ ಒಳಗೊಂಡು 3 ಜನ ಬಂಡಾಯದ ಬಾವುಟ ಹಾರಿಸಿದ್ದಾರೆ. ಶಿವಪ್ಪ ಉಚ್ಚಾಟಿತರಾಗಿ ಕಾಂಗ್ರೆಸ್ ಸೇರಿದ್ದಾರೆ. ಇನ್ನಿಬ್ಬರನ್ನು ತಾಂತ್ರಿಕ ಕಾರಣಗಳಿಂದ ಸಹಿಸಿ ಕೊಂಡು ಬರಲಾಗಿದೆ. ತುಂಬಾ ಆಸೆ ಇರಿಸಿಕೊಂಡು ಬಿಜೆಪಿ ಸೇರಿದ್ದ ರಾಜಶೇಖರ ಮೂರ್ತಿಯವರು ಪಕ್ಷ ತೊರೆಲು ಸಿದ್ಧರಾಗಿದ್ದಾರೆಂಬ ಸುದ್ದಿಯಿದೆ.

ಕೇಂದ್ರ ಸಚಿವ ಅನಂತ ಕುಮಾರ್, ಯಡಿಯೂರಪ್ಪ, ರಾಜ್ಯ ಅಧ್ಯಕ್ಷ ಸೇಡಂ, ಶೆಟ್ಟರ್ ಅವರ ಸರ್ವಾಧಿಕಾರ ಮತ್ತು ತಮ್ಮನ್ನು [illegible]

ಎಂದಿದ್ದರು ಬಂಡಾಯ ಹೂಡಿರುವ ಶಾಸಕರು: ಬಿಜೆಪಿ ಪಕ್ಷಕ್ಕೆ ದೇಶದಲ್ಲಿ ಮತ್ತು ಕರ್ನಾಟಕದಲ್ಲಿ ಭವಿಷ್ಯ ಮಸುಕಾಗುತ್ತಿರುವುದು ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬಿಜೆಪಿ ಪರ್ಯಾಯವಾಗದೇ ಕುಗ್ಗುತ್ತಿರುವುದು ಮುಂದಿನ ತಮ್ಮ ಭವಿಷ್ಯವೇನು ಎಂಬುದು ಅವರಿಗೆ ಕಾಡುತ್ತಿರುವ ಮುಖ್ಯ ಅಂಶ. ಈಗಲೇ ನಿರ್ಧರಿಸದೇ ಹೋದರೆ ಮುಂದೆ ತಮ್ಮನ್ನು ಯಾರೂ ಕೇಳದೇ ಹೋಗಬಹುದು ಎಂಬ ಆತಂಕ! ಹಾಗೆಯೇ ಜನತಾದಳ ಬೆಳೆಯುವ ಸಂದರ್ಭಗಳು ಹೆಚ್ಚುತ್ತಿರುವುದೂ ಬಿಜೆಪಿಯ ಕೇಂದ್ರ, ಸರ್ಕಾರದ ನೀತಿಗಳಿಗೆ ಜನತೆಯ ಆಕ್ರೋಶ ಹೆಚ್ಚುತ್ತಿರುವುದು ಸಹ ಅವರ ತೀರ್ಮಾನಕ್ಕೆ ಇಂಬು ನೀಡಿದೆ. ಇದರಿಂದ ಭಯಗೊಂಡ ಬಿಜೆಪಿ ನಾಯಕರು ಒಬ್ಬೊಬ್ಬ ಭಿನ್ನಮತೀಯರನ್ನು ಕರೆದು ಅವರ ಬೇಕು-ಬೇಡಗಳ ಪೂರೈಕೆ ಬಗ್ಗೆ ಸಂಧಾನ ಆರಂಭಿಸಿ ತೇಪೆ ಹಚ್ಚಲು ಯತ್ನಿಸಿದ್ದಾರೆ. ಇದು ಎಲ್ಲಿಯವರೆಗೆ? [illegible]

ಮೈಸೂರು ನಗರದ ಪ್ರತಿಷ್ಠಿತ ಬಡಾವಣೆಯಲ್ಲಿ ಒಂದಾದ ವಿಜಯನಗರದ ಸೆರಗಿಗೆ ತಳುಕು ಹಾಕಿಕೊಂಡಿರುವ ಹಿನಕಲ್ ಗ್ರಾಮದಲ್ಲಿರುವ ಹೋಲಿಫ್ಯಾಮಿಲಿ ಚರ್ಚ್‌ನ ಮೇಲೆ ಇದೇ ಫೆ. 17ರಂದು ಭಾನುವಾರ ಪ್ರಾರ್ಥನಾ ನಂತರ ಭಜರಂಗದಳವೆಂದು ಕರೆಯಲ್ಪಡುವ ಬಾಲವಿಲ್ಲದ ಕಪಿಸೇನೆ ಆಕ್ರಮಣ ಮಾಡಿದೆ. ಇದೊಂದು ಪೂರ್ವಯೋಜಿತ ಕೃತ್ಯವಾಗಿದ್ದು ಸಂಘಪರಿವಾರದ ಧಾರ್ಮಿಕ ಭಯೋತ್ಪಾದನೆಯ ರಾಷ್ಟ್ರೀಯ ಕಾರ್ಯಕ್ರಮದ ಒಂದು ಭಾಗವಾಗಿದೆ.

ಮೈಸೂರು ಹಿನಕಲ್ ಚರ್ಚ್ ಮೇಲೆ ಭಜರಂಗದಳದ ಧಾಳಿ



ಧಾಳಿ ವಿರೋಧಿ ಮೆರವಣಿಗೆ

ಅಂದು ಚರ್ಚಿನಲ್ಲಿ ಪ್ರಾರ್ಥನೆಯ ನಂತರ ಬಹುಪಾಲು ಜನ ಮನೆಗೆ ತೆರಳಿದ್ದು ಧರ್ಮಬೋಧೆ ಪಡೆಯುತ್ತಿದ್ದ ಮಕ್ಕಳ ಪಾಲಕರು ಹೊರಗಡೆ ಕಾಯುತ್ತಿದ್ದರು. ಸುಮಾರು ಅರವತ್ತರಷ್ಟಿದ್ದ ಗುಂಪು ಪ್ರಚೋದನಕಾರಿ ಘೋಷಣೆಗಳನ್ನು ಕೂಗುತ್ತಾ ಚರ್ಚಿನ ಆವರಣದೊಳಕ್ಕೆ ನುಗ್ಗಿ 'ನೀವು ಮತಾಂತರಕ್ಕೆ ಪ್ರಯತ್ನಿಸುತ್ತಿದ್ದೀರಿ' ಎಂದು ಆರೋಪಿಸುತ್ತಾ ಹಲ್ಲೆ ನಡೆಸಲು ಮುಂದಾಯಿತು.



ಗೀಡಾದ ಚರ್ಚ್

ಚರ್ಚಿನ ಪಾದ್ರಿ ಫಾದರ್ ವಿಲಿಯಂ ಸಹನೆಯನ್ನು ಕಳೆದುಕೊಳ್ಳದೇ ವಿಷಯವನ್ನು ಪ್ರಸ್ತಾಪಿಸಬೇಕೆಂದು ಗುಂಪನ್ನು ಒಳಗಡೆ ಆಮಂತ್ರಿಸಿದರೂ ಅವರ ಯಾವ ಮಾತನ್ನು ಕಿವಿಗೆ ಹಾಕಿಕೊಳ್ಳದೇ ಅಶ್ಲೀಲವಾಗಿ ದೂಷಿಸುತ್ತಾ ದುಂಡಾವರ್ತಿಗೆ ಇಳಿಯಿತು. ಮಹಿಳೆಯರು, ಮಕ್ಕಳೆನ್ನದೇ ಹಲ್ಲೆ ನಡೆಸಲಾಯಿತು. ಮಗುವೊಂದರ ಕೈ ಮೂಳೆ ಮುರಿಯಿತು. ಧಾರ್ಮಿಕ ತರಗತಿ ನಡೆಯುತ್ತಿದ್ದ ಚರ್ಚಿನ ಒಳಭಾಗದಲ್ಲಿ ಸುಮಾರು 80 ಮಕ್ಕಳಿದ್ದು ಹೊರಗಡೆ ಗಲಭೆ ನಡೆದುದ್ದನ್ನು ನೋಡಿ ಕಿರುಚಿಕೊಳ್ಳಲು ಪ್ರಾರಂಭಿಸಿದಾಗ ಶಿಕ್ಷಕರು ಬಾಗಿಲು ಭದ್ರಪಡಿಸಿ ಮುಂದಾಗುವ ಅನಾಹುತವನ್ನು ತಪ್ಪಿಸಿದರು.

ಘಟನೆ ವಿವರ

ಘಟನೆಯ ವಿವರ ನೀಡಿದ ಫಾದರ್ ವಿಲಿಯಂ ಹಾಗೂ ಯುವಕ ಸಂಘದ ಪದಾಧಿಕಾರಿಗಳು ಇದೊಂದು ಪೂರ್ವನಿಯೋಜಿತ ಕ್ರಮವಾಗಿದ್ದು ಈ ಹಿಂದೆ ಡಿಸೆಂಬರ್‌ನಲ್ಲಿ ಕೂಡ ಕ್ರೈಸ್ತ ಯುವಕರ ಮೇಲೆ ಹಲ್ಲೆ ನಡೆಸಲು ಯತ್ನಿಸಲಾಗಿತ್ತು ಎನ್ನುವ ವಿಷಯವನ್ನು ಬಹಿರಂಗಪಡಿಸಿದರು. ಕ್ರಿಸ್‌ಮಸ್‌ಗೆ ಮುನ್ನ ಸಂತಾಕ್ಲೋಸ್‌ನ ವೇಷಧರಿಸಿ ಕ್ರಿಸ್ತ ಜನಾಂಗದ ಕುಟುಂಬಗಳ ಮನೆಯಲ್ಲಿ ಹಾಡುವ (ಕೆರೋಲ್ ಸಾಂಗ್ಸ್) ಇದ್ದು ಇದೇ ಡಿಸೆಂಬರ್ ತಿಂಗಳಲ್ಲಿ ಕುಂಬಾರಕೊಪ್ಪಲಿನ ಕುಮಾರ್ ಎನ್ನುವ ವ್ಯಕ್ತಿ ತನ್ನ ಐದಾರು ಸಂಗಡಿಗರೊಂದಿಗೆ ಹಾಡುತ್ತಿದ್ದ ಯುವಕರನ್ನು ಬೆದರಿಸಿ ಅವರ ಉಪಕರಣಗಳನ್ನು ಮುರಿದುಹಾಕಿದ್ದು ಈ ಸಂಬಂಧ ಪೋಲೀಸ್‌ಗೆ ದೂರು ನೀಡಲಾಗಿತ್ತು. ಆದರೂ ಹಲ್ಲೆಕೋರರು ಆ ನಂತರ ಬಂದು ಕ್ಷಮೆ ಕೇಳಿದ್ದೂ ಇದೆ.

ಫೆ. 17 ರಂದು ನಡೆದ ಹಲ್ಲೆಯಲ್ಲಿ ಭಾಗವಹಿಸಿದ್ದ ಭಜರಂಗದಳದ ಕಾರ್ಯಕರ್ತರು ತಲೆಗೆ ಕೇಸರಿಪಟ್ಟಿ ಕಟ್ಟಿಕೊಂಡು ಗ್ರಾಮದ ನಾಲ್ಕೈದು ಯುವಕರನ್ನು ಪುಸಲಾಯಿಸಿ ತವ್ಮೊಂದಿಗೆ ಸೇರಿಸಿಕೊಂಡಿದ್ದು ಇಲ್ಲಿನ ಕುಖ್ಯಾತ ವಕೀಲ ಕೇಶವಮೂರ್ತಿಯೂ ಅವರ ಜೊತೆಗಿದ್ದ ಎನ್ನುವುದನ್ನು ಚರ್ಚಿನ ಸಿಬ್ಬಂದಿ ಹೇಳಿದ್ದಾರೆ; ಘಟನೆಯಲ್ಲಿ ಗುರುತಿಸಲಾಗಿರುವ ಐದು ಜನರನ್ನು ಮತ್ತು ವಕೀಲ ಕೇಶವಮೂರ್ತಿಯನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ವಕೀಲ ಕೇಶವಮೂರ್ತಿಯ ಬಂಧನವನ್ನು ಪ್ರತಿಭಟಿಸಿ ವಕೀಲರ ಒಂದು ಸಮೂಹ ಸೋಮವಾರ ನ್ಯಾಯಕಲಾಪವನ್ನು ಬಹಿಷ್ಕರಿಸಿತ್ತು. **ವಕೀಲರ ವೃತ್ತಿ ಪ್ರೀತಿಯು ಇಂತಹ ಗಹನವಾದ ಆರೋಪದ ಗಂಭೀರತೆಯನ್ನು ಪರಿಗಣಿಸದೇ ಇದ್ದದ್ದು ಜನಸಮೂಹದ ಮಧ್ಯೆ ಕೋಪಕ್ಕೆ ತುತ್ತಾಗಿದೆ.** ದೇಶದ ಸಂವಿಧಾನ, ಕಾನೂನು, ಧರ್ಮನಿರಪೇಕ್ಷತೆಗೆ ಕಿಂಚಿತ್ತೂ ಗೌರವಿಸದೇ ಅವುಗಳನ್ನು ಬುಡಮೇಲುಗೊಳಿಸಲು ಯತ್ನಿಸುವ ಈ ದೇಶದ್ರೋಹಿಗಳ ಕೃತ್ಯಗಳನ್ನು ದೃಢವಾಗಿ ಎದುರಿಸಬೇಕು. ಈ ಹಿಂದೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಕ್ರೈಸ್ತರ ಮೇಲೆ ಹಲ್ಲೆ ನಡೆದಾಗ ಮೈಸೂರು ನಗರದಲ್ಲಿ ಮತಾಂತರದ ಬಗ್ಗೆ ಇವೇ ಶಕ್ತಿಗಳು ದೊಡ್ಡ ದೊಡ್ಡ ಜಾಹೀರಾತು ಫಲಕಗಳನ್ನು ಪ್ರದರ್ಶಿಸಿದ್ದವು. ಸೇಂಟ್ ಫಿಲೋಮಿನರ ಚರ್ಚ್ ಮೇಲೆ ದಾಳಿಯನ್ನು ನಡೆಸುವ ಬೆದರಿಕೆ ಪತ್ರವನ್ನು ಇದೇ ಸಂಘ ಪರಿವಾರ ಬರೆದಿತ್ತು. 'ಸಹಮತ್'ನ ಕೋಮುಸೌಹಾರ್ದತೆ ಬಿತ್ತಿಪತ್ರಗಳ ಪ್ರದರ್ಶನದ ಮೇಲೆ ಭಜರಂಗದಳದ ಪುಂಡರು ಧಾಳಿ ನಡೆಸಿದ್ದರು.

ಮೈಸೂರು ನಗರದ ಕಾರ್ಖಾನೆಗಳು ತೀವ್ರಗತಿಯಲ್ಲಿ ಮುಚ್ಚುತ್ತಿದ್ದು, ನೂರಾರು ಜನ ಕೆಲಸ ಕಳೆದುಕೊಳ್ಳುತ್ತಿದ್ದಾರೆ. ತಂಬಾಕು ಮುಂತಾಗಿ ಬೆಳೆವ ರೈತರ ಫಸಲಿಗೆ ಬೆಲೆಯಿಲ್ಲ. ಈ ಸ್ಥಿತಿಯಲ್ಲಿ ಪ್ರಕ್ಷುಬ್ಧ ಮನಸ್ಸುಗಳನ್ನು ದಿಕ್ಕು ತಪ್ಪಿಸುವ ಕೋಮುವಾದಿ ಹುನ್ನಾರವನ್ನು ಜನತೆಯ ಐಕ್ಯ ಚಳುವಳಿಗಳ ಮೂಲಕ ಎದುರಿಸಿ ನಿಲ್ಲುವ ಅವಶ್ಯಕತೆ ಇದೆ.

ನಿಯೋಗದ ಭೇಟಿ

ಸಿಪಿಐ(ಎಂ) ಪಕ್ಷದ ಜಿಲ್ಲಾ ಸಂಘಟನಾ ಸಮಿತಿಯ ನಿಯೋಗವು ಉಗ್ರಪ್ಪ , ಪ್ರಭಾಕರ್, ಜಗದೀಶ್ ಮುಂತಾದವರ ನೇತೃತ್ವದಲ್ಲಿ ಹಿನಕಲ್ ಚರ್ಚ್‌ಗೆ ಭೇಟಿ ನೀಡಿ ಘಟನೆಯ ವಿವರಗಳನ್ನು ಸಂಗ್ರಹಿಸಿತು. ಆಕ್ರಮಣಕ್ಕೊಳಗಾಗಿರುವ ಜನತೆಗೆ ಸಾಂತ್ವನ ಹೇಳಿತು. ಅಲ್ಪಸಂಖ್ಯಾತರ ರಕ್ಷಣೆಗೆ ಸಿಪಿಐ(ಎಂ) ಸದಾ ಬೆಂಬಲವಾಗಿರುತ್ತದೆ ಎನ್ನುವ ಮಾತನ್ನು ನಿಯೋಗವು ಪುನರುಚ್ಚರಿಸಿತು.

ಹಿನಕಲ್ ಗ್ರಾಮದ ಈ ಚರ್ಚ್‌ನಲ್ಲಿ ನೊಂದಣಿಯಾದ ಸುಮಾರು 350 ಕ್ರೈಸ್ತ ಕುಟುಂಬಗಳಿದ್ದು ಸುತ್ತಮುತ್ತಲ ಹಳ್ಳಿಗಳ ಕೃಷಿ ಕೂಲಿಕಾರರು, ದುಡಿಯುವವರು ಆಗಿದ್ದಾರೆ.

ಈ ಭಂಜಕರ ಕೃತ್ಯವನ್ನು ಪ್ರತಿಭಟಿಸಿ ಫೆಬ್ರುವರಿ 19 ರಂದು ನಗರದಲ್ಲಿ 10 ಸಾವಿರಕ್ಕೂ ಅಧಿಕ ಜನರ ಬೃಹತ್ ಪ್ರತಿಭಟನಾ ರ್‍ಯಾಲಿಯನ್ನು ಕ್ರಿಶ್ಚಿಯನ್ ಅಲ್ಪಸಂಖ್ಯಾತರು ನಡೆಸಿದರು. ತಪ್ಪಿತಸ್ಥರ ಮೇಲೆ ಧೃಡ ಕ್ರಮವಹಿಸಲು ಆಗ್ರಹಿಸಿದರು. ಮುಖ್ಯಮಂತ್ರಿ ಕೃಷ್ಣ, ಗೃಹಸಚಿವ ಖರ್ಗೆಯವರು ಈ ಘಟನೆಯನ್ನು ಖಂಡಿಸಿ ಮಾತನಾಡಿದ್ದಾರೆ. ಬಂಧಿಸುವುದಾಗಿ ಹೇಳಿದ್ದಾರೆ. ಆದರೆ ಏನೇನು ಕ್ರಮ ವಹಿಸುತ್ತಾರೆ ಎಂದು ಕಾದು ನೋಡಬೇಕಾಗಿದೆ. ಅಲ್ಲದೇ ಜಿಲ್ಲಾ ಜಾತ್ಯಾತೀತ ಶಕ್ತಿಗಳು ರಾಜಕೀಯ ಪಕ್ಷಗಳು, ಸಂಘಟನೆಗಳು ಸೇರಿ ಮೈಸೂರಿನಲ್ಲಿ ಬೃಹತ್ ಸೌಹಾರ್ದತಾ ರ್‍ಯಾಲಿ ನಡೆಸಲು ತೀರ್ಮಾನಿಸಲಾಗಿದೆ. ○

ಪ್ರಥಮ ಪಿಯುಸಿ ಪರೀಕ್ಷೆ: ಸರ್ಕಾರದ ಗೊಂದಲದ ತೀರ್ಮಾನ

ಈ ವರ್ಷದಿಂದಲೇ ಪ್ರಥಮ ವರ್ಷದ ಪಿಯುಸಿಗೆ ಕಾಲೇಜು ಮಟ್ಟದ ಪರೀಕ್ಷೆ ಬದಲು ಜಿಲ್ಲಾ ಮಟ್ಟದ ಪರೀಕ್ಷೆ ನಡೆಸುವ ಆಜ್ಞೆಯನ್ನು ದಿಢೀರನೆ ಸರ್ಕಾರ ಹೊರಡಿಸಿದೆ. ಇದರಿಂದ ಹುಟ್ಟುವ ಸಮಸ್ಯೆಗಳ ಬಗ್ಗೆ ಸರ್ಕಾರ ಕಿಂಚಿತ್ತೂ ಯೋಚಿಸಿಲ್ಲ... ಈ ಗೊಂದಲದ ವಿರುದ್ಧ ನಡೆದ ಚಳುವಳಿ ವರದಿ.

ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಯಶಸ್ವಿ ಹೋರಾಟ

ಶಿಕ್ಷಣ ರಂಗ ಗೊಂದಲಪುರವಾಗುತ್ತಿರುವುದರ ಮತ್ತೊಂದು ಕಂತು ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಉಂಟಾದ ದಿಢೀರ್ ಸಮಸ್ಯೆ. ವರ್ಷದ ಆರಂಭದಿಂದ ಮೌನವಾಗಿ ಕುಳಿತಿದ್ದ ಪದವಿಪೂರ್ವ ಶಿಕ್ಷಣ ಮಂಡಳಿ, ಸರ್ಕಾರದ ನಿರ್ದೇಶನಕ್ಕೆ ಅನುಗುಣವಾಗಿ ಡಿಸೆಂಬರ್ 4 ರಂದು ಆದೇಶವೊಂದನ್ನು ಹೊರಡಿಸಿ ಈ ವರ್ಷದಿಂದ ಕಾಲೇಜುಮಟ್ಟದ ವಾರ್ಷಿಕ ಪರೀಕ್ಷೆಗೆ ಬದಲಾಗಿ ಜಿಲ್ಲಾ ಮಟ್ಟದಲ್ಲಿ ವಾರ್ಷಿಕಪರೀಕ್ಷೆ ನಡೆಸಲಾಗುವುದು ಎಂದು ಆದೇಶ ಹೊರಡಿಸಿತು. ಯಾವುದೇ ಪೂರ್ವಸೂಚನೆ, ಸಿದ್ಧತೆ, ಮೂಲಸೌಲಭ್ಯಗಳು, ಸಮಯಾವಕಾಶ ಏನನ್ನೂ ನೀಡದೆ ಹೊರಡಿಸಿದ ಈ ಆದೇಶದಿಂದ ತರಗತಿ ಪರೀಕ್ಷೆ ಎಂದು ಭಾವಿಸಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳು, ಬೋಧಿಸುತ್ತಿದ್ದ ಉಪನ್ಯಾಸಕರು ಕಕ್ಕಾಬಿಕ್ಕಿಯಾದರು, ಆತಂಕಕ್ಕೀಡಾದರು.

ಈ ಆದೇಶವನ್ನು ಸಮರ್ಥಿಸಿಕೊಳ್ಳಲು ಪದವಿಪೂರ್ವ ಶಿಕ್ಷಣಮಂಡಳಿ ಪ್ರಥಮ ಪಿಯುಸಿಯಲ್ಲಿ ವಿದ್ಯಾರ್ಥಿಗಳು ಸರಿಯಾಗಿ ಕಲಿಯುವುದಿಲ್ಲ, ಉಪನ್ಯಾಸಕರು ಕಲಿಸುವುದಿಲ್ಲ, ಅದನ್ನು ಉತ್ತಮ ಪಡಿಸಲು ಈ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳುತ್ತಾರೆ. ಮೂಲಸೌಲಭ್ಯಗಳೇ ಇಲ್ಲ. ವರ್ಷದ ಕೊನೆಯಲ್ಲಿ ಆದೇಶ ಹೊರಡಿಸಿದರೆ ವಿದ್ಯಾರ್ಥಿಗಳು ಉಪನ್ಯಾಸಕರು ತಯಾರಿ ನಡೆಸಿಕೊಳ್ಳುವುದು ಹೇಗೆ? ಸಂಜೆ ಕಾಲೇಜುಗಳು ಎರಡು ತಿಂಗಳು ತಡವಾಗಿ ಆರಂಭವಾಗಿವೆ ಅವರಿಗೆ ಪಾಠಗಳು ಮುಗಿದಿಲ್ಲ ಎನ್ನುವ ಹಲವಾರು ಪ್ರಶ್ನೆಗಳಿಗೆ ನಿರುತ್ತರರಾಗುತ್ತಾರೆ.


ಈ ಸಂದರ್ಭದಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಂದ ಮೂರು ಬಾರಿ ಪಿಯು ಮಂಡಳಿಗೆ ಮುತ್ತಿಗೆ ಹಾಕಲಾಯಿತು, ರಾಜ್ಯಾದ್ಯಂತ ಉಪನಿರ್ದೇಶಕರ ಕಛೇರಿಗಳ ಮುತ್ತಿಗೆ ಕಾರ್ಯಕ್ರಮ ನಡೆಯಿತು. ಪ್ರತಿಭಟನೆ ಸಮಯದಲ್ಲಿ ಎಸ್‌ಎಫ್‌ಐ ಮತ್ತು ವಿದ್ಯಾರ್ಥಿಗಳ ನಿಯೋಗದೊಡನೆ ಮಾತನಾಡಿದ ನಿರ್ದೇಶಕರು ಜಿಲ್ಲಾ ಮಟ್ಟದಲ್ಲಿ ಪ್ರಶ್ನೆ ಪತ್ರಿಕೆ ತಯಾರು ಮಾಡುವಾಗ ಕಾಲೇಜುಗಳಲ್ಲಿ ಮುಗಿದಿರುವ ಪಾಠಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು, ಮೌಲ್ಯಮಾಪನ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗುವುದು ಮತ್ತು ಮುಂದಿನ ವರ್ಷದಿಂದ ಮೂಲಸೌಲಭ್ಯ, ಉಪನ್ಯಾಸಕರ ನೇಮಕಾತಿಯ ಕಡೆ ಗಮನ ಹರಿಸಲಾಗುವುದು ಎಂದು ಭರವಸೆ ನೀಡಿದರು.

- ಟಿ.ಎಲ್. ಕೃಷ್ಣೇಗೌಡ



ವಿದೇಶಿಯರಿಗೆ ರಿಯಾಯಿತಿ ಬಡ ಭಾರತೀಯನಿಗೆ ಇನ್ನಷ್ಟು ಹೊರೆ

ವಿದೇಶಿ ಕಂಪೆನಿಗಳು ನೀಡಬೇಕಾದ ತೆರಿಗೆಯನ್ನು ಶೇ. 48ರಿಂದ 40ಕ್ಕೆ ಇಳಿಸಿದ ಕೇಂದ್ರ ಆರ್ಥಿಕ ಬಜೆಟ್ಟು ಬಡವರು ಉಪಯೋಗಿಸುವ ಸೀಮೆಎಣ್ಣೆ ದರವನ್ನು ಲೀಟರಿಗೆ 1.50 ಪೈಸೆ ಹೆಚ್ಚಿಸಿದೆ. ಜನಸಾಮಾನ್ಯರು ಉಪಯೋಗಿಸುವ ಗ್ಯಾಸ್ ಸಿಲೆಂಡರ್ ಒಂದಕ್ಕೆ 40 ರೂ



ಹೆಚ್ಚಿಸಿದರೆ,ಅಂತರ್ದೇಶಿ ಪತ್ರ, ಕವಲ್ ಇತರೆ ಅಂಚೆ ವಸ್ತುಗಳ ದರವನ್ನು ತೀವ್ರವಾಗಿ ಹೆಚ್ಚಿಸಿದೆ. ಶ್ರೀಮಂತರು ಮತ್ತೇರಿಸಿಕೊಳ್ಳುವ 'ಜಾನಿವಾಕರ್' ಎಂಬ ವಿದೇಶಿ ವಿಸ್ಕಿಗೆ ಆಮದು ಸುಂಕವನ್ನು ಶೇ. 28ರಷ್ಟು ಕಡಿಮೆ ಮಾಡಿದ್ದಾರೆ.

(ಬಹುಶಃ ಯಶವಂತ್ ಸಿನ್ಹಾ ಅವರ 'ಬ್ರಾಂಡು' ಅದೇ ಇರಬೇಕೆನೋ?) ವಿವಿಧ ವಸ್ತುಗಳ ಮೇಲಿನ ಆಮದು ಶುಲ್ಕದ ಒಟ್ಟು ಕಡಿತ 11,652 ಕೋಟಿರೂ! ಅಂದರೆ ಬಿಜೆಪಿ ಸರ್ಕಾರದ ಪರವಾಗಿ ಯಶವಂತ ಸಿನ್ಹಾರವರು ಮಂಡಿಸಿದ 2002-2003ನೇ ಸಾಲಿನ ಬಜೆಟ್ಟು ಯಾರ ಪರವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಆಹಾರ ಧಾನ್ಯ ಮತ್ತು ವಿದೇಶಿ ವಿನಿಮಯದ ದಾಸ್ತಾನು ಏರುತ್ತಿದೆ. ಇದು ಆರ್ಥಿಕ ಬೆಳವಣಿಗೆಯನ್ನು ಸೂಚಿಸುತ್ತಿದೆ ಎಂದು



ಯಶವಂತ್ ಸಿನ್ಹಾ ಬಡಾಯಿಕೊಚ್ಚಿದ್ದಾರೆ. ಆಹಾರ ಧಾನ್ಯದ ದಾಸ್ತಾನು ಹೇಗೆ ಹೆಚ್ಚಾಯಿತೆಂದು ಯಶವಂತ ಸಿನ್ಹಾರವರಿಗೆ ತಿಳಿದಿಲ್ಲವೆ? ರೇಶನ್ ಅಂಗಡಿಗಳಲ್ಲಿ ದರಗಳನ್ನು ಹೆಚ್ಚಿಸಿ, ಬಡಜನರಿಗೆ ಕೆಲಸವಿಲ್ಲದೆ, ಬಹುತೇಕ ಜನರು ಆಹಾರಧಾನ್ಯಗಳನ್ನು ಕೊಳ್ಳಲಾಗದೆ ದಾಸ್ತಾನು ಹೆಚ್ಚಿದೆಯೇ ಹೊರತು ಆರ್ಥಿಕ ಬೆಳವಣಿಗೆಯಿಂದಲ್ಲ.

ಆಹಾರ ಧಾನ್ಯ ದಾಸ್ತಾನಿನ ಮೂಲಕ ಆರ್ಥಿಕ ಬೆಳವಣಿಗೆ ಸಾಧಿಸಬೇಕಾದರೆ, ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಬೇಕು. ಅಂದರೆ, 'ಕೂಲಿಗಾಗಿ ಕಾಳು' ಯೋಜನೆ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ, ರಸ್ತೆ ಸಣ್ಣ ನೀರಾವರಿ ಮೊದಲಾದ ಕಾಮಗಾರಿಗಳನ್ನು ಕೈಗೆತ್ತಿಕೊಂಡರೆ ಮಾತ್ರ ನಿರುದ್ಯೋಗಿಗಳಿಗೆ ಕೆಲಸ ಸಿಗುತ್ತದೆ ಹಾಗೂ ಉತ್ಪದಾನೆ ಸಾಗಾಣಿಕೆ ಮತ್ತು ಮಾರುಕಟ್ಟೆಗೆ ಅನುಕೂಲವಾಗುತ್ತದೆ. ಇದರಿಂದ ಆರ್ಥಿಕ ಬೆಳವಣಿಗೆ ಸಾಧಿಸಲು ಸಾಧ್ಯವಾಗುತ್ತದೆ. ಇಂತಹ ಯಾವುದೇ ಸೂಚನೆಗಳು ಬಜೆಟ್‌ನಲ್ಲಿ ಇಲ್ಲ.

ಬದಲಾಗಿ ಆಹಾರಧಾನ್ಯಗಳು ದಾಸ್ತಾನಿದೆ

(processement system)ಯನ್ನು ಕಿತ್ತುಹಾಕಲಾಗಿದೆ. ಈ ಮೊದಲು ರೈತರು ಸಂಕಷ್ಟದಲ್ಲಿರುವಾಗ ಕನಿಷ್ಠ ಬೆಂಬಲ ಬೆಲೆ ನೀಡಿ ಅವರು ಬೆಳೆದ ಕೃಷಿ ಉತ್ಪಾದನೆಗಳನ್ನು ಸರಕಾರವೇ ಖರೀದಿಸುತ್ತಿತ್ತು. ಇನ್ನು ಮುಂದೆ ಅಂತಹ ವ್ಯವಸ್ಥೆ ಇರುವುದಿಲ್ಲ. ರೈತರು ಬೆಳೆದ ಬೆಳೆಗಳಿಗೆ ಬೆಲೆ ಕುಸಿಯುತ್ತಿರುವ ಈ ಸಂದರ್ಭದಲ್ಲಿ ರೈತರಿಗೆ ಹೊರಲಾರದ ಹೊರೆಯಾಗಲಿದೆ. ಅಲ್ಲದೆ ಅವರು ಉಪಯೋಗಿಸುವ ಗೊಬ್ಬರದ ಮೇಲಿನ ಸಬ್ಸಿಡಿಯನ್ನು ಕಡಿಮೆ ಮಾಡಿ ಬೆಲೆ ಹೆಚ್ಚಿಸಲಾಗಿದೆ. ಗಾಯದ ಮೇಲೆ ಬರೆ!

ಮತ್ತಷ್ಟು, ಇನ್ನಷ್ಟು ಹೊರೆ ; ಬಿಜೆಪಿ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದ ನಂತರ ಮಧ್ಯಮ ವರ್ಗದ ಮಾತದಾರರಿಗೆ, ಆದಾಯ ತೆರಿಗೆಯಲ್ಲಿ ಇನ್ನಷ್ಟು ಹೊರೆ ಬಿದ್ದಿದೆ. ವರ್ಷಂಪ್ರತಿ ಬೆಲೆ ಏರಿಕೆಯಿಂದಾಗಿ ನಿಜವೇತನ (real wages)ದಲ್ಲಿ ಬೇಡಿಕೆಯನ್ನು ಸರಕಾರ ತಳ್ಳಿಹಾಕಿದೆ. ಹಿಂದೆ ಕಾರ್ಗಿಲ್ ಯುದ್ಧ ನಂತರ ಗುಜರಾತ್ ಭೂಕಂಪ ಹೆಸರಿನಲ್ಲಿ ಶೇ. 5 ರಷ್ಟು 'ಸರ್‌ಜಾರ್ಜ್' ಹಾಕಿದರೆ, ಈ ಬಾರಿ ದೇಶದ ಭದ್ರತೆಯ ಹೆಸರಿನಲ್ಲಿ ಅದನ್ನು ಮುದುವರಿಸಲಾಗುತ್ತಿದೆ. ಉಳಿತಾಯ ಮೇಲಿನ ಮಿತಿಯನ್ನು ಕಡಿತಗೊಳಿಸಿರುವುದರಿಂದ ಆದಾಯ ತೆರಿಗೆ ತೀವ್ರವಾಗಿ ಹೆಚ್ಚುತ್ತದೆ.


ಆದರೆ ಹಣ ಮಾಡಲೆಂದೇ ವಿದೇಶಕ್ಕೆ ತೆರಳಿದ ಅನಿವಾಸಿ ಭಾರತೀಯರು, ಈ ದೇಶದಲ್ಲಿ ಬಂಡವಾಳ ಹೂಡಿದರೆ ಅದರಲ್ಲಿ ಬರುವ ಬಡ್ಡಿ ಆದಾಯಗಳಿಗೆ 5 ಕೋಟಿ ಡಾಲರ್ (250 ಕೋಟಿ ರೂ) ವರೆಗೆ ಯಾವುದೇ ತೆರಿಗೆ ಇಲ್ಲ.

ಶ್ರೀಮತರನ್ನು ಇನ್ನಷ್ಟು ಶ್ರೀಮತರನ್ನಾಗಿಸುವ ಬಡ, ಮಧ್ಯಮ ವರ್ಗವನ್ನು ದೋಚುವ ಬಿಜೆಪಿ ಸರ್ಕಾರದ ಬಜೆಟ್‌ನ್ನು ಖಂಡತುಂಡವಾಗಿ ವಿರೋಧಿಸಬೇಕು.

ಅಡಿಗೆ ಮನೆಗೂ ಕನ್ನವೇ ಯಶವತ್‌ಸಿನ್ಹಾ?

ಅಡಿಗೆ ಅನಿಲ ಸಿಲೆಂಡರ್ (ಎಲ್.ಪಿ.ಜಿ) ಒಂದಕ್ಕೆ 40 ರೂಪಾಯಿ ಹೆಚ್ಚಳದ ಮೂಲಕ ರೂ. 8000 ಕೋಟಿ ಉಳಿತಾಯವನ್ನು ಯಶವಂತ್ ಸಿನ್ಹಾ ಮಾಡಿರುವುದಾಗಿ ಹೇಳಿ ತನ್ನ ಹೆಂಡತಿಯ ಮನ ಒಲಿಸಿದ್ದೇನೆಂದು ಹೇಳಿದ್ದಾರೆ. ಆದರೆ ಅವರ ಶ್ರೀಮತಿ ಗ್ಯಾಸ್ ಬೆಲೆ ಏರಿಕೆಗೆ ಅಸಮಧಾನ ವ್ಯಕ್ತಪಡಿಸಿರುವ ವರದಿಯಾಗಿದೆ. ಇದುವರೆಗೆ ಸೀಮೆ ಎಣ್ಣೆಗೆ ನೀಡುತ್ತಿದ್ದ ಶೇ. 35 ರಷ್ಟು ಸಬ್ಸಿಡಿಯನ್ನು ಶೇ. 33.3ಕ್ಕೆ ಅಂತೆಯೆ ಅಡಿಗೆ ಅನಿಲಕ್ಕೆ ನೀಡಲಾಗುತ್ತಿದ್ದ, ಶೇ. 40ರಷ್ಟು ಸಬ್ಸಿಡಿಯನ್ನು ಶೇ. 15ಕ್ಕೆ ಇಳಿಸಿದ್ದಾರೆ. ಸಿನ್ಹಾ, ಅಡಿಗೆ ಅನಿಲದ ಮೇಲೆ ಉಳಿದಿರುವ ಸಬ್ಸಿಡಿ ಕೇವಲ ಶೇ. 15 ರಷ್ಟು ಮಾತ್ರವಾಗಿದೆ, ಮುಂದಿನ ಬಜೆಟ್‌ನಲ್ಲಿ ಇದನ್ನು ತೆಗೆದು ಹಾಕಿ ಬಿಟ್ಟರೆ, ವಾಣಿಜ್ಯ ಅಡಿಗೆ ಅನಿಲಕ್ಕೂ ಗೃಹಬಳಕೆ ಅನಿಲಕ್ಕೂ ವ್ಯತ್ಯಾಸವೇ ಇರದು ಆ ಮೂಲಕ ದುರ್ಬಳಕೆ ತಡೆಯಬಹುದೆಂಬ ವಾದ ಮಂಡಿಸಬಹುದು.

ಒಟ್ಟಾರೆ ಈ ಏರಿಕೆಯ ಮೂಲಕ ಬಡವ ಹಾಗೂ ಮಧ್ಯಮ ವರ್ಗದ ಮನೆಗಳ ಅಡಿಗೆ ಮನೆಗೂ ಕನ್ನ ಹಾಕಿದ್ದಾರೆ, ಯಶವಂತ ಸಿನ್ಹಾರವರು.



ಗೋದ್ರಾ ಘಟನೆ - ಗುಜರಾತ್ ಹಿಂಸಾಚಾಲಕ್ಕೆ ಖಂಡನೆ
ಕರಸೇವಕರ ಜಮಾವಣೆ ತಡೆಯಲೇಬೇಕು
ವಿಶ್ವಹಿಂದೂ ಪರಿಷತ್‌ನ ಛಿದ್ರಕಾರಿ ಚಟುವಟಿಕೆಗಳನ್ನು ನಿಲ್ಲಿಸಿ

ಮಾರ್ಚ್ 6-ರಾಷ್ಟ್ರೀಯ ಏಕತಾ ದಿನ ಆಚರಿಸಲು ಕರೆ

ಮಾರ್ಚ್ 15 ರಿಂದ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸಲು ವಿಶ್ವ ಹಿಂದೂ ಪರಿಷತ್ತಿನ ಕರೆಯ ಹಿನ್ನೆಲೆಯಲ್ಲಿ, ಅಯೋಧ್ಯೆಗೆ ಕರ ಸೇವಕರನ್ನು ಜಮಾಯಿಸಲು ಯತ್ನಿಸುತ್ತಿರುವ ಕಾರಣ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಅಯೋಧ್ಯೆಯಲ್ಲಿ ವಿಹೆಚ್‌ಪಿ ನಿರ್ಮಿಸಿರುವ ಕ್ಯಾಂಪ್‌ಗಳಲ್ಲಿ ದೊಡ್ಡ ಸಂಖ್ಯೆಯ ಜನ ಜಮಾವಣೆ ಆಗಿದ್ದಾರೆ.

ಕಟ್ಟಡ ಸಾಮಗ್ರಿಗಳನ್ನು ರವಾನಿಸಲು ಹಾಗೂ ಮಾರ್ಚ್ 15 ರಂದು ಕಾನೂನು ಬಾಹಿರವಾಗಿ ನಿರ್ಮಾಣ ಕಾರ್ಯ ಪ್ರಾರಂಭಿಸುವ ತನ್ನ ನಿಲುವಿಗೆ ವಿಹೆಚ್‌ಪಿ ಬಿಗಿ ಪಟ್ಟು ಹಿಡಿದಿದೆ. ಪ್ರಧಾನ ಮಂತ್ರಿಗಳು ಕರೆದಿದ್ದ ಸರ್ವಪಕ್ಷಗಳ ಸಭೆಯು ಈ ಬೆಳವಣಿಗೆ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದೆ. ಅಯೋಧ್ಯೆಯಲ್ಲಿ ಜಮಾವಣೆ ತಡೆಯಲು ಕೇಂದ್ರ ಸರ್ಕಾರ ತುರ್ತು ಮಧ್ಯ ಪ್ರವೇಶ ಮಾಡಬೇಕು, ಇಲ್ಲವಾದಲ್ಲಿ 1992 ರ ಡಿಸೆಂಬರ್ ಘಟನೆ ಮರುಕಳಿಸಬಹುದೆಂದು ಬಹುತೇಕ ಪಕ್ಷಗಳು ಒತ್ತಾಯಿಸಿದವು.

ಗುಜರಾತ್ ಸರ್ಕಾರ ತನ್ನ ರಾಜ್ಯದಿಂದ ಜನರನ್ನು ಅಣಿನೆರೆಸಲು ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುತ್ತಿದೆ. **ಅಯೋಧ್ಯೆಯಲ್ಲಿ ಸೇರುತ್ತಿರುವ ಧಾರ್ಮಿಕ ಜಮಾವಣೆ ಎಂದು ಕರೆಯುವುದು ನೆಪವಾಗುತ್ತದೆ. ಏಕೆಂದರೆ ಕೋರ್ಟ್ ಆದೇಶ ಉಲ್ಲಂಘಿಸಿ ಕಾನೂನುಬಾಹಿರ ನಿರ್ಮಾಣ ಪ್ರಾರಂಭಿಸಲು ಈ ಜಮಾವಣೆ ನೆರೆದಿರುವುದು.** ಈಗಾಗಲೇ ಕರಸೇವಕರ ಓಡಾಟ ಬಹಳಷ್ಟು ಆತಂಕ ಹಾಗೂ ಅಹಿತಕರ ಘಟನೆಗಳಿಗೆ ಎಡೆ ಮಾಡಿದೆ, ಅತ್ಯಂತ ಆಘಾತಕಾರಿ ಯಾದದ್ದು ಗೋದ್ರದಲ್ಲಿ ನಡೆದಿದೆ.

ಹೇಳಿಕೆಯೊಂದೇ ಸಾಲದು

ಕೇಂದ್ರಸರ್ಕಾರದ ಅಧೀನದಲ್ಲಿರುವ ಜಾಗದಲ್ಲಿ ಮಂದಿರ ನಿರ್ಮಾಣಕ್ಕೆ ಅವಕಾಶ ನೀಡೆವು, ಯಥಾಸ್ಥಿತಿಯನ್ನು ಕಾಪಾಡುತ್ತೇವೆ ಎಂಬ ಹೇಳಿಕೆ ಮಾತ್ರ ಸಾಲದು. ಅಯೋಧ್ಯೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಜನ ಸೇರಿಕೊಳ್ಳದಂತೆ ನೋಡಿಕೊಳ್ಳುವ ಜವಾಬ್ದಾರಿ ಕೇಂದ್ರ ಸರ್ಕಾರದ್ದು. **ಅಯೋಧ್ಯೆಯಲ್ಲಿ ವಿಹೆಚ್‌ಪಿಯ ಜಮಾವಣೆಯನ್ನು ನಿಲ್ಲಿಸಲು ತುರ್ತು ಕ್ರಮ ಜರುಗಿಸ ಬೇಕು. ಇದಕ್ಕೆ ಸಮರ್ಪಕ ಆಡಳಿತ ಕ್ರಮಗಳನ್ನು ಜರುಗಿಸಬೇಕು, ನಿಷೇಧಾಜ್ಞೆಗಳನ್ನು ಹೇರಬೇಕು.**

ಉತ್ತರ ಪ್ರದೇಶದಲ್ಲಿ ಸದ್ಯ ಚುನಾಯಿತ ಸರ್ಕಾರವಿಲ್ಲ, ರಾಜನಾಥ್ ಸಿಂಗ್ ನೇತೃತ್ವದ ಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಅಲ್ಲಿನ ಆಡಳಿತಕ್ಕೆ ಅಗತ್ಯ ಕ್ರಮ ಜರುಗಿಸಲು ನಿರ್ದೇಶಿಸಬೇಕು ಹಾಗೂ ಎಲ್ಲಾ ಸಹಾಯ ನೀಡ ಬೇಕು. ಅಯೋಧ್ಯೆ ಯಲ್ಲಿ ಮತ್ತೊಂದು ವಿಚ್ಛಿದ್ರಕಾರಿ ಘಟನೆ ಯನ್ನು ದೇಶ ಸಹಿಸಲಾರದು, ಅಂತಹ ಘಟನೆ ರಾಷ್ಟ್ರೀಯ ಏಕತೆಗೆ ಗಂಭೀರ ಪೆಟ್ಟು ನೀಡಲಿದೆ.

ಪರಿಸ್ಥಿತಿಯ ಗಂಭೀರತೆಯನ್ನು ಮನಗಂಡು, ಮಾರ್ಚ್ 6 ರಂದು ರಾಷ್ಟ್ರೀಯ ಏಕತಾ ದಿನವನ್ನು ಆಚರಿಸಲು ಜಂಟಿಯಾಗಿ ಎಡಪಕ್ಷಗಳು ಕರೆ ನೀಡಿವೆ. ಕಾನೂನನ್ನು ಎತ್ತಿ ಹಿಡಿದು, ಅಯೋಧ್ಯೆಯಲ್ಲಿ ವಿಹೆಚ್‌ಪಿಯ ಜಮಾವಣೆಯನ್ನು ತಡೆಯಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಅಂದು ದೇಶಾದ್ಯಂತ ರ್‍ಯಾಲಿ ಹಾಗೂ ಬಹಿರಂಗ ಸಭೆಗಳನ್ನು ಸಂಘಟಿಸಲಾಗುವುದು. ಅಲ್ಲದೇ ಗುಜರಾತ್‌ನಲ್ಲಿ ಗಲಭೆಗ್ರಸ್ತ ಪ್ರದೇಶಗಳೆಂದು ಘೋಷಿಸಿ ಸೈನ್ಯಕ್ಕೊಪ್ಪಿಸಲು ಆಗ್ರಹಿಸಲಾಗುವುದು. ಎಲ್ಲಾ ವಿಭಾಗದ ಜನತೆಯು ದೊಡ್ಡ ಪ್ರಮಾಣದಲ್ಲಿ ಆ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಕೋಮುವಾದಿಗಳ ಈ ದುಷ್ಟ ಯೋಜನೆ ಜಾರಿಯಾಗದಂತೆ ನೋಡಿಕೊಳ್ಳಬೇಕು. ಎಲ್ಲರೂ ಸೇರಿ ರಾಷ್ಟ್ರೀಯ ಐಕ್ಯತೆಯನ್ನು ಹಾಗೂ ಕೋಮುಸೌಹಾರ್ದತೆಯನ್ನು ರಕ್ಷಿಸಬೇಕು.

ಅಯೋಧ್ಯಾ ದಳ್ಳುರಿ

ಅಯೋಧ್ಯಾದ ದಳ್ಳುರಿ ಮತ್ತೆ ದೇಶವನ್ನು ವ್ಯಾಪಿಸತೊಡಗಿದೆ. ವಿವಾದಗ್ರಸ್ತ ಪ್ರದೇಶದಲ್ಲೇ ಮಂದಿರವನ್ನು ಕಟ್ಟುವ
ಪರಿಷತ್ ಕರಸೇವಕರನ್ನು ಜಮಾಯಿಸತೊಡಗಿದೆ. ಎಲ್ಲೆಡೆ ಪರಿಸ್ಥಿತಿಯನ್ನು ಪ್ರಕ್ಷುಬ್ಧಗೊಳಿಸಲಾಗುತ್ತಿದೆ. ಪ್ರಧಾನಿ
ಹೊಯ್ದಾಟದ ನಿಲುವು ತಾಳುತ್ತಿರುವಾಗಲೇ 'ಕರಸೇವಕರು' ಆಕ್ರಮಣಕಾರಿಯಾಗುತ್ತಿದ್ದಾರೆ. ಈ ಸರಣಿಯಲ್ಲಿ ಗುಜ
ಸಮಗ್ರತೆ, ಐಕ್ಯತೆ, ಧರ್ಮನಿರಪೇಕ್ಷತೆಯನ್ನು ನುಂಗಲು ಕೆನ್ನಾಲಿಗೆ ಚಾಚುತ್ತಿದೆ. ಚುನಾವಣೆಯಲ್ಲಿ ಬಿಜೆಪಿ ನೆಲ ಕಚ್ಚಿರು
ಸಿಂಗ್ ಸರ್ಕಾರ ರಚಿಸಬೇಕಾಗಿರುವುದು, ಬಜೆಟ್ಟಿನ ಭಾರಿ ಆಘಾತಕಾರಿ ಏಟುಗಳು ತೆರೆಗೆ ಸರಿದಿವೆ. ಅಯೋಧ್ಯಾ

ಭಾರತದ ಪ್ರಜಾತಂತ್ರ ವ್ಯವಸ್ಥೆಗೆ ಗಂಭೀರ ಬೆದರಿಕೆಯೊಡ್ಡುವ ತೀವ್ರ ಆತಂಕಕಾರಿ ವಿದ್ಯಮಾನಗಳು ಮತ್ತೆ ತಲೆ ಎತ್ತುವ ಸೂಚನೆಗಳು ಕಾಣುತ್ತಿವೆ. ದೇಶದ ಜಾತ್ಯಾತೀತ ಪರಂಪರೆಗೆ, ಪ್ರಜಾಪ್ರಭುತ್ವಕ್ಕೆ ಇದು ಒಂದು ಗಂಭೀರ ಸವಾಲಾಗಿದೆ.

'ಸಾಧು-ಸಂತರು' ಎನಿಸಿಕೊಂಡವರು ಮತ್ತೊಮ್ಮೆ ಒರೆಯಿಂದ ಖಡ್ಗವನ್ನು ಹೊರಗಿರಿದಿದ್ದಾರೆ. ತ್ರಿಶೂಲವನ್ನು ಎತ್ತಿ ಹಿಡಿದು ನಿಂತಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಹಾಗೂ ವಿಶ್ವ ಹಿಂದು ಪರಿಷತ್ (ವಿಹೆಚ್‌ಪಿ) ಮುಂತಾದ ಅದರ ಮತಾಂಧ ಕಾವಿ ಪರಿವಾರ ಇನ್ನೊಂದು ಹತಾಶ ಯತ್ನಕ್ಕೆ ಕೈ ಹಾಕಿದೆ.

ಐತಿಹಾಸಿಕ ಬಾಬರಿ ಮಸೀದಿ ಇದ್ದ ವಿವಾದಿತ ಪ್ರದೇಶವನ್ನು ಹಿಂದೂಗಳಿಗೆ (ಸಂಘ ಪರಿವಾರಕ್ಕೆ) ಒಪ್ಪಿಸಬೇಕೆಂದು ಆಗ್ರಹಿಸಿರುವ ಈ ಕಾವಿ ಪಡೆ ಮಾರ್ಚ್ 15 ರೊಳಗಾಗಿ ಮಂದಿರ ನಿರ್ಮಾಣಕ್ಕಿರುವ ಎಲ್ಲ ಅಡ್ಡಿಗಳನ್ನು ನಿವಾರಿಸದಿದ್ದಲ್ಲಿ 15 ರ ನಂತರ ಇದೇ ವಿವಾದಿತ ಸ್ಥಳದಲ್ಲಿ ಮಂದಿರ ನಿರ್ಮಾಣ ಕಾರ್ಯ ಆರಂಭವಾಗಲಿದೆ ಎಂದು ಘೋಷಿಸಿದೆ. ಈಗಾಗಲೇ ದೂರದ ಪ್ರದೇಶಗಳಿಂದ ಅಯೋಧ್ಯೆ ಕಡೆಗೆ ಉದ್ದೇಶಿತ ರಾಮ ಮಂದಿರದ, ಶಿಲೆಯಲ್ಲಿ ಕೆತ್ತಲ್ಪಟ್ಟ ಬಿಡಿ ಭಾಗಗಳನ್ನು ಹೊತ್ತು ತರಲಾಗುತ್ತಿದೆ. ನೂರು ದಿನಗಳ ಯಜ್ಞ ಆರಂಭಗೊಂಡಿದೆ. ದಿನವೊಂದಕ್ಕೆ 15 ಸಾವಿರದಂತೆ 'ಕರಸೇವಕ'ರು ಅಯೋಧ್ಯೆಗೆ ಬರುತ್ತಿದ್ದಾರೆ. ಒಟ್ಟು 10 ಲಕ್ಷ ಇಂತಹವರನ್ನು ಸೇರಿಸುವುದಾಗಿ ಘೋಷಿಸಲಾಗಿದೆ.

ದೇಶವನ್ನು ರಕ್ಷಿಸುವ ಹೊಣೆ ಹೊತ್ತ ಪ್ರಧಾನಿ (ಇವರ ದೃಷ್ಟಿಯಲ್ಲಿ ದೇಶವನ್ನು ರಕ್ಷಿಸುವುದು ಎಂದರೆ 'ದೇಶದ ಹೊರಗಿನವರ ಆಕ್ರಮಣವನ್ನು ತಡೆಯುವುದು' ಮತ್ತು ಆ ಕೆಲಸವನ್ನು ಸಹ ಇವರು ಸಮರ್ಥವಾಗಿ ಎದುರಿಸಲಾರರು ಎಂಬುದು ಕಾರ್ಗಿಲ್‌ನಲ್ಲಿ ಗಡಿ ಆಕ್ರಮಣ', 'ಪಾರ್ಲಿಮೆಂಟಿನ ಮೇಲೆ ಭಯೋತ್ಪಾದಕರ ಧಾಳಿ'ಗಳು ನಿರೂಪಿಸಿವೆ) ಅಟಲ್ ಬಿಹಾರಿ ವಾಜಪೇಯಿಯವರ ಹೇಳಿಕೆ, ನಡವಳಿಕೆಗಳು ಈ ಸಂದರ್ಭದಲ್ಲಿ ಪ್ರಜ್ಞಾವಂತ ಜನರನ್ನು ಬೆಚ್ಚಿ ಬೀಳಿಸಿವೆ.

ವಾಜಪೇಯಿ ಹೊಸರಾಗ

ಮಂದಿರ-ಮಸೀದಿ ವಿವಾದಕ್ಕೀಗ ನ್ಯಾಯಾಲಯದ ತೀರ್ಪನ್ನು ಕಾಯುವುದೊಂದೇ ಉಳಿದಿರುವ ಏಕೈಕ ಪರಿಹಾರ ಮಾರ್ಗ ಎಂದು ಆರು ಘೋಷಿಸಿಬಿಟ್ಟಿದ್ದಾರೆ! ಈ ಹೊಸ ರಾಗವನ್ನು ಹೊಸ ವೇಗದಲ್ಲಿ ಪಲುಕುತ್ತಿರುವ ಪ್ರಧಾನಿಯ ನಡವಳಿಕೆಗಳು ಸಂಶಯಾಸ್ಪದವಾಗಿದೆ. ಹಿಂದೂ-ಮುಸ್ಲಿಂ ಎರಡೂ ಸಂಘಟನೆಗಳ ಮುಖಂಡರು ಹಠಮಾರಿ ಧೋರಣೆ ಅನುಸರಿಸುತ್ತಿದ್ದಾರೆ ಹೀಗಾಗಿ ಈ ಸಮಸ್ಯೆಯ ಪರಿಹಾರಕ್ಕೆ ಸಂಧಾನ-ಮಾತುಕತೆಯ ಹಾದಿ ಮುರಿದುಬಿಟ್ಟಿದೆ ಎನ್ನುತ್ತಾರೆ ವಾಜಪೇಯಿ.

ಸುಳ್ಳು ಹೇಳುತ್ತಿರುವ ಪ್ರಧಾನಿ

ರಾಷ್ಟ್ರದ ಪ್ರಧಾನಿ ಈ ದೇಶದ ಜನರನ್ನು ತಪ್ಪು ಮಾಹಿತಿ ಮತ್ತು ಸುಳ್ಳಿನ ಮೂಲಕ ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಮತ್ತು ಬಾಬರಿ ಮಸೀದಿ ಕ್ರಿಯಾ ಸಮಿತಿಗಳು ತಮ್ಮೊಂದಿಗೆ ಈ ಬಗೆಗೆ ಯಾವುದೇ ಮಾತುಕತೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿವೆ.

ವಿಶ್ವ ಹಿಂದೂ ಪರಿಷತ್ತಿನ ಮುಖಂಡರು ತಾವು ಕೆಲವು ಬಾರಿ ಪ್ರಧಾನಿಯವರನ್ನು ಭೇಟಿಯಾಗಿದ್ದು ಬಿಟ್ಟರೆ ಯಾವುದೇ ರೀತಿಯ ದ್ವಿಪಕ್ಷೀಯ ಮಾತುಕತೆಯಲ್ಲಿ ನಾವು ಪಾಲ್ಗೊಂಡಿಲ್ಲ ಎಂದು ತಿಳಿಸಿದ್ದಾರೆ. ಪ್ರಧಾನಿಯವರ ಮಾತು-ಕೃತಿ ಎರಡೂ



ಸಾಗಾಟಕ್ಕೆ ಸಿದ್ದಗೊಂಡಿರುವ ಮಂದಿರದ ಬಿಡಿ ಭಾಗಗಳು

ರಾಷ್ಟ್ರೀಯ ಮಹತ್ವದ ಇಂತಹ ಗಂಭೀರವಾದ ವಿಚಾರದಲ್ಲಿ ಕೇಂದ್ರ ಸರ್ಕಾರ ಜನರನ್ನು, ಜನ ಪ್ರತಿನಿಧಿಗಳನ್ನು ವಿಶ್ವಾಸ ತೆಗೆದುಕೊಳ್ಳುವ ಯಾವ ಕೆಲಸವನ್ನು ಮಾಡುತ್ತಿಲ್ಲ. ವಿರೋಧ ಪಕ್ಷಗಳನ್ನು, ಪಾರ್ಲಿಮೆಂಟನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾಗಿಲ್ಲ. ರಾಷ್ಟ್ರೀಯ ಸಮಗ್ರತೆಗೆ ಸಂಬಂಧಿಸಿದ ಗಂಭೀರ ವಿಚಾರಗಳ ಬಗೆಗೆ ಚರ್ಚಿಸಲು ರಚಿಸಲ್ಪಟ್ಟ "ರಾಷ್ಟ್ರೀಯ ಸಮಗ್ರತೆ ಮಂಡಳಿ (National Intigration Council) ಎಂಬುದೊಂದು ಇದೆ ಎಂಬುದನ್ನೆ ವಾಜಪೇಯಿಯವರು ಜಾಣತನದಿಂದ ಮರೆತುಬಿಟ್ಟಿದ್ದಾರೆ!

ಆರ್.ರಾಮಕೃಷ್ಣ

'ಸಾಧು-ಸಂತ'ರು, ಸಂಘ ಪರಿವಾರದ ಮುಖಂಡರು ಈ ಸಮಸ್ಯೆಯ ಬಗೆಗೆ ಹೂಂಕರಿಸುತ್ತಲೇ ಬರುತ್ತಿದ್ದಾರೆ. 'ಹಲವು' ಅಂತಿಮ ಗಡುವುಗಳನ್ನು ಕೊಟ್ಟು ಗುಟುರು ಹಾಕಿದ್ದಾರೆ. ಈ ದೇಶದ 'ಸಮರ್ಥ ಪ್ರಧಾನಿ' ಏನು ಮಾಡುತ್ತಿದ್ದಾರೆ, ಏನು ಮಾಡಿದ್ದಾರೆ ಎಂದು ದೇಶದ ಜನರಿಗೆ ವಿವರಿಸಬೇಕಿದೆ. ಸಮರ್ಪಕವಾದ ಯಾವುದೇ ಮಾತುಕತೆ ನಡೆಯದೆ ಮಾತುಕತೆ ಮುರಿದು ಬಿದ್ದಿದೆ ಎಂದರೆ ಅರ್ಥವೇನು? ದಿಢೀರನೆ ಆಗಿರುವ ಈ 'ಜ್ಞಾನೋದಯ'ಕ್ಕೆ ಕಾರಣವಾದರೂ ಏನು.

'ನೀನು ಸತ್ತಂತೆ ಮಾಡು ನಾನು ಅತ್ತಂತೆ ಮಾಡುತ್ತೇನೆ'


'ನೀನು ಸತ್ತಂತೆ ಮಾಡು ನಾನು ಅತ್ತಂತೆ ಮಾಡುತ್ತೇನೆ' ಎಂಬ ತಂತ್ರವೊಂದಿದೆ. ಕಾವಿ ಪಡೆಯ ಆಟಗಳು ಈ ತಂತ್ರವನ್ನೇ ಆಧರಿಸಿವೆ. 1989ರ ಬಿಜೆಪಿಯ ಪಾಲಂಪುರ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ವಿವಾದಿತ ನಿವೇಶನವನ್ನು ಹಿಂದುಗಳಿಗೆ ಒಪ್ಪಿಸಬೇಕೆಂದು ನಿರ್ಣಯ ತೆಗೆದುಕೊಳ್ಳಲಾಗಿದೆ. ಮತ್ತು ಇದೂ ನ್ಯಾಯಾಲಯದಲ್ಲಿ ಇತ್ಯರ್ಥವಾಗುವ ವಿಷಯವಲ್ಲ ಎಂದೂ ಬಿಜೆಪಿ ನಿಲುವು ಅಂಗೀಕರಿಸಿದೆ. 'ಮಸೀದಿ ಮಂದಿರ' ವಿವಾದವನ್ನು ಸಂಕುಚಿತ ರಾಜಕೀಯ ಉದ್ದೇಶಗಳಿಗಾಗಿ, ಬಹುಸಂಖ್ಯಾತ ಹಿಂದುಗಳಲ್ಲಿ ಕೋಮು ಭಾವನೆ ಕೆರಳಿಸುವುದಕ್ಕಾಗಿ ಬಿಜೆಪಿ ವ್ಯಾಪಕವಾಗಿ ದುರ್ಬಳಕೆ ಮಾಡಿದೆ. ಸಾಕಷ್ಟು ದುರ್ಲಾಭ ಪಡೆದ ನಂತರ, ಈ 'ಮಸೀದಿ-ಮಂದಿರ' ವಿವಾದವೊಂದೇ, ತಾನು ಬಯಸುವ ಅಧಿಕಾರವನ್ನು ತಂದುಕೊಡಲಾರದು ಎಂಬುದು ಖಾತ್ರಿಯಾದಾಗ ತನ್ನ ತಂತ್ರವನ್ನು ಬದಲಿಸಿದೆ. ಆದರೆ ಬಿಜೆಪಿ, ಸಂಘ ಪರಿವಾರದ ಕಾವಿ ಪಡೆಗಳ ಮನಸ್ಸಿನಲ್ಲಿ ಐತಿಹಾಸಿಕ ಮಸೀದಿಯನ್ನು ಕೆಡವಿದ ವಿದ್ವಂಸಕ ಪ್ರವೃತ್ತಿಯೇ ಈಗಲೂ ಪ್ರೇತ ನೃತ್ಯ ಮಾಡುತ್ತಿದೆ.

ಯಥಾಸ್ಥಿತಿ ಕಾಯಲು ಸಿದ್ಧತೆಯಿಲ್ಲ

ಅಯೋಧ್ಯೆ ಫೈಜಾಬಾದ್‌ನ ಸುತ್ತಮುತ್ತ ಇಷ್ಟೆಲ್ಲಾ ಅವಾಂತರಗಳನ್ನು ಕಾವಿಪಡೆಗಳೂ ನಡೆಸಿದ್ದರೂ ಕೇಂದ್ರ ಎನ್.ಡಿ.ಎ. ಸರ್ಕಾರ ವಿವಾದಿತ ನಿವೇಶನದ ರಕ್ಷಣೆಗೆ, ಯಥಾ ಸ್ಥಿತಿ ಪಾಲನೆಗೆ ಸುಪ್ರೀಂ ಕೋರ್ಟ್ ನಿರ್ದೇಶನ ಇದ್ದರೂ ಅದರ ರಕ್ಷಣೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ವಿವಾದಿತ ನಿವೇಶನದ ಸುತ್ತಲು ಮಿಲಿಟರಿ ಪಡೆ ನಿಯೋಜಿಸಿ ಸೂಕ್ತ ಭದ್ರತಾ ವ್ಯವಸ್ಥೆ ಮಾಡುವು ದನ್ನು ಬಿಟ್ಟು ದಿವ್ಯ ನಿರ್ಲಕ್ಷ್ಯ ತೋರಲಾಗುತ್ತಿದೆ. **'ಮಾರ್ಚ್ 15ರ ವರೆಗೆ ಕಾಯೋಣ, ಏನಾಗುತ್ತದೆ ನೋಡೋಣ'** ಎನ್ನುತ್ತಾರೆ ಬಿಜೆಪಿ ರಾಷ್ಟ್ರಾಧ್ಯಕ್ಷ ಜನಾ ಕೃಷ್ಣಮೂರ್ತಿಯವರು.

ಚುನಾವಣೆ : ಜನರ ಚರ್ಚೆಯ ದಿಕ್ಕು ತಪ್ಪಿಸುವ ತಂತ್ರ

ಮಂದಿರದ ವಿಚಾರ ಅಧಿಕೃತವಾಗಿ ಚುನಾವಣೆಯ ವಿಷಯವಲ್ಲ. ಆದರೂ ಅದು ಚುನಾವಣೆಯ ವಿಷಯವಾಗಬೇಕು, ಜನರ ನಡುವೆ ಚರ್ಚೆಯಾಗಬೇಕು. ರೈತರ ಆತ್ಮಹತ್ಯೆ, ಬೀದಿ ಪಾಲಾಗುತ್ತಿರುವ ಕಾರ್ಮಿಕರ ಬದುಕು, ಸಾರ್ವಜನಿಕ ಆಸ್ತಿಗಳ ಅಗ್ಗದ ಮಾರಾಟ, ಲೂಟಿ, ಉದ್ಯೋಗ ಕಡಿತ, ನಿರುದ್ಯೋಗ ಹೆಚ್ಚಳ, ತೆಹಲ್ಕಾ ಹಗರಣ, ಶವಪೆಟ್ಟಿಗೆ ಹಗರಣ ಈ ಯಾವುದೂ ಚುನಾವಣಾ ವಿಚಾರವಾಗದಂತೆ ಬರಿ "ಭಯೋತ್ಪಾದನೆ - ಯುದ್ಧ'ಗಳ ವಿಚಾರವನ್ನು ಜನರ ತಲೆಯಲ್ಲಿ ಪ್ರಧಾನಿಯಾದ ವಾಜಪೇಯಿ ತುಂಬುತ್ತಿರುವಂತೆ ಇದೂ ಒಂದು ಚಾಣಾಕ್ಷ



ಅಯೋಧ್ಯೆಯತ್ತ ಜಾಥಾಗಳು

ಮಾರ್ಚ್ 15, 2002 ಏನಿದು ಗಡುವು!!

ಕಾಂಗ್ರೆಸ್‌ನ ದಿವಾಳಿಕೋರ ಆರ್ಥಿಕ ನೀತಿಗಳು, ಭ್ರಷ್ಟಾಚಾರ ಹಗರಣಗಳ ಕರ್ಮಕಾಂಡಗಳು ಜನರಲ್ಲಿ ಸೃಷ್ಟಿಸಿದ ಅತೃಪ್ತಿಯನ್ನು ಕೋಮುವಾದಿ ದಿಕ್ಕಿನಲ್ಲಿ ತಿರುಚಿ ಅಧಿಕಾರ ಗಳಿಸಿರುವ ಬಿಜೆಪಿ ನೇತೃತ್ವದ ಎನ್.ಡಿ.ಎ ಸರಕಾರ ಭ್ರಷ್ಟಾಚಾರ ಹಗರಣಗಳಲ್ಲಿ, ದೇಶವನ್ನು ದೋಚುವ, ದಿವಾಳಿ ಎಬ್ಬಿಸುವ ಆರ್ಥಿಕ ನೀತಿಗಳನ್ನು ಜಾರಿಮಾಡುವುದರಲ್ಲಿ ಕಾಂಗ್ರೆಸ್‌ನ್ನು ಮೀರಿಸಿದೆ. ಜನರ ಅತೃಪ್ತಿ ಎಲ್ಲೆಡೆ ವ್ಯಾಪಿಸುತ್ತಿದೆ.

ಇದೇ ಸಂದರ್ಭದಲ್ಲಿ ಲೋಕ ಸಭೆಗೆ ಉಪ ಚುನಾವಣೆಗಳು, ಉತ್ತರ ಪ್ರದೇಶ, ಪಂಜಾಬ್, ಉತ್ತರಾಂಚಲ್ ಮುಂತಾದ ರಾಜ್ಯಗಳಲ್ಲಿ [illegible] ಗಳಲ್ಲಿ ಬಿಜೆಪಿ ಮಿತ್ರ ಪಕ್ಷಗಳೂ ಮಣ್ಣು ಮುಕ್ಕಿದವು. ಅದರಲ್ಲಿಯೂ ವಿವಾದದ ಬಿಂದು ಇರುವ ಉತ್ತರ ಪ್ರದೇಶದಲ್ಲಿ ಬಿಜೆಪಿ ಉಳಿವು ಮಹತ್ವವೆಂದು ಮನಗಂಡ ಕಾವಿ ಪಡೆ ಅಧಿಕಾರದಲ್ಲಿರಲು ಯತ್ನಿಸುತ್ತಿದೆ. ಬಿಜೆಪಿ ನೇತೃತ್ವದಲ್ಲಿ ಅಲ್ಲಿನ ರಾಜ್ಯ ಸರ್ಕಾರದ ದುರಾಡಳಿತ-ಭ್ರಷ್ಟಾಚಾರ-ರಾಜಕೀಯ ಅಪರಾಧಿಕರಣ-ಜನರ ಬದುಕಿನ ಮೇಲಿನ ದಬ್ಬಾಳಿಕೆಗಳು, ಗೂಂಡಾಗಿರಿ, ಭಾರತೀಯ ಜನತಾ ಪಕ್ಷವನ್ನು ರಾಜ್ಯದಲ್ಲಿ ನಿರ್ಮೂಲನೆಯ ಹಾದಿಯಲ್ಲಿ ನಡೆಸಿತ್ತು. ಇಂತಹ ಸಂದರ್ಭದಲ್ಲಿ ನೆರವಿಗೆ ಬರದ ಮೇಲೆ ಅದೆಂತಹ ಸಂಘ ಪರಿವಾರ? ಅದೆಂತಹಾ ರಾಷ್ಟ್ರ ಪ್ರೇಮ?.

ಸದಕೆ ಬಿಜೆಪಿ ಕಾರ್ಯ ಸೂಚಿಯಲ್ಲಿ [illegible] ಪ್ರದೇಶದ ಚುನಾವಣೆಯ ವಿಷಯವಲ್ಲ ಎಂದು ಸಾರುತ್ತಲೇ ಅದನ್ನು ಚುನಾವಣಾ ವಿಷಯವನ್ನಾಗಿ ಮಾಡಲಾಯಿತು. ಸರ್ಕಾರದ ವಿರುದ್ಧ ಅಸಂತೃಪ್ತರಾದ ಜನರನ್ನು 'ಮಂದಿರ'ದ ಹೆಸರಿನಲ್ಲಿ ಕೆರಳಿಸಿ ಒಲಿಸಿಕೊಳ್ಳುವ ಕಾವಿ ಪಡೆಗಳ ಕುತಂತ್ರ ಇದಾಗಿತ್ತು.

ಜಾತ್ಯಾತೀತ-ಧರ್ಮ ಸಹಿಷ್ಣು- ಉದಾರ ಮನಸ್ಸಿನ ಬಹುಸಂಖ್ಯಾತ ಹಿಂದೂಗಳನ್ನು ಹಾಗೂ ಅಲ್ಪಸಂಖ್ಯಾತರನ್ನು ಒಲೈಸಲು 'ವಾಜಪೇಯಿ' ಎಂಬ 'ಮುಖವಾಡ'ವನ್ನು 'ಹಸೀ-ಬಿಸೀ ರಕ್ತದ ಉಗ್ರ ತರುಣ'ರನ್ನು ಸೆಳೆಯಲು ಅಡ್ವಾಣಿಯ 'ಮುಖ'ವನ್ನು ಬಳಸುವಂತೆ, 'ಮಸೀದಿ ಒಡೆಯಲು' ಅಡ್ವಾನಿಯನ್ನು ನಂತರ ಆ ಬಗ್ಗೆ 'ವಿಷಾಧಿಸಲು' ವಾಜಪೇಯಿಯನ್ನು ಬಳಸುವಂತೆ ಇದೂ ಕಾವಿ ಪಡೆಯ

ಖಾವಿ ಪಡೆಗಳ ಪಿತೂರಿ



ಟ್ಟು ಹಿಡಿದಿರುವ ವಿಶ್ವಹಿಂದೂ
ೇಯಿ ಮತ್ತು ಕೇಂದ್ರ ಸರ್ಕಾರ
ಹೊತ್ತಿ ಉರಿಯುತ್ತಿದೆ. ಭಾರತದ
ಉತ್ತರ ಪ್ರದೇಶದಲ್ಲಿ ಮುಲಾಯಂ
ದಲ್ಲಿನ ಆಟಗಳ ಬಗ್ಗೆ ಲೇಖನ.

ರಾಜಕೀಯ ತಂತ್ರಗಾರಿಕೆಯಾಯಿತು.

ಈ ಕಾವಿಪಡೆ ವಿಶ್ವಾಸಾರ್ಹವಲ್ಲ

ಆದರೂ ಕಾವಿ ಪಡೆಗಳ ದುಷ್ಟ ಯೋಜನೆಯನ್ನು ನಿರ್ಲಕ್ಷಿಸಲಾಗದು. ಏಕೆಂದರೆ ಮಂದಿರ ಪ್ರಶ್ನೆಯನ್ನು ಮತ್ತೆ ಅವರು ಎತ್ತಿದ್ದೆ ಒಂದು ಕಳ್ಳ ವಿಧಾನದ ಮೂಲಕ.

ನ್ಯಾಯಾಲಯದ ನಿರ್ದೇಶನ, 'ಭದ್ರತಾ ವ್ಯವಸ್ಥೆ' ಎಲ್ಲವನ್ನು ಉಲ್ಲಂಘಿಸಿ ವಿಶ್ವ ಹಿಂದೂ ಪರಿಷತ್ತಿನ ಅಂತರಾಷ್ಟ್ರೀಯ ಅಧ್ಯಕ್ಷ ಅಶೋಕಾ ಸಿಂಘಾಲ್, ಮಸೀದಿ ಒಡೆದು ರಾಮ ಮೂರ್ತಿ ಇಟ್ಟಿರುವ ಸ್ಥಳಕ್ಕೆ ಕಟಕಟೆ 'ಹಾರಿ ನೆಗೆದು' ಪೂಜೆ ಸಲ್ಲಿಸಿದರಂತೆ. ಇದೂ ಹಿಂದೂಗಳ ನಂಬಿಕೆಯ ಪ್ರಶ್ನೆ. ನ್ಯಾಯಾಲಯಕ್ಕೆ ಈ ವಿಚಾರ ತೀರ್ಮಾನಿಸುವ ಹಕ್ಕಿಲ್ಲ ಎಂದು ಅವರು ಬಹಿರಂಗವಾಗಿ ಸಾರುತ್ತಿದ್ದಾರೆ. ಮಂದಿರದ ಬಿಡಿ ಭಾಗಗಳನ್ನು ವಿವಾದಿತ ಸ್ಥಳದ ಸಮೀಪ ತರಲಾಗುತ್ತಿದೆ. ವಿವಾದಿತ ಸ್ಥಳವನ್ನು ಹಿಂದುಗಳಿಗೆ ಒಪ್ಪಿಸಲು ಆಗ್ರಹಿಸಿ, ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಲು ಜನವರಿ 20, 2001 ರಿಂದ ಜನವರಿ 26-2002ರವರೆಗೆ ಸಾಧು ಸಂತರ 'ಚೇತವಾಣಿ ಯಾತ್ರೆ' ನಡೆಸಲಾಗಿದೆ.

1992ರ ಡಿಸೆಂಬರ್ 6 ರಂದು ಬಾಬರಿ ಮಸೀದಿಯನ್ನು ಒಡೆಯುವ ಮುಂಚೆ ಇದೇ ಸಂಘ ಪರಿವಾರ, ಉತ್ತರ ಪ್ರದೇಶದ ಬಿಜೆಪಿ ಸರ್ಕಾರ ಸಹ ನ್ಯಾಯಾಲಯಕ್ಕೆ ಮಸೀದಿಗೆ ಯಾವುದೇ ಹಾನಿಯಾಗದಂತೆ ರಕ್ಷಿಸುವುದಾಗಿ ಮುಚ್ಚಳಿಕೆ ಬರೆದು ಕೊಟ್ಟಿತ್ತು ಎಂಬುದನ್ನು ಜನ ಮರೆತಿಲ್ಲ. ಸಂಘ ಪರಿವಾರದ ವಿಶ್ವಾಸಘಾತಕತನಕ್ಕೆ ಕೊನೆಯೇ ಇಲ್ಲ.

ಪರಿಹಾರದ ಜವಾಬ್ದಾರಿಯನ್ನು ನ್ಯಾಯಾಲಯ ಕೊರಳಿಗೆ ನೇತು ಹಾಕುವುದು!

ಕಾವಿ ಪಡೆಗಳು ಈ ಮತಾಂಧ ಚಳುವಳಿ ಹಬ್ಬಿದಂತೆ ಕೇಂದ್ರ ಎನ್.ಡಿ.ಎ. ಸರ್ಕಾರವನ್ನು ಉಳಿಸಿಕೊಳ್ಳಲು ಬಿಜೆಪಿ ತಾನೂ ಎನ್.ಡಿ.ಎ ಕಾರ್ಯಸೂಚಿಗೆ ಬದ್ಧ ಎಂದು ಚೀರಬೇಕಿದೆ. ಕೋಮುವಾದಿಗಳ ಆಟಾಟೋಪಗಳ ವಿರುದ್ಧ ಗಂಭೀರ ಎಚ್ಚರಿಕೆ ನೀಡದ, ಏನೊಂದೂ ಕ್ರಮ ಕೈಗೊಳ್ಳದ ಬಿಜೆಪಿ ನೇತೃತ್ವ ಸರಕಾರ ಸಮಸ್ಯೆ ಪರಿಹಾರದ ಜವಾಬ್ದಾರಿಯನ್ನು ಮಾತ್ರ ಈಗ ನ್ಯಾಯಾಲಯದ ಕೊರಳಿಗೆ ನೇತು ಹಾಕಿದೆ.

1989ರಲ್ಲಿ ಈ ವಿವಾದವನ್ನು ಪರಿಹರಿಸಲು ನ್ಯಾಯಾಲಯದ ತೀರ್ಪಿಗಾಗಿ ಕಾಯೋಣ ಎಂಬ ನಿಲುವು ತಳೆದ ಅಂದಿನ ರಾಷ್ಟ್ರೀಯ ರಂಗದ ವಿ.ಪಿ. ಸಿಂಗ್ ನೇತೃತ್ವದ ಸರಕಾರವನ್ನು ಬಿಜೆಪಿ ನಿರ್ದಾಕ್ಷಿಣ್ಯವಾಗಿ ಕೆಡವಿತು. ಲಾಲ್ ಕೃಷ್ಣ ಅಡ್ವಾಣಿಯವರ 'ರಥಯಾತ್ರೆ' ಎಂಬ ರಕ್ತಸಿಕ್ತ ಮತ ಯಾತ್ರೆ ರಾಷ್ಟ್ರದಲ್ಲಿ ಸಾವಿರಾರು ಅಮಾಯಕರನ್ನು, ಮುಗ್ಧ ಜನರನ್ನು ಬಲಿ ತೆಗೆದುಕೊಂಡಿತು ಎಂಬುದನ್ನು ಜನ ಮರೆತಿಲ್ಲ.

1992ರಲ್ಲಿ ಕಾಂಗ್ರೆಸ್ ಪ್ರಧಾನಿ ಪಿ.ವಿ. ನರಸಿಂಹರಾಯರು ತೋರಿದ ಘೋರ ನಿಷ್ಕ್ರಿಯತೆಯನ್ನೆ ಎನ್.ಡಿ.ಎ ಸರಕಾರವು

ನುಗ್ಗಿದ ಅಶೋಕ ಸಿಂಘಾಲ್ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳಲಾಗಿಲ್ಲ. ಬಹಿರಂಗವಾಗಿ ನ್ಯಾಯಾಂಗ ನಿಂದನೆ ಮಾಡುವವರ ವಿರುದ್ಧ, ಸಂವಿಧಾನ ಬಾಹಿರ, ಸಂವಿಧಾನ ವಿರೋಧಿ ಹೇಳಿಕೆ ಕೊಡುವವರ ವಿರುದ್ಧ, ಕಾನೂನು ಕೈಗೆ ತೆಗೆದುಕೊಳ್ಳುವೆವು ಎಂದು ಘೋಷಿಸುವವರ ವಿರುದ್ಧವೂ ಯಾವುದೇ ಕ್ರಮ ವಹಿಸಲಾಗಿಲ್ಲ.

ಕಳ್ಳ-ಕಳ್ಳರು ಸಂತೆಗೆ ಹೋದಂತೆ

ಭಾರತೀಯ ಜನತಾ ಪಕ್ಷದ ರಾಷ್ಟ್ರಾಧ್ಯಕ್ಷ ಜನಾ ಕೃಷ್ಣಮೂರ್ತಿಯವರು ವಿಹೆಚ್‌ಪಿಯನ್ನು ಬಿಜೆಪಿ ನಿಯಂತ್ರಿಸಲಾಗದು ಎನ್ನುತ್ತಾರೆ. ಬಿಜೆಪಿ ವಿಹೆಚ್‌ಪಿಯನ್ನು ನಿಯಂತ್ರಿಸಲಾಗದೆಂದು ಜಾರಿ ಕೊಳ್ಳಬಹುದು. ಆದರೆ ಕೇಂದ್ರ ಎನ್.ಡಿ.ಎ. ಸರ್ಕಾರದ ನೇತೃತ್ವ ವಹಿಸಿದ ಬಿಜೆಪಿಯ ರಾಷ್ಟ್ರಾಧ್ಯಕ್ಷರಾಗಿ ಈ ಮಾತು ಹೇಳಲು ಅವರಿಗೆ ನಾಚಿಕೆಯಾಗಬೇಕು. "ಹಿಂದುಗಳ ಪ್ರತಿನಿಧಿಯಾಗಿ ವಿಶ್ವ ಹಿಂದೂ ಪರಿಷತ್ ಮಾಡುತ್ತಿರುವುದು ಸರಿ" ಎನ್ನುತ್ತಾರೆ ಅವರು.

'ಒಬ್ಬ ಹಿಂದೂವಾಗಿ' ವಿಶ್ವ ಹಿಂದೂ ಪರಿಷತ್ ನಿಲುವನ್ನು ಅವರು ಬೆಂಬಲಿಸುತ್ತಾರಂತೆ. ಬಿಜೆಪಿ ರಾಷ್ಟ್ರಾಧ್ಯಕ್ಷರಾಗಿ ಅದನ್ನು ವಿರೋಧಿಸುತ್ತಾರಂತೆ!!. ಸೊಗಸಾಗಿದೆ ಕತೆ, ಕೇಳಲು. 'ಕಳ್ಳ ಕಳ್ಳರು ಸಂತೆಗೆ ಹೋದಂತಿದೆ' ಇದು.

ಬಿಜೆಪಿ ರಾಷ್ಟ್ರಾಧ್ಯಕ್ಷರು ದೇಶದ ಪ್ರಧಾನಿ, ಗೃಹ ಮಂತ್ರಿಗಳು ಹೀಗೆ ತಮ್ಮ ಅಸಹಾಯಕತೆಯನ್ನು ಪ್ರದರ್ಶಿಸುವುದು, ಪ್ರಧಾನ ಮಂತ್ರಿಗಳೇ ಅಮೇರಿಕಾಗೆ ಹೋಗಿ ಅಲ್ಲಿ ನಾನೂ ಒಬ್ಬ ಸ್ವಯಂ ಸೇವಕ ಎಂದು ಸಾರುವುದು, (ಈ ಮಾತು ಹೇಳಲು ಅಮೇರಿಕವೇ ಪ್ರಶಸ್ತವಾದ ಸ್ಥಳ) ಇಂತಹ ಹೇಳಿಕೆ ನಡವಳಿಕೆಗಳ ಮೂಲಕ ಕರ ಸೇವಕ ಕಂ ಸ್ವಯಂ ಸೇವಕರೂ ಆದ ಕಾವಿ ಪಡೆಗಳಿಗೆ ಏನೇನು ಬಹಿರಂಗ(ಗುಪ್ತ) ಸಂದೇಶಗಳನ್ನು ನೀಡಲಾಗುತ್ತಿದೆಯೋ ಕಾದು ನೋಡಬೇಕಿದೆ.

ಎಚ್ಚರಗೇಡಿಗಳ ಕಿವಿ ಹಿಂಡಬೇಕಿದೆ

1992 ಡಿಸೆಂಬರ್ 6 ರಂದು ನಡೆದ ಘೋರ ರಾಷ್ಟ್ರೀಯ ಧುರಂತದಂತಹ ಘಟನೆ ಮತ್ತೊಮ್ಮೆ ಮರುಕಳಿಸದಂತೆ, ಕೋಮುವಾದಿಗಳ ಆಟ ರಾಷ್ಟ್ರದ ಸೌಹಾರ್ದತೆಯನ್ನು ಜನಮಾನಸವನ್ನು ಕದಡಿ ರಾಡಿ ಎಬ್ಬಿಸದಂತೆ ಜನತೆ ನಮ್ಮ ಎಚ್ಚರಗೇಡಿ ರಾಜಕೀಯ ಪಕ್ಷಗಳಿಗೆ, ಎಚ್ಚರವಿದ್ದು ಮೈಮರೆತವರಂತೆ ನಟಿಸುವ ಮೈತ್ರಿಗಳಿಗೆ, ಸರ್ಕಾರಗಳಿಗೆ ಸರಿಯಾಗಿ ಕಿವಿ ಹಿಂಡಬೇಕಿದೆ.

ಉತ್ತರ ಪ್ರದೇಶದಲ್ಲಿ ಮುಂದೆ ರಚಿಸಲ್ಪಡುವ ಸರಕಾರಕ್ಕೆ ಇದು ಒಂದು ಸೂಕ್ಷ್ಮವೂ ಗಂಭೀರವೂ ಆದ ಪ್ರಶ್ನೆಯಾಗಲಿದೆ.

ಗುಜರಾತ್‌ನಲ್ಲಿ ಭೀಕರ ನರಮೇಧ

ಗಲಭೆಗ್ರಸ್ತ ಪ್ರದೇಶಗಳನ್ನು ಸೈನ್ಯಕ್ಕೊಪ್ಪಿಸಬೇಕು
ಕೋಮು ಹಿಂಸಾಚಾರ ತಡೆಯಲು ವಿಫಲವಾದ ಸರ್ಕಾರ
ಶಾಂತಿ-ಸೌಹಾರ್ದತೆ ಕಾಪಾಡುವ ತುರ್ತು ಅಗತ್ಯ

ವಿಶ್ವಹಿಂದೂ ಪರಿಷತ್ ಕರೆ ನೀಡಿದ್ದ 'ಬಂದ್' ಸಮಯದಲ್ಲಿ ಗುಜರಾತ್ ರಾಜ್ಯದಲ್ಲಿ ಸಂಭವಿಸಿದ ಬೀಭತ್ಸ ಹಿಂಸಾಚಾರ ಇಡೀ ರಾಷ್ಟ್ರವನ್ನು ತಲ್ಲಣಗೊಳಿಸಿದೆ. 58 ಜರನ್ನು



ಗುಜರಾತ್: ಬೀದಿ ಬೀದಿಗಳಲ್ಲಿ ಸಶಸ್ತ್ರ ಗ್ಯಾಂಗ್‌ಗಳು

ರೈಲಿನಲ್ಲೇ ಸಜೀವ ದಹನ ಮಾಡಿ ಬಲಿತೆಗೆದು ಕೊಂಡ ಗೋದ್ರಾದ ಅಮಾನುಷ ಘಟನೆ ಖಂಡನಾರ್ಹ. ಘಟನೆಗೆ ಕಾರಣರಾದವರನ್ನು ಶಿಕ್ಷಿಸತಕ್ಕದ್ದು. ಅದಾದ ನಂತರ ಶಾಂತಿಯನ್ನು ಕಾಪಾಡಲು ಮತ್ತು ಮುಗ್ಧ ಜನತೆಯ ಮೇಲೆ ನಡೆಯುವ ಧಾಳಿಯನ್ನು ತಡೆಯಲು ಗುಜರಾತ್ ಸರ್ಕಾರ ಎಲ್ಲಾ ಕ್ರಮಗಳನ್ನೂ ಕೈಗೊಳ್ಳುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಹೀಗೆ ಮಾಡುವುದರ ಬದಲು ಬಿಜೆಪಿ ರಾಜ್ಯ ಸರ್ಕಾರವು ದುಷ್ಕರ್ಮಿಗಳು ಗುಂಪುಗೂಡಿ ಹಿಂಸಾಚಾರಕ್ಕಿಳಿಯಲು ಮುಕ್ತ ಅವಕಾಶ ನೀಡಿತು. ಈ ಹಿಂಸಾಚಾರಗಳು ಅಲ್ಪ ಸಂಖ್ಯಾತರನ್ನು ಗುರಿಯಾಗಿಟ್ಟು ಕೊಂಡು ತಮ್ಮ ದಾಳಿಗಳನ್ನು ಕೇಂದ್ರೀಕರಿಸಿದರು. ಈಗಾಗಲೇ ನೂರಾರು ಜನರನ್ನು ಪೋಲೀಸರ ಕಣ್ಣೆದುರೇ ಕೊಲ್ಲಲಾಗಿದೆ. ಬೆಂಕಿ ಇಟ್ಟು ಮಾಜಿ ಸಂಸತ್ ಸದಸ್ಯರನ್ನೊಳಗೊಂಡು ಹಾಗೂ ಅಮಾಯಕ ಜನರನ್ನು, ಮಕ್ಕಳನ್ನು ಸುಡಲಾಗಿದೆ. ಆಸ್ತಿ ಪಾಸ್ತಿಗೂ ಬೆಂಕಿ ಹಚ್ಚಲಾಗಿದೆ. ವ್ಯಾಪಕ ಪ್ರಮಾಣದ ಲೂಟಿ ಮತ್ತು ಮುಗ್ಧ ಜನರ ಹತ್ಯೆಗಳು ನಡೆದವು. ಸಶಸ್ತ್ರ ಗೂಂಡಾಪಡೆಗಳು ಗ್ರಾಮಾಂತರಕ್ಕೆ ಗಲಭೆ ಹಚ್ಚುತ್ತಿರುವ ವರದಿಗಳು ಬರುತ್ತಿವೆ. ಆದ್ದರಿಂದ ಆ ಪ್ರದೇಶಗಳನ್ನು ಗಲಭೆಗ್ರಸ್ತವೆಂದು ಘೋಷಿಸಿ ಸೈನ್ಯಕ್ಕೊಪ್ಪಿಸಬೇಕು. ನರೇಂದ್ರಮೋದಿ ಸರ್ಕಾರ ಈ ಎಲ್ಲಾ ಭೀಭತ್ಸ ಘಟನೆಯಲ್ಲಿ ಷಾಮೀಲಾಗಿದೆ. **ಈ ದುಷ್ಟ ಸರ್ಕಾರವನ್ನು ಖಂಡಿಸಲು ಪದಗಳೇ ಇಲ್ಲ. ಗುಜರಾತ್‌ನ ಈ ಸರ್ಕಾರ ತಕ್ಷಣ ರಾಜೀನಾಮೆ ನೀಡಬೇಕಾಗಿದೆ.**

ಕೇಂದ್ರದ ಪಾಲು


ಘಟನೆ ನಡೆದ ಸಂಜೆಯೇ ಸೇನಾ ತುಕಡಿಗಳನ್ನು ನಿಯೋಜಿಸಲು ನಿರಂತರವಾಗಿ ಮನವಿ ಮಾಡಿದರೂ ಕೇಂದ್ರ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಮಾರನೇ ದಿನವೂ ಹಿಂಸಾಚಾರ ನಡೆಯುತ್ತಿದ್ದರೂ ಸೇನೆ ಇನ್ನೂ ನಿಯೋಜನೆಗೊಂಡಿಲ್ಲ. ಅಹ್ಮದಾಬಾದ್ ನಗರವು ಸ್ವಂತ ಅಡ್ವಾಣಿಯವರ ಕ್ಷೇತ್ರವಾದರೂ ಅಲ್ಲಿ ಅಲ್ಪಸಂಖ್ಯಾತರ ಪ್ರಾಣಗಳನ್ನು ರಕ್ಷಿಸುವ ಮತ್ತು ಸೇನೆಯನ್ನು ನಿಯೋಜಿಸುವ ಕೆಲಸಕ್ಕೆ ಮುಂದಾಗಲಿಲ್ಲ. ಗೋದ್ರಾ ಘಟನೆಯನ್ನು ವಿರೋಧಿಸಿ ವಿಶ್ವಹಿಂದೂ ಪರಿಷತ್ ಹಲವಾರು ರಾಜ್ಯಗಳಲ್ಲಿ ನೀಡಿರುವ ಬಂದ್ ಕರೆಗೆ ಬಿಜೆಪಿ ಬೆಂಬಲ ನೀಡಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುವಂತಾಯಿತು. ಮುಂದೆಯೂ ಇತರೆ ಸ್ಥಳಗಳಿಗೂ ಕೋಮು ಗಲಭೆಗಳು ಹರಡುವ ಅಪಾಯವಿದೆ. ಕರ್ನಾಟಕದಲ್ಲಿಯೂ ಉದ್ರಿಕ್ತ ಸ್ಥಿತಿ ನಿರ್ಮಿಸಲು ಸಂಘ ಪರಿವಾರ ಯತ್ನಿಸಿದೆ.



ಸುತ್ತುವರಿದ ಗೂಂಡಾಗಳಿಗೆ ಕೊಲ್ಲಬೇಡಿರೆಂದು ಬೇಡಿಕೊಳ್ಳುತ್ತಿರುವ ಯುವಕ

ವಾಜಪೇಯಿ ಸರ್ಕಾರವು ಈಗಾಗಲೇ ಸಾಕಷ್ಟು ವಿಳಂಬಿಸಿರುವ ಸಮಯದಲ್ಲಾದರೂ ಈ ಘಟನೆಗಳನ್ನು ತಡೆಯಲು ಮತ್ತು ಬೆಂಕಿಗೆ ತುಪ್ಪ ಹಾಕುತ್ತಿರುವ ವಿ.ಹಿ.ಪ. ನ ಕರಸೇವಕರು ದೇಶದ ಎಲ್ಲಾಭಾಗಗಳಿಂದ ಅಯೋಧ್ಯೆಗೆ ಬರುತ್ತಿರುವುದನ್ನು ತಡೆಯಲು ಕ್ರಮ ಕೈಗೊಳ್ಳಬೇಕಾಗಿದೆ. ತಪ್ಪಿದರೆ ಇಡೀ ದೇಶವೇ ಇದಕ್ಕೆ ಭಾರೀ ಬೆಲೆ ತೆರಬೇಕಾಗಿದೆ. ಆದರೆ ಇದುವರೆಗೂ (ಇದು ಮುದ್ರಣಕ್ಕೆ ಸಿದ್ದಗೊಳ್ಳುವವರೆಗೂ) ರಾಜ್ಯ ಸರ್ಕಾರಗಳಿಗೆ ಕರಸೇವಕರನ್ನು ತಡೆದು ನಿಲ್ಲಿಸಲು ಕೇಂದ್ರ ಸರ್ಕಾರ ಹೇಳಿಲ್ಲ.

ಸಿಪಿಐ(ಎಂ) ಮತ್ತು ಸಿಪಿಐ ಗಳು ದೇಶದ ಎಲ್ಲಾ ನಾಗರೀಕರಿಗೆ ಮತ್ತು ಎಲ್ಲಾ ರಾಜಕೀಯ ಪಕ್ಷಗಳಿಗೆ ಘಟನೆಯ ಗಂಭೀರತೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಕೇಂದ್ರ ಸರ್ಕಾರದ ತನ್ನ ಜವಾಬ್ದಾರಿಯನ್ನು ನಿರ್ವಹಿಸುವಂತೆ ಒತ್ತಾಯಿಸಲು ವಿಶ್ವಹಿಂದೂ ಪರಿಷತ್‌ನ ಉನ್ಮಾದಕಾರಿ ಕಾರ್ಯಕ್ರಮಗಳನ್ನು ತಡೆಯಲು ಹಾಗೂ ಕಾನೂನು ಮತ್ತು ಕೋಮು



ದಿಕ್ಕುತೋರದ ಗೊಂದಲದ ಸಮ್ಮೇಳನ

ಅಖಿಲ ಭಾರತ 69ನೇಯ ಕನ್ನಡ ಸಾಹಿತ್ಯ ಸಮ್ಮೇಳನ ಫೆಬ್ರವರಿ 15 ರಿಂದ 17 ರವರೆಗೆ ತುಮಕೂರಿನಲ್ಲಿ ಜರುಗಿದೆ. ಕನ್ನಡ ಭಾಷೆ-ಸಾಹಿತ್ಯ, ನಾಡಿನ ಜನತೆಯ ಬದುಕು-ಬವಣೆಗಳ ಸಾಂಸ್ಕೃತಿಕ ಅಭಿವ್ಯಕ್ತಿಯಾಗಿ ಅವುಗಳನ್ನು ಸಂರಕ್ಷಿಸಿ, ಬೆಳೆಸುವ ದಿಕ್ಕಿನಲ್ಲಿ ಸಮಕಾಲೀನ ಸವಾಲುಗಳನ್ನು ಗುರುತಿಸಿ, ಅವುಗಳನ್ನೆದುರಿಸಲು ಸನ್ನದ್ಧವಾಗಬೇಕಿರುವುದು ಈ ಸಮ್ಮೇಳನದ ಗುರಿ-ಆಶಯ. ಆದರೆ ಈ ದಿಶೆಯಲ್ಲಿ ಸಾಗಬಲ್ಲ ನಾಡು-ನುಡಿ ರಕ್ಷಣೆಗೆ ಸಂಘರ್ಷಹೂಡಬಲ್ಲ ಇಚ್ಛೆ ಮತ್ತು ಸಾಮರ್ಥ್ಯ ಈಗಿನ ಕನ್ನಡ ಸಾಹಿತ್ಯ ಪರಿಷತ್‌ಗಿದೆಯೇ? ಪ್ರತಿವರ್ಷವೂ ತಪ್ಪದೇ ಸಂಘಟಿಸುವ ಇಂತಹ ಸಾಹಿತ್ಯ ಸಮ್ಮೇಳನಕ್ಕೆ ಜನತೆಯ ಸ್ಪಂದನವೋ ಅಭೂತಪೂರ್ವ. ಆದರೆ ಉತ್ಸಾಹದ, ಕುತೂಹಲದ, ಕಿಂಚಿತ್ತಾದರೂ ಬೆಳೆಯಬೇಕಿರುವ ಹಂಬಲದ ಆಶಯ ಹೊತ್ತು ಬಂದವರಿಗೆ ಹಿಂತಿರುಗುವಾಗ ಇಲ್ಲಿ ಪಡೆದದ್ದೇನು? ಎಂದರೆ ಬಂದ ದಾರಿಗೆ ವಾಪಾಸು ಸುಂಕಕೊಟ್ಟು ಹೋಗುತ್ತಿರುವುದೇ ಪರಿಪಾಠ. ಹೀಗಾಗಿ ಸಮ್ಮೇಳನಗಳುಜಾತ್ರೆಗಳಾಗಿ, ಸಂಕುಚಿತ ರಾಜಕೀಯ ಹಿತಾಸಕ್ತಿಗಳ ವೇದಿಕೆಯಾಗಿ, ಹಣ-ಹಗರಣ, ಶುಷ್ಕ ವಾತಾವರಣದ ರಂಗವಾಗಿ ಗೊಂದಲ-ವಿವಾದಗಳಲ್ಲೇ ಕೊನೆಗೊಳ್ಳುವುದು ಸರ್ವೇಸಾಧಾರಣವಾಗುತ್ತಿದೆ. ಈ ತುಮಕೂರಿನ ಸಮ್ಮೇಳನವೂ ಇದಕ್ಕೆ ಹೊರತಾಗಲಿಲ್ಲ. ಬದಲಾಗಿ ಹಿಂದಿನ ದರಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಯಿತು ಅಧ್ಯಕ್ಷ ಭಾಷಣ. ಗೋಷ್ಠಿಗಳೂ ಅಷ್ಟಕಷ್ಟೇ. ಜಾಗತೀಕರಣದ ಅಪಾಯಗಳನ್ನು ಗುರುತಿಸಿದ ಬಹುತೇಕ ಭಾಷಣಕಾರರು ಪರ್ಯಾಯ ಸೂಚಿಸುವಲ್ಲಿ ಸೋತರು. ಜಾಗತೀಕರಣಕ್ಕೆ 'ದೇಶಿಯಾತ್ರೆ' ಮದ್ದು ಎಂದು ಪ್ರತಿಪಾದಿಸುವ ಮೂಲಕ 'ಪುನರುತ್ಥಾನವಾದೀ' ಪರಿಹಾರ ಸೂಚಿಸಿದರು. ಹೀಗಾಗಿಯೇ ಇಡೀ ಸಮ್ಮೇಳನದಲ್ಲಿ ಕೋಮುವಾದ- ಭಯೋತ್ಪಾದನೆ-ಯುದ್ಧದಂತಹಜ್ವಲಂತ ಪ್ರಶ್ನೆಗಳು ಚರ್ಚಿತವಾಗಲಿಲ್ಲ. ಇದು ಸಹಜ ಮೈಮರೆವೆಯಲ್ಲ. ಬದಲಾಗಿ ಸಾಹಿತ್ಯ ಕ್ಷೇತ್ರದ ಕರಸೇವಕರ ಕರಾಮತ್ತು ಎಂದು ಬೇರೆ ಹೇಳಬೇಕಿಲ್ಲಆದರತ್ತ ಒಂದು ನೋಟ...

- ಸಂ

ವಾದ ವಿವಾದ, ಗುಂಪುಗಾರಿಕೆ, ಅವ್ಯವಸ್ಥೆಗಳ ನಡುವೆ ಅಖಿಲಭಾರತ 69ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತೆರೆ ಬಿದ್ದಿದೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನಡೆಸುವ ಬಗ್ಗೆಯೇ ಈ ಮೊದಲಿನಿಂದಲೂ ವಿವಾದವಿದೆ. ಸಂತೆಯಂತೆ, ಜಾತ್ರೆಯಂತೆ ಸಾಹಿತ್ಯ ಉತ್ಸವ ನಡೆಸುವುದರಿಂದ ಕನ್ನಡ ಸಾಹಿತ್ಯ ಒಂದು ಹೆಜ್ಜೆಯನ್ನೂ ಮುಂದಕ್ಕಿಡುವುದಿಲ್ಲ. ಈ ಬದಲು ಸಾಹಿತ್ಯದ ಅರ್ಥಪೂರ್ಣ ಚರ್ಚೆ ನಡೆಯುವ ವಾತಾವರಣ ರೂಪಿಸಬೇಕು ಎಂದು ಸಾಹಿತಿಗಳ



ಒಂದು ವಲಯದ ಆಗ್ರಹ. ಪ್ರತೀವರ್ಷ ಸಮ್ಮೇಳನ ನಡೆಸುವ ಔಚಿತ್ಯದ ಬಗ್ಗೆಯೂ ಈ ಮೊದಲಿನಿಂದಲೂ ಭಿನ್ನಾಭಿಪ್ರಾಯವಿದೆ. ಆದರೂ ಸಹಾ ಕನ್ನಡ ಸಾಹಿತ್ಯ ಪರಿಷತ್ತು ಜಾತ್ರೆಯ ವಾತಾವರಣವಿರುವ ಸಾಹಿತ್ಯ ಸಮ್ಮೇಳನವನ್ನು ಕೈಬಿಟ್ಟಿಲ್ಲ. ಅಥವಾ ಈ ಸಮ್ಮೇಳನವನ್ನೇ ಅರ್ಥಪೂರ್ಣ ವಾಗಿಸುವಂತೆ ಪುನರ್ರೂಪಿಸುವ ಕೆಲಸವನ್ನೂ ಮಾಡಿಲ್ಲ. ಹಾಗಾಗಿ ಅಖಿಲ ಭಾರತ ಸಮ್ಮೇಳನ ಎನ್ನುವುದು ಅವ್ಯವಸ್ಥೆ, ಗೊಂದಲ, ಹಾಹಾಕಾರದ ಉತ್ಸವವಾಗಿ ಬದಲಾಗುತ್ತಿದೆ. ತುಮಕೂರಿನಲ್ಲಿ ನಡೆದ 69ನೆಯ ಸಾಹಿತ್ಯ ಸಮ್ಮೇಳನ ಉಳಿದ ಸಮ್ಮೇಳನಗಳಿಗಿಂತ ಯಾವ ರೀತಿಯಲ್ಲೂ ಭಿನ್ನವಾಗಿರಲಿಲ್ಲ. ಅವ್ಯವಸ್ಥೆ ಇನ್ನೂ ಹೆಚ್ಚಿದ್ದ ಕಾರಣ ಸಮ್ಮೇಳನದಲ್ಲಿ ಗೊಂದಲ ಒಂದು ಕೈ ಹೆಚ್ಚೇ ಇತ್ತು.


ತಪ್ಪಿರುವ ಕೊಂಡಿ

ಮೂರು ದಿನಗಳ ಸಾಹಿತ್ಯ ಸಮ್ಮೇಳನದಲ್ಲಿ ಮುಖ್ಯ ಕೇಳುಗರು ವಿವಿಧ ಜಿಲ್ಲೆಗಳಿಂದ ಬರುವ ಕನ್ನಡ ಉಪನ್ಯಾಸಕರು, ಸಾಹಿತಿಗಳು, ಸಾಹಿತ್ಯಪ್ರಿಯರಿಗೆ ನಂತರದ ಸ್ಥಾನ. ಕನ್ನಡ ಸಾಹಿತ್ಯದ ಬಗ್ಗೆ 40ಸಾವಿರಕ್ಕೂ ಹೆಚ್ಚು ಜನರೆದುರು ಚರ್ಚೆ ನಡೆಸುವಾಗ ಅದಕ್ಕೊಂದು ಖಚಿತ ರೂಪು ಅಗತ್ಯ. ದೊಡ್ಡ ಸಂತೆಯಲ್ಲಿ ಗಂಭೀರವಾಗಿ ಸಾಹಿತ್ಯದ ಎಲ್ಲಾ ಮಗ್ಗಲು ಶೋಧಿಸಲು ಸಾಧ್ಯವಿಲ್ಲ. ಹಾಗಾಗಿ ಕನ್ನಡ, ಕನ್ನಡತನ, ಸಾಹಿತ್ಯ ಚಳುವಳಿ, ಪ್ರಸಕ್ತ ಜಾಗತಿಕ ಬಿಕ್ಕಟ್ಟು, ದೇಶದ ಸ್ಥಿತಿ, ಅದು ಕನ್ನಡತನದ ಮೇಲೆ ಉಂಟು ಮಾಡಿರುವ ಪರಿಣಾಮ, ರಾಜ್ಯದ ಸ್ಥಿತಿ ಇವು ಚರ್ಚೆಯ ಹೂರಣವಾಗಬೇಕು. ಮುಖ್ಯವಾಗಿ ಸಾಹಿತ್ಯ ಮತ್ತು ಸಮಾಜದ ನಡುವಣ ಕೊಂಡಿಯನ್ನು ಪರಿಶೀಲಿಸಬೇಕು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಆದರೆ ಸಾಹಿತ್ಯ ಪರಿಷತ್ತು ಸಾಹಿತ್ಯೇತರ ತಾಣವಾಗಿ ಬದಲಾಗಿರುವುದರಿಂದ ಕನ್ನಡ ಸಾಹಿತ್ಯ ಚಲಿಸಿದ, ಚಲಿಸಬೇಕಾದ ರೀತಿಯ ಬಗ್ಗೆ ಆಲೋಚನೆ ಉಳ್ಳವರೇ ಕಡಿಮೆ. ಒಂದು ಲೆಕ್ಕದ ಪ್ರಕಾರ ಸಾಹಿತ್ಯ ಪರಿಷತ್ತಿನ 27 ಜಿಲ್ಲಾ ಅಧ್ಯಕ್ಷರುಗಳ ಪೈಕಿ 25 ಮಂದಿ ಸಾಹಿತಿಗಳಲ್ಲ. ಪರಿಸ್ಥಿತಿ ಹೀಗಿರುವಾಗ ಸಾಹಿತ್ಯ ಸಮ್ಮೇಳನ ನೀಡಬಹುದಾದ ನೋಟದ ಬಗ್ಗೆಯೇ ಅನುಮಾನ ಸಹಜ.

ಇದರೊಂದಿಗೆ ಸಾಹಿತ್ಯ ಪರಿಷತ್ತಿನಲ್ಲಿರುವ ಗುಂಪುಗಾರಿಕೆ, ಪರಿಷತ್ ಚುನಾವಣೆಗಳಲ್ಲಿ ನಡೆಯುವ ಕಾದಾಟ, ಸಮ್ಮೇಳನ ಸಂಘಟಿಸುವ ಜಿಲ್ಲೆಯಲ್ಲಿ ಇರುವ ಗುಂಪುಗಾರಿಕೆ, ತಿಕ್ಕಾಟ ಇವೆಲ್ಲವೂ ಸಮ್ಮೇಳನದ ಮೇಲೆ ನೇರ ಪ್ರಭಾವ ಬಿರುತ್ತದೆ.



ಸಮ್ಮೇಳನದ ವಿವಿಧ ಗೋಷ್ಠಿ, ಸಂವಾದದಲ್ಲಿ ಭಾಗವಹಿಸುವವರು ಅನೇಕ ಬಾರಿ ವಶೀಲಿಯಿಂದ ಬಂದಿರುತ್ತಾರೆ. ತಮಗೆ ಅನುಭವವಿಲ್ಲದ ಕ್ಷೇತ್ರಗಳ ಬಗ್ಗೆ ಮಾತನಾಡುತ್ತಾರೆ. ಬಲಿಷ್ಟ ಪರಿಷತ್ ಜಿಲ್ಲಾ ಅಧ್ಯಕ್ಷರುಗಳು, ತಮಗೆ ಬೇಕಾದವರನ್ನು ಸಮ್ಮೇಳನದಲ್ಲಿ ತೂರಿಸುತ್ತಾರೆ. ಹೀಗಾಗಿ ಸಮ್ಮೇಳನ ರೂಪಿಸುವಾಗಲೇ ಜೊಳ್ಳು ಸಾಕಷ್ಟು ಸೇರುತ್ತದೆ. ಒಂದಕ್ಕೊಂದು ತಳಕುಹಾಕಿಕೊಂಡು ಅವ್ಯವಸ್ಥೆಯ ಆಗರವಾಗುತ್ತದೆ.

ಗೋಚರ-ಅಗೋಚರ ಹಣ

ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಎಂದರೆ ಅದು ಹಣ ಓಡಾಡುವ ಜಾಗ. ಒಂದು ಸಮ್ಮೇಳನಕ್ಕೆ ಸಾಹಿತ್ಯ ಪರಿಷತ್ ಅಧ್ಯಕ್ಷರೇ ಘೋಷಿಸಿದಂತೆ ಕನಿಷ್ಟ ಒಂದೂವರೆ ಕೋಟಿ ಖರ್ಚು ತಗಲುತ್ತದೆ. ಶೇಖರವಾಗುವ ಅಗೋಚರ ಹಣದ ಲೆಕ್ಕ ಇನ್ನಷ್ಟು. ಕೋಟ್ಯಾಂತರ ರೂಪಾಯಿ ಓಡಾಡುವ ಸ್ಥಳದಲ್ಲಿ ಹುಟ್ಟುವ ನುಂಗಣ್ಣರು ಸಮ್ಮೇಳನಕ್ಕೆ ಅವ್ಯವಸ್ಥೆಯನ್ನು ವ್ಯವಸ್ಥಿತವಾಗಿ ತಂದುಕೊಡುತ್ತಾರೆ.

ಹೀಗಾಗಿ ಸಮ್ಮೇಳನ ಎಂದಾಕ್ಷಣ ಸಾಹಿತಿಗಳೂ ಹಿಂದೆ ಸರಿದು, ಸಾಹಿತ್ಯ ಮಂಥನವೂ ಹಿಂದೆ ಸರಿದು ನಿಲ್ಲುತ್ತದೆ. ಭಾಗವಹಿಸುವ ಪ್ರತಿನಿಧಿಗಳಿಗೆ ಸುತ್ತುವ, ಇದ್ದಾಗ ಮಾತ್ರ ಒಂದಿಷ್ಟು ಭಾಷಣ ಕೇಳುವ ಸಮ್ಮೇಳನವಾಗುತ್ತದೆ. ಸ್ಥಳೀಯರಿಗೆ ಮಾತ್ರ ಇದು ಒಂದು ರೀತಿಯಲ್ಲಿ ಸಾಂಸ್ಕೃತಿಕ ಹಬ್ಬ. ಅಪರೂಪದ ಹಾಡು, ಕುಣಿತ ಒಂದೆಡೆ ಸಿಗುವುದರಿಂದ ಆ ಅರ್ಥದಲ್ಲಿ ಸಮ್ಮೇಳನ ಒಂದಿಷ್ಟಾದರೂ ಅರ್ಥಪೂರ್ಣ.

ಅವ್ಯವಸ್ಥೆ ಉದ್ಘಾಟನೆ-ಜಟಾಪಟಿ

ತುಮಕೂರು ಸಮ್ಮೇಳನದಲ್ಲಿ ಸಮ್ಮೇಳನ ಘೋಷಿಸಿದಾಗಲೇ ಅವ್ಯವಸ್ಥೆಯನ್ನೂ ಅಧಿಕೃತವಾಗಿ ಉದ್ಘಾಟಿಸಲಾಗಿತ್ತು. ಗುಂಪುಗಾರಿಕೆಯ ಕಾರಣ ಒಂದುವರ್ಷ ಮುಂದೂಡಲ್ಪಟ್ಟ ಸಮ್ಮೇಳನ ಕೊನೆಯವರೆಗೂ ಅನಿಶ್ಚಿತವಾಗಿತ್ತು. ರಾಜಕಾರಣಿಗಳ, ಮಠಾಧೀಶರುಗಳ ಕೊನೆಗಳಿಗೆ ಬೆಂಬಲ, ಊರ ಮರ್ಯಾದೆ ಇವು ತಲೆ ಹಾಕಿ ಕೊನೆಗೂ ಸಮ್ಮೇಳನ ತುಮಕೂರಿನಲ್ಲಿ ನಡೆಯುತ್ತದೆ ಎನ್ನುವಂತಾಯಿತು. ಆದರೂ ಸಹಾ **ರಾಜ್ಯ ಪರಿಷತ್ ಅಧ್ಯಕ್ಷರೇ ಕೊನೆಗಳಿಗೆವರೆಗೆ ಸಮ್ಮೇಳನವನ್ನು ತುಮಕೂರಿನಿಂದ ತಪ್ಪಿಸುವ ಉಡುಪಿಗೆ ಕೊಂಡೊಯ್ದು ಪೇಜಾವರ ಮಠಾಧೀಶರ ಅಡಿದಾವರೆಗಳಿಗೆ ಅರ್ಪಿಸಿ ಕೇಸರಿ ಪಡೆಯೊಂದಿಗೆ ಸಮ್ಮೇಳನ ನಿಭಾಯಿಸುವ ಸಂಚು ನಡೆಸುತ್ತಿದ್ದರು.** ಆದರೆ ಸಮ್ಮೇಳನ ಹಣ ತರುವ ಆದಾಯದ ಮಾರ್ಗವೂ ಆದ್ದರಿಂದ ಜಟಾಪಟಿಯಲ್ಲಿ ತುಮಕೂರಿನಲ್ಲಿಯೇ ನಡೆಯಿತು.

ಸಾಹಿತ್ಯ ಸಮ್ಮೇಳನಕ್ಕೆ ತುಮಕೂರನ್ನು ಆಯ್ಕೆ ಮಾಡುವುದರಿಂದ ಆರಂಭಿಸಿ, ಸಮ್ಮೇಳನದ ಅಧ್ಯಕ್ಷತೆಗೆ ಡಾ. ಯು.ಆರ್.ಅನಂತಮೂರ್ತಿ ಅವರನ್ನು ವ್ಯವಸ್ಥಿತವಾಗಿ ಕೂರಿಸುವುದರೊಂದಿಗೆ, ಸಮ್ಮೇಳನದ ಕೊನೆ ಗಳಿಗೆಯವರೆಗೆ ರಾಜಕಾರಣ ತುಂಬಿತ್ತು. ಹೀಗಾಗಿ ಮೊದಲಿನಿಂದ ಕೊನೆಯುವರೆಗೂ ಸಮ್ಮೇಳನ ಅವ್ಯವಸ್ಥೆಯ ಮೆರೆದಾಟಕ್ಕೆ ಸ್ಥಳವಾಯಿತು.

ಡಾ|| ಯು.ಆರ್.ಅನಂತಮೂರ್ತಿ, ಈ ಹಿಂದೆ ಕನಕಪುರ ಸಮ್ಮೇಳನದ ಅಧ್ಯಕ್ಷರಾಗಿದ್ದ ಎಸ್.ಎಲ್.ಭೈರಪ್ಪ ಅವರ ಪರಂಪರೆಯನ್ನೇ ಮುನ್ನಡೆಸಿದರು. ಕನ್ನಡ ಸಾಹಿತ್ಯ ಜಾಗತೀಕರಣದ ನಡುವೆ ಉಸಿರುಕಟ್ಟಿರುವಾಗ, ಕೋಮುವಾದದ ನಡುವೆ ದಿಕ್ಕು ತಪ್ಪಿರುವಾಗ, ಹೊಸ ಸಾಹಿತ್ಯ ಚಳುವಳಿಗಳು ಎದ್ದು ಬರದಿರುವಾಗ, ಮನುಷ್ಯ ಮನುಷ್ಯನ ನಡುವೆ ಗೋಡೆ ಎದ್ದಿರುವಾಗ ಇದಕ್ಕೆ ಕಾರಣಗಳನ್ನು ಸಮ್ಮೇಳನದ ಅಧ್ಯಕ್ಷ[illegible] ಹುಡುಕಬೇಕಾಗಿತ್ತು. ಸಮ್ಮೇಳನದ ಅಧ್ಯಕ್ಷ ಭಾಷಣ ಎಂದರೆ ಅದು ಸಮಕಾಲೀನ ಸವಾಲುಗಳಿಗೆ ಹಿಡಿದ ಕನ್ನಡಿ. ಈ ಸಮ್ಮೇಳನದಿಂದ ಮುಂದಿನ ಸಮ್ಮೇಳನದವರೆಗೆ ಚರ್ಚೆಯಾಗುವ ಭಾಷಣ. ಆದರೆ ಕನ್ನಡ ಸಾಹಿತ್ಯ ಪರಿಷತ್ತು ವ್ಯವಸ್ಥಿತವಾಗಿ ಬಲಪಂಥೀಯರ ಬಲ ಹೆಚ್ಚಿಸುವ ಕಾರ್ಯಕ್ಕೆ ಕೈ ಹಚ್ಚಿದೆ. ಸಾಹಿತ್ಯ ಲೋಕದಲ್ಲಿ ಪ್ರತಿಗಾಮಿ ಗಾಳಿ ಬೀಸಿದ ಎಸ್.ಎಲ್.ಭೈರಪ್ಪ ಅವರನ್ನೂ ಸಾಹಿತ್ಯ ಪರಿಷತ್ತು ಆಯ್ಕೆ ಎಂಬ ವಂಚನೆ ನಡೆಸಿ ಅಧ್ಯಕ್ಷರನ್ನಾಗಿಸಿತ್ತು. ಪ್ರತಿಯೊಬ್ಬ ಸಾಹಿತಿ ಕೈಯಲ್ಲಿ ಕೆಂಡ ಹಿಡಿದು, ಉರಿವ ಮನೆಯಲ್ಲಿ ನಿಂತಿದ್ದಾಗ ಭೈರಪ್ಪ ಸಂಸ್ಕೃತದ ಬಗ್ಗೆ, ಭಾರತೀಕರಣದ ಬಗ್ಗೆ, ಹಿಂದುತ್ವದ ಬಗ್ಗೆ ಮಾತನಾಡಿ ಉರಿವ ಬೆಂಕಿಗೆ ಇನ್ನಷ್ಟು ಎಣ್ಣೆ ಸುರಿದಿದ್ದರು. ಈಗ ಅನಂತಮೂರ್ತಿಯವರ ಸರದಿ. ಭೈರಪ್ಪನವರ ಮಾತುಗಳು ಘೋಷಿತ ಬಲಪಂಥೀಯನದ್ದಾದರೆ ಅನಂತಮೂರ್ತಿ ಪ್ರಗತಿಪರ ಮುಸುಕಿನಲ್ಲಿ ಸಮಾಜದ ಜಡತ್ವದ ಆಲೋಚನೆಗಳನ್ನು ಹರಿಯಬಿಟ್ಟರು. ಅನಂತಮೂರ್ತಿಯವರ ಭಾಷಣದ ತಿರುಳು ಜಾಗತೀಕರಣವಾದರೂ ನಿಲುವು ಅದಕ್ಕೆ ವಿರುದ್ಧವಾಗಿತ್ತು. ಅನಂತಮೂರ್ತಿಯವರ ಅಧ್ಯಕ್ಷ ಭಾಷಣ,

ವಂಡಿಸಿದ ಚಿಂತನೆಗಳು ಸಾಕಷ್ಟು ಪ್ರತಿಗಾಮಿಯಯಾಗಿತ್ತು. ಮುಸ್ಲಿಮರು ಕನ್ನಡೀಕರಣಗೊಳ್ಳಬೇಕು, ನನ್ನ ಚಿಂತನೆಗೆ ತಕ್ಕಂತೆ ಸ್ತ್ರೀ-ಪುರುಷರು ಒದಗುತ್ತಾರೆ. ಆಧ್ಯಾತ್ಮಿಕ ಹಸಿವು, ಕುದುರೆಮುಖ ಗಣಿಗಾರಿಕೆ, ಭ್ರಮೆಯ ಬೆನ್ನು ಹತ್ತಿದ ಚೀನಾ, ಬ್ರಾಹ್ಮಣರ ಜನಿವಾರದ ಬಗೆಗಿನ ಹಾಸ್ಯ, ಸಂಸ್ಕೃತ ಇತ್ಯಾದಿ ವಿಚಾರಗಳಲ್ಲೆಲ್ಲಾ ಅನಂತಮೂರ್ತಿ ಹಿಂದಿನ ಭೈರಪ್ಪನವರಂತೆ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಸಮಾಜವನ್ನು ಹಿಂದಕ್ಕೊಯ್ಯುವ ಕಾಯಕಕ್ಕೇ ಕೈ ಹಾಕಿದ್ದರು. ಇದಕ್ಕೆ ಕರ್ನಾಟಕದ ವಾತಾವರಣವೂ ಕಾರಣವಿದ್ದೀತು.


ಜಾಗತೀಕರಣವನ್ನು ಒಟ್ಟಾರೆ ಗಮನಿಸಿದ್ದಾರೆ ಎನ್ನುವ ಭಾಸವಾದರೂ ಸಹಾ ಜಾಗತೀಕರಣ ಭಾರತದ ಮೇಲೆ ಮಾಡುತ್ತಿರುವ ದಾಳಿಯನ್ನು ಅವರಿಗೆ ಸಮಗ್ರವಾಗಿ ಹಿಡಿಯಲಾಗಲಿಲ್ಲ. ಜಾಗತೀಕರಣ ಕನ್ನಡದ ಮೇಲೆ, ಕನ್ನಡಿಗರ ಮೇಲೆ ನಡೆಸುತ್ತಿರುವ ಸವಾರಿಯ ಬಗ್ಗೆ ಅವರ ಗಮನ ಕೇಂದ್ರೀಕೃತವಾಗಿತ್ತೇ ಹೊರತು, ಜಾಗತೀಕರಣ ಒಟ್ಟಾರೆ ತಂದೊಡ್ಡುತ್ತಿರುವ ಬದುಕಲಾರದ ಆತಂಕವನ್ನು ಬಿಚ್ಚಿಡಲಾಗಲಿಲ್ಲ. ಹೀಗಾಗಿಯೇ ರೈತರ ಆತ್ಮಹತ್ಯೆ, ಬಹುರಾಷ್ಟ್ರೀಯ ಸಂಸ್ಥೆಗಳ ಧಾಳಿ, ಸಾಹಿತ್ಯಕ್ಕೆ ಇರಬೇಕಾದ ಬದ್ಧತೆ, ಅಮೆರಿಕಾದ ಕರಾಳ ವ್ಯವಹಾರ, ಹಳ್ಳಿ ಎಂಬುದರ ನಾಶ ಕೊಳಗೇರಿಯ-ಹುಟ್ಟು ಕುರಿತು ಪ್ರಸ್ತಾಪವಾದ ಪ್ರಶ್ನೆಗಳೆಲ್ಲವೂ ನೀರ ಮೇಲೆ ತೇಲಿಹೋದವು.

ಕೋಮುವಾದ ಹಾಗೂ ಭಯೋತ್ಪಾದನೆಗೆ ಸಾಹಿತ್ಯದ ಉತ್ತರವೇನು ಎಂಬ ಪ್ರಶ್ನೆಗೆ ಅನಂತಮೂರ್ತಿ ಹಿಡಿದದ್ದು ಸೊಟ್ಟಹಾದಿ. ತಮ್ಮೊಳಗೆ ಹೊರಳಾಡುತ್ತಿರುವ ಮುಸ್ಲಿಂ ವಿರೋಧಿ ಕನವರಿಕೆಗಳನ್ನು ಅನಂತಮೂರ್ತಿ ಇಲ್ಲಿ ಬಿಡಿಸಿಟ್ಟರು. ಮುಸ್ಲಿಮರು ಕನ್ನಡೀಕರಣಗೊಳ್ಳಬೇಕು ಎಂದು ಆದೇಶ ನೀಡಿದರು. ಮುಸ್ಲಿಮರು ಭಾರತೀಕರಣಗೊಳ್ಳಬೇಕು ಎಂಬ ಆರ್‌ಎಸ್‌ಎಸ್ ಕರೆಗೆ ಈ ಕರೆ ಯಾವ ರೀತಿಯಲ್ಲಿ ಭಿನ್ನ? ಕನ್ನಡ ಸಾಹಿತ್ಯವನ್ನು ತಮ್ಮ ಬರಹಗಳ ಮೂಲಕ ಸಮೃದ್ಧ ಮಾಡಿದ್ದಕ್ಕಾಗಿ ಸಾರಾ ಅಬೂಬಕರ್ ಅವರಿಗೆ ರಾಜ್ಯ ಸರ್ಕಾರ ತನ್ನ ಅತ್ಯುನ್ನತ ಅತಿಮಬ್ಬೆ ಪ್ರಶಸ್ತಿ ಘೋಷಿಸಿದೆ. ಬೊಳುವಾರು ಮಹಮ್ಮದ್ ಕುಂಞ, ಫಕೀರ್ ಮಹಮದ್ ಕಟ್ಪಾಡಿ, ಅಷ್ಟಲ್ಲದೇ 'ಬಂಡಾಯ' ಚಳುವಳಿ ದನಿ ನೀಡಿದ ನೂರಾರು ಮುಸ್ಲಿಂ ಸಾಹಿತಿಗಳು ಕನ್ನಡ ಸಾಹಿತ್ಯ ನೆಲದಲ್ಲಿ ಉತ್ತಿ ಬಿತ್ತುತ್ತಿರುವುದು ಅನಂತಮೂರ್ತಿಯವರ ಗಮನಕ್ಕೇ ಬಿಂದಂತಿಲ್ಲ. ಹಾಗಾದರೆ ಸಾರಸಗಟಾಗಿ ಮುಸ್ಲಿಂರು ಕನ್ನಡೀಕರಣಗೊಳ್ಳಬೇಕು ಎಂದು ಹೇಳಿದ್ದು ಅಡ್ವಾಣಿ ಭಾಷೆಯಲ್ಲಲ್ಲದೆ ಇನ್ನಾವ ಭಾಷೆಯಲ್ಲಿ? ಮುಸ್ಲಿಮರು ಮುಖ್ಯವಾಹಿನಿಯಿಂದ ಬೇರೆಯೇ ಇದ್ದಾರೆ. ತಮ್ಮದೇ ಕೋಟೆಕಟ್ಟಿಕೊಂಡಿದ್ದಾರೆ ಎನ್ನುವ ಅರ್ಥವನ್ನು ಹೊರಡಿಸುತ್ತಿರುವುದೇಕೆ?

ಸಮಾರೋಪ ಮತ್ತು ಹಿರಿಯ ಸಾಹಿತಿಗಳ ಅನಿಸಿಕೆ - ಪುಟ 12 ರಲ್ಲಿ

ನಾಪತ್ತೆಯಾದ ಕೋಮುವಾದ-ಭಯೋತ್ಪಾದನೆ

ತಮ್ಮ ಭಾಷಣದಲ್ಲಿ ಜಗತ್ತು ಧರ್ಮಾಂಧತೆಯಿಂದ ತತ್ತರಿಸುತ್ತಿರುವಾಗ ಅನಂತಮೂರ್ತಿ ತಾಲಿಬಾನಿಗಳನ್ನು ಅಮೆರಿಕಾದವರೇ ಸೃಷ್ಟಿಸಿದರು ಎಂಬ ಒಂದೇ ಹೇಳಿಕೆ ನೀಡುತ್ತಾರೆ. ಧರ್ಮಾಂಧತೆಯನ್ನು


ನಿರ್ಧಾರಗಳ ಗೊಂದಲ ಮೂರ್ತಿ

ಕೊನೆಗಾಣಿಸಲು ಜನ ಚಳುವಳಿ ಮಾಡುತ್ತಿರುವಾಗ ಆಧ್ಯಾತ್ಮಿಕ ಹಸಿವು ಬೇಕೆನ್ನುತ್ತಾರೆ. ಎಲ್ಲಿ ತಮಗೆ ಕೋಮುವಾದಿ ಪಟ್ಟ ಸಿಗುತ್ತದೋ ಎಂದು ಈ ಆಧ್ಯಾತ್ಮದ ಹಸಿವು ಕೋಮುವಾದಿಗಳಲ್ಲಿ ಹುಟ್ಟುವ ಹಸಿವಿನಂತಹದ್ದಲ್ಲ ಎನ್ನುತ್ತಾರೆ. ಜಗತ್ತನ್ನು ತಲ್ಲಣಗೊಳಿಸುತ್ತಿರುವ ಭಯೋತ್ಪಾದನೆ, ಕೋಮುವಾದ ಕನ್ನಡ ಸಾಹಿತ್ಯದಲ್ಲಿ ಪ್ರವೇಶ ಪಡೆದಾಗಿದೆ. ಈ ಕರಾಳ ವಾದಗಳ ಬಗ್ಗೆ ಕನ್ನಡ ಸಾಹಿತ್ಯ ಸವಿಸ್ತಾರ ವಿಶ್ಲೇಷಣೆ ನಡೆಸುತ್ತಿದೆ. ಈ ಕಾರಣಕ್ಕಾದರೂ **ಪ್ರಸ್ತುತ ಸಾಹಿತ್ಯವನ್ನು ವಿಮರ್ಶಿಸುವಾಗಾದರೂ ಭಯೋತ್ಪಾದನೆ, ಕೋಮುವಾದ ಅನಂತಮೂರ್ತಿಯವರಿಗೆ ಮುಖ್ಯ ವಿಷಯವಾಗಬೇಕಿತ್ತು.** ಆದರೆ ಇವು ಅನಂತಮೂರ್ತಿಯವರ ಅಧ್ಯಕ್ಷ ಭಾಷಣದಲ್ಲಿ ಸಂಪೂರ್ಣನಾಪತ್ತೆ.

ಈ ಮಧ್ಯೆ ಅಮೆರಿಕಾವನ್ನೇ ಸಮರ್ಥಿಸುವ ಹಿಂಬಾಗಿಲ ಹೇಳಿಕೆಗಳೂ ಇವೆ. ಅಫಘಾನಿಸ್ತಾನ ಅಮೆರಿಕದ ಕೈಯಲ್ಲಿರುವ ಮಾಧ್ಯಮಗಳು ಮೂಡಿಸುತ್ತಿರುವ ಚಿತ್ರಗಳು ಎಂಬುದು ಜಗತ್ತು ಸುತ್ತಿದ ಅನಂತಮೂರ್ತಿ ಅವರಿಗೆ ಅರ್ಥವೇ ಆಗುವುದಿಲ್ಲ!

ಬ್ರಾಹ್ಮಣರ ಜನಿವಾರದಷ್ಟು ಮೃದುವಾಗಿರುವ ವಸ್ತು ಇನ್ನೊಂದಿಲ್ಲ. ಆದ್ದರಿಂದಲೇ ಇದೇ ನಿಜವಾದ ಸಾಫ್ಟ್‌ವೇರ್ ಎನ್ನುವ ಹೇಳಿಕೆ ನೀಡುತ್ತಾರೆ ಅವರು.

ಸಾಹಿತ್ಯಕ್ಕೊಂದು ಬದ್ಧತೆ ಇದೆ. ಅದು ಸಮಾಜದ ಹಸನು ಮಾಡಲು ಇರುವ ಮಾಧ್ಯಮ ಎಂಬ ನಂಬಿಕೆ ಅನಂತಮೂರ್ತಿಯವರಿಗೆ ಇಲ್ಲವೇ ಇಲ್ಲ. ಅನಂತಮೂರ್ತಿಯವರಿಗೆ ಸಾಹಿತ್ಯದ ಚಳುವಳಿ ಇರಲಿ ಒಟ್ಟಾರೆ ಚಳುವಳಿಗಳ ಬಗ್ಗೆಯೇ ನಂಬಿಕೆ ಇದ್ದಂತಿಲ್ಲ. ತಮಗೆ ಬೇಕಾದಾಗ, ತಮಗೆ ಒಂದು ಲಾಭವಿದೆ ಎಂದು ಗೊತ್ತಾದಾಗ ಮಾತ್ರ ತುಂಗಾ ಉಳಿಸಿ ಎಂದು ಚಳವಳಿಗೆ ಹಾರಿದ್ದು ಬಿಟ್ಟರೆ ಅನಂತಮೂರ್ತಿ ಚಳವಳಿಯ ಬೆನ್ನಿಗಿದ್ದಿದ್ದು ಯಾವಾಗ?

ಉಢಾಫೆ ಹೇಳಿಕೆಗಳು

ಹಾಗಾಗಿಯೇ ಕಮ್ಯುನಿಸ್ಟರ ಬಗ್ಗೆ ಅವರದ್ದು ಸದಾ ತಕರಾರು. ಮಾವೋನ ಚೈನಾ ಭ್ರಮೆಯ ಬೆನ್ನು ಹತ್ತಿದೆ. ಎಡಪಂಥೀಯರು ಕಡತಂದ ಆಲೋಚನೆ ಮಾಡುತ್ತಾರೆ, ಎಡಪಂಥೀಯ ಬುದ್ಧಿಜೀವಿಗಳಲ್ಲಿ ಕೂಡ ಈಚೆಗೆ ಬಹುಜನ ಸಮ್ಮುಖವಾಗಿ ಆವರವರ ಭಾಷೆಗಳಲ್ಲಿ ಕ್ರಿಯಾಶೀಲವಾಗುವ ಶಕ್ತಿ ಕಾಣಿಸುತ್ತಿಲ್ಲ. ಅವರು ನಡೆಸುವ ಸಂವಾದ ಅಂತರ್‌ರಾಷ್ಟ್ರೀಯ ಮಟ್ಟದಲ್ಲೇ, ಇವರ ಕ್ರಾಂತಿ ಜರುಗುವುದು ಸೆಮಿನಾರುಗಳಲ್ಲಿ ಎಂಬ ಉಢಾಫೆ ಹೇಳಿಕೆಗಳನ್ನು ಕೊಡುತ್ತಾರೆ.

ಚಳುವಳಿ ಎಂಬುದು ದೊಡ್ಡ ಪ್ರಶಸ್ತಿಯ

ಕೋಲಾರ 'ಚಿನ್ನದ ಗಣಿ' ಕಾರ್ಮಿಕರಿಗೆ ಅಕ್ಕಿ ವಿತರಣೆ

ಭೂಮಿಯ ಒಡಲೊಳಗಡೆಯಿಂದ ಚಿನ್ನವನ್ನು ಅಗೆದು ತೆಗೆದು ಈ ದೇಶವನ್ನು ಶ್ರೀಮಂತಗೊಳಿಸಿದ ಶ್ರಮಿಕರು ಆಳುವ ಸರ್ಕಾರಗಳ ಅಭಿವೃದ್ಧಿ-ವಿರೋಧಿ ಕಾರ್ಮಿಕ ದ್ರೋಹಿ ನೀತಿಯಿಂದ ಖಾಲಿ ಹೊಟ್ಟೆಯಲ್ಲಿ ಬೆತ್ತಲೆ ನಿಲ್ಲಬೇಕಾದ ಪರಿಸ್ಥಿತಿ ಬಂದಿದೆ. ಒಂದು ಕಾಲದಲ್ಲಿ 36,000 ಕಾರ್ಮಿಕರು ಕೆಲಸ ಮಾಡುತ್ತಾ ನಳನಳಿಸುತ್ತಿದ್ದ ಈ ಚಿನ್ನದ ಗಣಿ ಕೋಲಾರ ಜಿಲ್ಲೆ - ರಾಜ್ಯದ ಅಷ್ಟೇಕೆ ದೇಶದ ಅಭಿವೃದ್ಧಿಗೆ ನೀಡಿರುವ ಕಾಣಿಕೆ ಅಪಾರ. ಇಂತಹ ಐತಿಹಾಸಿಕ ಗಣಿಯನ್ನು ಮುಚ್ಚಿ 'ವ್ಯವಹಾರ'ವನ್ನು ಬರಖಾಸ್ತು ಮಾಡಬೇಕೆಂದು ನಮ್ಮ ಸರ್ಕಾರಗಳ ನಿರ್ಧಾರ ಖಂಡನೀಯ. ಅದಕ್ಕೆ ತಕ್ಕಂತೆ ಗಣಿಯ ಉಸಿರುಗಟ್ಟಿಸಿ ಕಾರ್ಮಿಕರ ಸಂಖ್ಯೆಯನ್ನು 3,500 ತರಲಾಗಿದೆ.

'ಬಸಿರಲ್ಲಿ ಹೊನ್ನು ಹುದುಗಿಸಿಕೊಂಡ ಈ ಕರಿ ಒಡಲ ಹೆಣ್ಣು' ಎಂದಂತೆ ಈ ಮಣ್ಣಿನಲ್ಲಿ

ಮಂಡಳಿ ಸದಸ್ಯರಾದ ಅರ್ಜುನನ್ ರವರು ಬರಗಾಲದ ಸಂದರ್ಭದಲ್ಲಿ ಕಾರ್ಮಿಕರ ನೆರವನ್ನು ಸ್ಮರಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್. ಸೂರ್ಯ ನಾರಾಯಣರಾವ್ ಮಾತನಾಡಿ, ಚಿನ್ನದ ಗಣಿಯ ಅವನತಿ 1991 ರಿಂದ ತೀವ್ರವಾಗ ಲಾರಂಭಿಸಿತು. ಸಿಐಟಿಯುಗೆ ಮತ ಕೊಟ್ಟರೆ ಗಣಿ ಮುಚ್ಚುತ್ತಾರೆ, ರಾಜೀವ್ ಗಾಂಧಿಗೆ ಓಟು ಕೊಡಿ ಎಂದು ಅಪಪ್ರಚಾರ ನಡೆಸಿ ಐಎನ್‌ಟಿಯುಸಿ ಅಡ್ಮಂತಾಯ ಗೆದ್ದು ಬಂದರು. ಹೋರಾಟ ದಿಕ್ಕು ತಪ್ಪಿತು. ಸಿಐಟಿಯು ಹಾಗೂ ಸಿಪಿಐ(ಎಂ) ಗಳು ಕಾರ್ಮಿಕ ಸಿದ್ಧಾಂತಗಳನ್ನು ಹೊಂದಿರುವ ಸಂಘಟನೆ. ಬಂಡವಾಳಶಾಹಿ ಪಕ್ಷಗಳನ್ನು ನಂಬಿ ಜನ ಮೋಸ ಹೋಗುತ್ತಿದ್ದಾರೆ. ವಾಜಪೇಯಿ ವರ್ಷ ಒಂದು ಕೋಟಿ ಉದ್ಯೋಗ ಕೊಡುತ್ತೇವೆ ಎಂದರು. ಈಗ ಇರುವ ಕಾರ್ಖಾನೆಗಳೇ ಮುಚ್ಚುತ್ತಿವೆ. ಇದು ಬಂಡವಾಳ ಶಾಹಿ ನೀತಿಯ ಫಲ ಎಂದರು.

ರೈತರು-ನಾಗರಿಕರಿಂದ ಸೌಹಾರ್ದತೆ

ಇನ್ನೂ ಹೊನ್ನು ಇದೆ ಎನ್ನುತ್ತವೆ ತಜ್ಞರ ಅಧ್ಯಯನ ವರದಿಗಳು. ಗಣಿಯನ್ನು ಪುನರಾರಂಭಿಸ ಬೇಕು ಎನ್ನುತ್ತದೆ ಕರ್ನಾಟಕ ರಾಜ್ಯ ಹೈಕೋರ್ಟ್. ಸರಕಾರ ಸಿದ್ಧವಿರಬೇಕಲ್ಲ! ಗಣಿ ಪುನರಾರಂಭ ಆಗಿಲ್ಲ. 'ಚಿನ್ನ'ವನ್ನು ತೋಡಿ ತೆಗೆಯುವವರು ಅನ್ನ ಕಾಣದ ಪರಿಸ್ಥಿತಿ ಬಂದಿದೆ.

ಕೋಲಾರ ಕಾರ್ಮಿಕರು ಬರೀ ಚಿನ್ನವನ್ನು ತೆಗೆಯಲಿಲ್ಲ, 1951 ರಲ್ಲಿ ಕೋಲಾರ ಜಿಲ್ಲೆಯಲ್ಲಿ ಭೀಕರ ಬರಗಾಲ ವ್ಯಾಪಿಸಿ, ಬಡರೈತರು ಕೂಲಿಕಾರರು ತತ್ತರಿಸುವಾಗ ಸಾಂತ್ವನದ ತುತ್ತು ಕೊಟ್ಟವರು. ಜಿಲ್ಲೆಯಾದ್ಯಂತ ಹಲವಾರು ಗಂಜಿ ಕೇಂದ್ರ ಸ್ಥಾಪಿಸಿ ರೈತ ಕೂಲಿಕಾರರಿಗೆ ಜೀವ ಚೈತನ್ಯ ನೀಡಿದವರು. ಕೋಲಾರ ಜಿಲ್ಲೆಯ ರೈತರ ಕೂಲಿಕಾರರ ಬಡಜನರ ಚಳುವಳಿ ಬೆಂಬಲವಾಗಿ ಸಹ ನಿಂತಿದ್ದವರು. ಇದರ ನಡುವಿನ ಕೊಂಡಿ ಕಮ್ಯುನಿಸ್ಟ್ ಪಕ್ಷ.

ಇತಿಹಾಸವನ್ನು ಮರೆತವರು ಭವಿಷ್ಯವನ್ನು ಕಟ್ಟಲಾರರು. ಕೋಲಾರದ ಸಿಪಿಐ(ಎಂ) ಜಿಲ್ಲಾ ಸಮ್ಮೇಳನವು ಸಂಕಷ್ಟದಲ್ಲಿರುವ ಈ ಕಾರ್ಮಿಕರ ನೆರವಿಗೆ ನಿಲ್ಲಲು ತೀರ್ಮಾನಿಸಿತು. ಕೇವಲ 10 ದಿನಗಳಲ್ಲಿ 164 ಕ್ವಿಂಟಾಲ್ ಅಕ್ಕಿಯನ್ನು ರೈತರಿಂದ ಜನ ಸಾಮಾನ್ಯರಿಂದ ಸಂಗ್ರಹಿಸ ಲಾಗಿದೆ. ಇದಕ್ಕೆ ಜನತೆ ಅಭೂತಪೂರ್ವವಾಗಿ ಸ್ಪಂದಿಸಿದ್ದಾರೆ. ಕಾರ್ಮಿಕರಿಗೆ ಅಕ್ಕಿಯನ್ನು ವಿತರಿಸುವ ಕಾರ್ಯಕ್ರಮ ಸಹ ಭಾವ ಪೂರ್ಣವಾಗಿ ನಡೆಯಿತು. ಎಷ್ಟು ವಿತರಿಸ ಲಾಯಿತು ಎಂಬುದಕ್ಕಿಂತ 'ಅಕ್ಕಿ' ವಿತರಿಸ ಲಾಯಿತು ಎಂಬ ಸೌಹಾರ್ದವೇ ಸ್ಫೂರ್ತಿಯುತ ವಾದದ್ದು. ಸಿಪಿಐ(ಎಂ)ನ ಮುಖಂಡರು, ಮಾಜಿ ಶಾಸಕರೂ ಆದ ಟಿ.ಎಸ್.ಮಣಿಯರ ಅಧ್ಯಕ್ಷತೆಯಲ್ಲಿ



ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಿ 1965-66 ರಲ್ಲಿ ಜಿಲ್ಲೆಯಲ್ಲಿ ಬರ ಬಂದಾಗ ಗಣಿ ಕಾರ್ಮಿಕರು ಮಾಡಿದ ಸಹಾಯವನ್ನು ಸ್ಮರಿಸಿದರು. ಸಿಪಿಐ(ಎಂ) ಹಾಗೂ ಸಿಐಟಿಯು ಕಾರ್ಮಿಕರಿಗೆ ಪರ್ಯಾಯ ವ್ಯವಸ್ಥೆಗಾಗಿ ಹೋರಾಡುತ್ತಿದೆ. ಈಗ ಸಿಪಿಐ(ಎಂ) ಪಕ್ಷದ ಸಂಗಾತಿಗಳು, ರೈತ-ಕೂಲಿಕಾರರು ವಿನಯ ದಿಂದ ನೀಡುತ್ತಿರುವ ಈ ಅಲ್ಪಕಾಣಿಕೆಯನ್ನು ಸ್ವೀಕರಿಸಬೇಕೆಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಕೆ.ಎಂ.ವೆಂಕಟೇಶ್, ಅಲ್ಲದೇ ಗಂಗುಲಪ್ಪ, ವೆಂಕಟಸ್ವಾಮಿ ರೆಡ್ಡಿ, ಚಿನ್ನದ ಗಣಿ ಕಾರ್ಮಿಕರ ಹಿರಿಯ ಮುಖಂಡ ಸವರಿದಾಸ್, ಗಾಂಧಿನಗರ ನಾರಾಯಸ್ವಾಮಿ ಮುಂತಾದವರು ಪಾಲ್ಗೊಂಡಿದ್ದರು.

ಉತ್ತರ ಪ್ರದೇಶ ಚುನಾವಣೆ

ಬಿಜೆಪಿ ಪ್ರಚಂಡ ಸೋಲು

ದೇಶದ ಜನರ ಗಮನವನ್ನು ಕೇಂದ್ರೀಕರಿಸಿದ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಅದರ ಮೈತ್ರಿಕೂಟ ಹೀನಾಯ ಸೋಲನ್ನು ಅನುಭವಿಸಿದೆ. ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾಗಿ 3ನೇ ಶಕ್ತಿಯಾಗಿ ರೂಪುಗೊಳ್ಳುತ್ತಿರುವ 'ಪೀಪಲ್ಸ್ ಫ್ರಂಟ್' ಅಥವಾ 'ಲೋಕ್ ಮೋರ್ಚಾ' ಮುನ್ನಡೆ ಸಾಧಿಸಿದೆ. ಬಹುತಮದ ಕೊರತೆ ಇದ್ದರೂ, ಅತ್ಯಧಿಕ ಸ್ಥಾನಗಳನ್ನು ಗಳಿಸಿದ ಸಮಾಜವಾದಿ ಪಕ್ಷದ ನಾಯಕ, ಪೀಪಲ್ಸ್ ಫ್ರಂಟ್‌ನ ಸಂಚಾಲಕ ಮುಲಾಯಂ ಸಿಂಗ್ ಯಾದವ್ ರಾಜ್ಯಪಾಲರನ್ನು ಭೇಟಿ ಮಾಡಿ ಸರಕಾರ ರಚಿಸಲು ಅವಕಾಶ ಕೋರಿದ್ದು, ಒಂದು ತಿಂಗಳಲ್ಲಿ ಸದನದಲ್ಲಿ ಬಹುಮತ ಸಾಬೀತು ಪಡಿಸುವುದಾಗಿ ಹೇಳಿದ್ದಾರೆ. ಆದರೆ ಬಿಜೆಪಿಯಲ್ಲಿ ಹಿಂದೆ ಸಕ್ರಿಯರಾಗಿದ್ದ ರಾಜ್ಯಪಾಲರು ಇದುವರೆಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಬದಲಾಗಿ ಸಮರ್ಥಕರ ಪಟ್ಟಿ ನೀಡಬೇಕೆಂದು ಹೇಳಿದ್ದಾರೆ.

ರಾಷ್ಟ್ರಪತಿಗೆ ಮನವಿ: ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಹರಿಕಿಷನ್ ಸಿಂಗ್ ಸುರ್ಜಿತ್ ಅವರ ನೇತೃತ್ವದಲ್ಲಿ ಎಡಪಕ್ಷ ಮತ್ತು ಇತರ ಮುಖಂಡರ ನಿಯೋಗವೊಂದು ರಾಷ್ಟ್ರಪತಿಯವರನ್ನು ಭೇಟಿ ಮಾಡಿದ್ದು, ಸರಕಾರ ರಚಿಸಲು ಅತ್ಯಧಿಕ ಸ್ಥಾನಗಳನ್ನು ಗಳಿಸಿದ ಸಮಾಜವಾದಿ ಪಕ್ಷವನ್ನು ಆಹ್ವಾನಿಸಲು ರಾಜ್ಯಪಾಲರಿಗೆ ಆದೇಶಿಸಬೇಕೆಂದು ಕೋರಿದೆ.

ಎಸ್.ಆರ್.ಬೊಮ್ಮಾಯಿ ಅವರ ಕೇಸಿನಲ್ಲಿ ಬಹುಮತವನ್ನು ವಿಧಾನಸಭೆಯಲ್ಲೇ ಸಾಬೀತು ಪಡಿಸಬೇಕೆಂದು ಸುಪ್ರೀಂ ಕೋರ್ಟು ತೀರ್ಪು ನೀಡಿದ್ದನ್ನು ಉದಾಹರಿಸಿದ ನಿಯೋಗವು ಪ್ರಜಾಪ್ರಭುತ್ವದ ರಕ್ಷಣೆಗಾಗಿ ಸಮಾಜವಾದಿ ಪಕ್ಷದ ಶಾಸಕಾಂಗ ಪಕ್ಷದ ನಾಯಕ ಮುಲಾಯಂ ಸಿಂಗ್



ಯಾದವ್ ಅವರಿಗೆ ಸರಕಾರ ರಚಿಸಲು ಅವಕಾಶ ನೀಡಬೇಕೆಂದು ಮನವಿ ಮಾಡಿದೆ.

ಜಾಗತೀಕರಣ, ಕೋಮುವಾದದ ವಿರುದ್ಧ ತೀರ್ಪು: ಕೇಂದ್ರ ಮತ್ತು ಉತ್ತರ ಪ್ರದೇಶದಲ್ಲಿ ಅಧಿಕಾರ ನಡೆಸುತ್ತಿದ್ದ ಬಿಜೆಪಿ ನೇತೃತ್ವದ ಮೈತ್ರಿಕೂಟದ, ಜಾಗತೀಕರಣ ನೀತಿ ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆ ಹೊರಿಸಿದೆ. ಈ ಅವಧಿಯಲ್ಲಿ ಭ್ರಷ್ಟಾಚಾರ ತುತ್ತತುದಿಗೇರಿತ್ತು. ಖಾಸಗೀಕರಣ ಪ್ರಕ್ರಿಯೆಯಲ್ಲಿ ಆರ್‌ಎಸ್‌ಎಸ್ ನಾಯಕರು .. ಸೇರಿದ ಕಂಪನಿಯ ಶೇರುಗಳನ್ನು ಯುನಿಟ್ ಟ್ರಸ್ಟ್ ಆಫ್ ಇಂಡಿಯಾ (ಯುಟಿಐ) ಖರೀದಿಸುವಂತೆ ಮಾಡಿ, ... ನಡೆದಿವೆ.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದ ಹೆಸರಿನಲ್ಲಿ ಕೋಮುಗಲಭೆಯನ್ನು ಸೃಷ್ಟಿ ಮಾಡಲು ಹವಣಿಸುತ್ತ ಹಿಂದೂ ಮತಗಳನ್ನು ಪಡೆಯಲು ಬಿಜೆಪಿ ಪ್ರಯತ್ನಿಸಿತು. ಅದರಲ್ಲೂ ಸಾಕಷ್ಟು ಮತಗಳು ಬರುವ ಲಕ್ಷಣ ಕಾಣದೆ ಇದ್ದಾಗ 'ಮುಸ್ಲಿಂ ಮತಗಳು ಇಲ್ಲದೇನೆ ನಾವು ಈ ಚುನಾವಣೆ ಗೆಲ್ಲುತ್ತೇವೆ' ಎಂದು ಭಾರತದ ಪ್ರಧಾನ ಮಂತ್ರಿ ವಾಜಪೇಯಿ ಹೇಳಿದರು. ತಾನೊಬ್ಬ ಜಾತ್ಯಾತೀತ ರಾಷ್ಟ್ರದ ಪ್ರಧಾನ ಮಂತ್ರಿ ಎಂಬುದನ್ನು ಅವರು ಮರೆತಿದ್ದರು. ಸಂಘ ಪರಿವಾರದ ನಿಷ್ಠಾವಂತ ಕಾರ್ಯಕರ್ತನೆಂಬುದನ್ನು ಸಾಬೀತು ಪಡಿಸಿದರು.

ಬಿಜೆಪಿ ಸೋತು ನೆಲಕಚ್ಚಿದೆ. ಏಕೈಕ ದೊಡ್ಡ ಶಾಸಕಾಂಗ ಪಕ್ಷವಾಗಿ ಹೊರಹೊಮ್ಮಿರುವ ಮುಲಾಯಂ ಸಿಂಗ್ ಯಾದವ್‌ರ ಸಮಾಜವಾದಿ ಪಕ್ಷಕ್ಕೆ ಸರ್ಕಾರ ರಚಿಸುವ ಹಕ್ಕನ್ನು ರಾಜ್ಯಪಾಲರು ತಿರಸ್ಕರಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಪೂರ್ಣ ಕೈವಾಡವೂ ಇದೆ

ದೇಶದ ಎಲ್ಲಾ ಕಡೆಗಳಿಂದಲೂ ಪ್ರತಿಭಟನೆ ಬಂದ ನಂತರ ತಾನು ಹಾಗೆ ಹೇಳಿಲ್ಲ ಎಂದು ಅಲ್ಲಗಳೆದರು. ಹಾಗೆ ಅಲ್ಲಗಳೆದದ್ದನ್ನು ಚುನಾವಣೆ ಮುಗಿದ ಬಳಿಕ ಮಾತ್ರ. ಇಷ್ಟೊಂದು ಕಪಟ ನಾಟಕ ನಡೆಸಿದರೂ ಬಿಜೆಪಿಗೆ ಚುನಾವಣೆ ಗೆಲ್ಲಲು ಸಾಧ್ಯವಾಗಿಲ್ಲ. ಕೋಮುವಾದದ ವಿರುದ್ಧ, ಜಾಗತೀಕರಣ ನೀತಿಯ ವಿರುದ್ಧ ಜನತೆ ಸ್ಪಷ್ಟ ತೀರ್ಪು ನೀಡಿದ್ದಾರೆ.

ಇಂಟರ್‌ನೆಟ್ ಸಮೀಕ್ಷೆ : 4 ರಾಜ್ಯಗಳಲ್ಲಿ ಮತ್ತು ವಿವಿಧ ಉಪ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರ ಕೂಟಗಳು ಹೀನಾಯ ಸೋಲು ಅನುಭವಿಸಿದ ನಂತರ, ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು 'ಬಿಜೆಪಿ ಸೋಲಿಗೆ ಕಾರಣವೇನು?' ಎಂಬ ಪ್ರಶ್ನೆಯನ್ನು ಇಂಟರ್‌ನೆಟ್ ಮೂಲಕ ಕೇಳಿತ್ತು. ಅದಕ್ಕೆ ಉತ್ತರವಾಗಿ 16000 ಕ್ಕೂ ಹೆಚ್ಚು ಇಂಟರ್‌ನೆಟ್ ಬಳಕೆದಾರರು ಉತ್ತರಿಸಿದ್ದು ಬಿಜೆಪಿ ನೀತಿಯೇ ಅದರ ಸೋಲಿಗೆ ಕಾರಣ ಎಂದು ಶೇ 72 ಮಂದಿ ತಿಳಿಸಿದ್ದಾರೆ.

ಕುದುರೆ ವ್ಯಾಪಾರದ ಮೂಲಕ ಅಧಿಕಾರಕ್ಕೆ :

1996ರಲ್ಲಿ ಬಿಜೆಪಿ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಮತ್ತು ಬಿಎಸ್‌ಪಿ ಪಕ್ಷದ ಶಾಸಕರಿಗೆ ವಿವಿಧ ಆಮಿಷಗಳನ್ನೊಡ್ಡಿ ಪಕ್ಷಾಂತರ ನಡೆಸಿ, ಅವರೆಲ್ಲರಿಗೂ ಮಂತ್ರಿ ಸ್ಥಾನವನ್ನು ನೀಡಿ ಅಧಿಕಾರ ನಡೆಸುತ್ತಿತ್ತು. ಉತ್ತರ ಪ್ರದೇಶದ ಅಸೆಂಬ್ಲಿಯಲ್ಲಿ ರಣರಂಗವೇ ನಡೆದಿತ್ತು. ಈ ಬಾರಿ ಪುನಃ ಕುದುರೆ ವ್ಯಾಪಾರದ ಮೂಲಕ ಅಧಿಕಾರಕ್ಕೆ ಬರಲು ಪ್ರಯತ್ನಿಸಿತ್ತು. **ಬಹುಜನ ಸಮಾಜ ಪಕ್ಷ (ಬಿ.ಎಸ್.ಪಿ)ದ ವತಿಯಿಂದ ಸ್ಪರ್ಧಿಸುತ್ತಿರುವ ಹಲವಾರು ಅಭ್ಯರ್ಥಿಗಳಿಗೆ ಬಿಜೆಪಿ ಹಣಕಾಸು ಸಹಾಯ ನೀಡಿದೆ.** ಅಂದರೆ ಚುನಾವಣೆಗೆ ಮೊದಲೇ ಬಹುಮತ ಸಿಗುವುದಿಲ್ಲವೆಂದು ಖಾತ್ರಿಯಾಗಿರುವ ಬಿಜೆಪಿ, ಸಮ್ಮಿಶ್ರ ಸರಕಾರ ರಚಿಸಲು ಬಿ.ಎಸ್.ಪಿ.ಯ ಮೇಲೆ ಒತ್ತಾಯ ಹೇರಲು ಅಥವಾ ಪಕ್ಷಾಂತರ ನಡೆಸಲು ಅನುಕೂಲವಾಗುವಂತೆ ಬಿ.ಎಸ್.ಪಿ.ಯ ಗೆಲ್ಲಬಹುದಾದ ಹಲವಾರು ಅಭ್ಯರ್ಥಿಗಳಿಗೆ ಹಣಕಾಸು ಸಹಾಯ ಒದಗಿಸಿತು. ಆದರೆ ಬಿಜೆಪಿ, ಬಿಎಸ್‌ಪಿ ಎರಡೂ ಒಟ್ಟಿಗೆ ಸೇರಿದರೂ ಬಹುಮತ ದಕ್ಕುವುದಿಲ್ಲ. ಆದ್ದರಿಂದ ಸರಕಾರ ರಚಿಸುವ ಆಸೆಯನ್ನು ಸದ್ಯಕ್ಕೆ ಕೈಬಿಟ್ಟಿದೆ.

'ಶಿಸ್ತುಬದ್ಧ' ಪಕ್ಷದ ನೀಚನೀತಿ ಇನ್ನೊಮ್ಮೆ ಬಟ್ಟ ಬಯಲಾಗಿದೆ.

ಕ್ರಿಮಿನಲ್‌ಗಳ ದಂಡು : ಉತ್ತರ ಪ್ರದೇಶ ಚುನಾವಣೆಯ ಇನ್ನೊಂದು ವಿಶೇಷ ಕ್ರಿಮಿನಲ್‌ಗಳ ದಂಡು. 403 ಶಾಸಕರನ್ನು ಆಯ್ಕೆ ಮಾಡಬೇಕಾದ ಸ್ಪರ್ಧೆಯಲ್ಲಿ 5553 ಅಭ್ಯರ್ಥಿಗಳು ಕಣದಲ್ಲಿದ್ದರು. ಸಣ್ಣ-ದೊಡ್ಡ ಪಕ್ಷಗಳು ಸೇರಿದಂತೆ 89 ರಾಜಕೀಯ ಪಕ್ಷಗಳು ಸ್ಪರ್ಧಿಸಿವೆ. ಇವರಲ್ಲಿ 800ಕ್ಕೂ ಹೆಚ್ಚು ಅಭ್ಯರ್ಥಿಗಳು ಕ್ರಿಮಿನಲ್ ರೆಕಾರ್ಡ್ ಹೊಂದಿದವರಿದ್ದಾರೆ. ಹಿಂದೆ ಈ ಸಂಖ್ಯೆ 500 ಆಗಿತ್ತು. ಇದರಲ್ಲಿ ಸಿಂಹಪಾಲು ಬಿಜೆಪಿಯದು ಹಾಗೂ ಅದರ ಮಿತ್ರಪಕ್ಷದ್ದು. ಆದರೆ ಉತ್ತರ ಪ್ರದೇಶದ ಬಿಜೆಪಿ ಸರಕಾರದ ಹೇಳಿಕೆ ಪ್ರಕಾರ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದರಲ್ಲಿ ಅವರು ಎಲ್ಲರಿಗಿಂತ ಮುಂದಿದ್ದಾರೆ!

ಅಧಿಕಾರ ಉಳಿಸಿಕೊಳ್ಳಲು ರಾಮಮಂದಿರ : 1989ಕ್ಕೂ ಮೊದಲು ಹೇಳ ಹೆಸರಿಲ್ಲದ ಬಿಜೆಪಿ, ರಾಮಮಂದಿರ ಕಟ್ಟುವ ಹೆಸರಿನಲ್ಲಿ ಆರಂಭಿಸಿದ ಇಟ್ಟಿಗೆಯಾತ್ರೆ, ರಥಯಾತ್ರೆ, ಬಾಬ್ರಿ ಮಸೀದಿ ಉರುಳಿಸಿದ್ದು, ಕೋಮು ಗಲಭೆಯನ್ನು ದೇಶದಾದ್ಯಂತ ಹೆಚ್ಚಿಸುವುದರ ಮೂಲಕ ಮತಗಳನ್ನುಗಳಿಸಿ, ಆ ಮೂಲಕ ಅಧಿಕಾರ ನಡೆಸುತ್ತಿದೆ ಎಂಬುದನ್ನು ಪುನಃ ಹೇಳಬೇಕಾಗಿಲ್ಲ. ಆದರೆ ಉತ್ತರ ಪ್ರದೇಶದಲ್ಲಿ ಅಧಿಕಾರ ಕಳೆದುಕೊಳ್ಳುವುದು ಖಚಿತವಾದ ಹಿನ್ನೆಲೆಯಲ್ಲಿ ವಿಹೆಚ್‌ಪಿ ಮೂಲಕ ಪುನಃ ರಾಮಮಂದಿರ ಕಟ್ಟುವ ಘೋಷಣೆ ಆರಂಭಿಸಿದೆ. ಭಯೋತ್ಪಾದನೆಯ ಹೆಸರಿನಲ್ಲಿ ಮುಸ್ಲಿಂ ವಿರೋಧಿ ಭಾವನೆಯನ್ನು ಕೆರಳಿಸುತ್ತಿದೆ.

ಬಿಜೆಪಿ ಅಧ್ಯಕ್ಷ ಜನಾ ಕೃಷ್ಣ ಮೂರ್ತಿಯವರು, 2004ನೇ ಇಸವಿಯವರೆಗೆ ರಾಮಮಂದಿರ ಪ್ರಶ್ನೆಯನ್ನು ಎತ್ತುವುದಿಲ್ಲ ಎಂದು ಹೇಳಿದ್ದಾರೆ. ಆ ಮೂಲಕ ಕೇಂದ್ರದಲ್ಲಿ ಮೈತ್ರಿಕೂಟದ ಪಕ್ಷಗಳನ್ನು ಒಂದೆಡೆ ಉಳಿಸಿಕೊಳ್ಳುವ ಪ್ರಯತ್ನ ಇನ್ನೊಂದೆಡೆ ಅಧಿಕಾರ ಕಳಕೊಂಡ ಬಳಿಕ ರಾಮಮಂದಿರ ಪ್ರಶ್ನೆಯನ್ನು ಪುನಃ ಎತ್ತಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ.

ರಾಮಮಂದಿರ ವಿವಾದ ಈಗ ಸುಪ್ರಿಂ ಕೋರ್ಟಿನಲ್ಲಿದೆ. 1994ರ ಸುಪ್ರಿಂ ಕೋರ್ಟ್ ಆದೇಶದ ಪ್ರಕಾರ (ಪ್ಯಾರಾ 96) ಈ ವಿವಾದ ಬಗೆಹರಿಯುವವರೆಗೆ ಕೇಂದ್ರ ಸರಕಾರವೂ ಸೇರಿದಂತೆ ಯಾರೂ ಮಧ್ಯ ಪ್ರವೇಶಿಸುವಂತಿಲ್ಲ. ಆದರೆ ಪ್ರಧಾನ ಮಂತ್ರಿ ವಾಜಪೇಯಿಯವರು ಈ ವಿಷಯದಲ್ಲಿ ಮಧ್ಯ ಪ್ರವೇಶಿಸಲು ಕಾನೂನು ಸಚಿವ ಅರುಣ್ ಜೇಟ್ಲಿಯವರಿಗೆ ವಿನಂತಿಸಿಕೊಂಡಿದ್ದಾರೆ. ಕೋರ್ಟು ತೀರ್ಮಾನವೇ ಅಂತಿಮ ಎಂದು ಹೇಳುವ ಪ್ರಧಾನಿಯವರಿಗೆ ಮಧ್ಯಪ್ರವೇಶಿಸುವಂತೆ ಅರುಣ್ ಜೇಟ್ಲಿಯವರಿಗೆ ಹೇಳುವ ಅವಶ್ಯಕತೆಯಾದರೂ ಏನು?

ಎನ್.ಡಿ.ಎ ಮಿತ್ರಕೂಟದಲ್ಲಿ ವೈರುಧ್ಯ : ತನಗಿದ್ದ ಜನಪ್ರಿಯತೆ ಕುಗ್ಗುವುದನ್ನು ಮೊದಲೇ ಮನಗಂಡ ಬಿಜೆಪಿ, ಮಿತ್ರ ಪಕ್ಷಗಳ ಸಂಖ್ಯೆಯನ್ನು ಜಾಸ್ತಿ ಮಾಡಿಕೊಳ್ಳಲು ಪ್ರಯತ್ನಿಸಿತು. ಅದರ ಒಂದು ಭಾಗವಾಗಿ ಪಶ್ಚಿಮ ಉತ್ತರ ಪ್ರದೇಶದ ಜಾಟ್ ಸಮುದಾಯದ ಮಧ್ಯೆ ಪ್ರಭಾವಿ ವ್ಯಕ್ತಿಯಾದ ಅಜಿತ್ ಸಿಂಗ್ ಅವರನ್ನು ಕೇಂದ್ರ ಸಂಪುಟಕ್ಕೆ ಸೇರಿಸಿಕೊಳ್ಳಲಾಯ್ತು. ಆದರೆ ಅದೇ ಮೈತ್ರಿಕೂಟದ ಭಾಗವಾಗಿರುವ ಹರಿಯಾಣದ ಮುಖ್ಯಮಂತ್ರಿ ಓಂಪ್ರಕಾಶ್ ಚೌತಾಲರವರ ಪಕ್ಷವು ಅಜಿತ್ ಸಿಂಗ್ ಪಕ್ಷದ ವಿರುದ್ಧ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿದೆ.

ಹಾಗೆಯೇ ಕೇಂದ್ರ ಸರಕಾರದ ಭಾಗವಾಗಿರುವ ಮೇನಕಾಗಾಂಧಿ ಮತ್ತು ರಾಂ ವಿಲಾಸ್ ಪಾಸ್ವಾನ್‌ರವರ ಪಕ್ಷಗಳು ಬಿಜೆಪಿಯ ವಿರುದ್ಧ ಅಭ್ಯರ್ಥಿಗಳನ್ನು ನಿಲ್ಲಿಸಿದೆ.

ಇಂತಹ ಗೊಂದಲಮಯ ಸನ್ನಿವೇಶದಲ್ಲಿ ಬಿಜೆಪಿ ಕೂಟಕ್ಕೆ ಸೋಲು ಕಟ್ಟಿಟ್ಟ ಬುತ್ತಿ ಎಂದು ಮೊದಲೇ ಭಾವಿಸಲಾಗಿತ್ತು. ದೇಶದ ಐಕ್ಯತೆಯನ್ನು ಕಾಪಾಡುವುದಕ್ಕಾಗಿ ಇದು ಅಗತ್ಯವೂ ಕೂಡಾ.

- ಬಾಲಕೃಷ್ಣ ಶೆಟ್ಟಿ

ತ್ರಿಪುರಾ ಉಪ ಚುನಾವಣೆ

ಎಡರಂಗಕ್ಕೆ ಅಭೂತಪೂರ್ವ ಗೆಲುವು

ಸಮರ್ ಚೌದರಿಯವರ ನಿಧನದಿಂದ ತೆರವಾಗಿದ್ದ ಪಶ್ಚಿಮ ತ್ರಿಪುರಾ ಲೋಕಸಭಾ ಉಪಚುನಾವಣೆಯಲ್ಲಿ ಸಿಪಿಐ(ಎಂ) ಮತ್ತು ಎಡರಂಗದ ಅಭ್ಯರ್ಥಿ ಕಾಂ। ಖಗೇನ್ ದಾಸ್ ಅದ್ಭುತ ಗೆಲುವು ಸಾಧಿಸಿದ್ದಾರೆ.

3,91,482 ಮತಗಳನ್ನು ಪಡೆದು 1.48 ಲಕ್ಷ ಅಧಿಕ ಮತಗಳಿಂದ ಕಾಂಗ್ರೆಸ್ INPT ಅಭ್ಯರ್ಥಿ ವಿರುದ್ಧ ಜಯಸಾಧಿಸಿದ ಎಡರಂಗ ಕಳೆದುಕೊಂಡು 3ನೇ ಸ್ಥಾನಕ್ಕೆ ಹೋಗುವಂತೆ ಮಾಡಿದೆ. ಈ ಅದ್ಭುತ ಜಯವು ತ್ರಿಪುರಾದ ಜನತೆ ಎಡರಂಗದ ಮೇಲಿರಿಸಿರುವ ವಿಶ್ವಾಸಕ್ಕೆ ಮತ್ತು ಸಿಪಿಐ(ಎಂ) ಹಾಗೂ ಎಡರಂಗ ತ್ರಿಪುರಾದ ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ನಡುವೆ ಸಾಧಿಸಿರುವ ಐಕ್ಯತೆಗೆ ಸಾಕ್ಷಿಯಾಗಿದೆ.

ಈ ಗೆಲುವು ಸಾಧ್ಯವಾದದ್ದು ಹೇಗೆ ?

ಸಾಮ್ರಾಜ್ಯಶಾಹಿ ಜಾಗತೀಕರಣ, ಯುದ್ಧ ಮತ್ತು ಭಯೋತ್ಪಾದನೆಗೆ ಪ್ರತಿರೋಧ

ಇತ್ತೀಚೆಗೆ ಅಂದರೆ ಸೆಪ್ಟೆಂಬರ್ 11, 2001 ರ ಭೀಕರ ಭಯೋತ್ಪಾದಕ ಕೃತ್ಯ ಮತ್ತು ಆನಂತರದ ಅಮೆರಿಕ ಜಗತ್ತಿನ ಮೇಲೆ ಹರಿಯ ಬಿಟ್ಟಿರುವ ಯುದ್ಧ ಅಂತರ್ರಾಷ್ಟ್ರೀಯ ಪರಿಸ್ಥಿತಿಗೆ ಆತಂಕಕಾರಿ ತಿರುವು ಕೊಟ್ಟಿದೆ. 17ನೇ ಸಿಪಿಐ(ಎಂ)ನ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯ, 16ನೇ ಮಹಾಧಿವೇಶನದ ನಂತರದ ಅವಧಿಯ ಪ್ರಮುಖ ಅಂತರ್ರಾಷ್ಟ್ರೀಯ ಬೆಳವಣಿಗೆಗಳನ್ನು ಗುರುತಿಸಿದೆ. ಸೆಪ್ಟೆಂಬರ್ 11 ರ ಮೊದಲು ಮತ್ತು ಆನಂತರದ ಪರಿಸ್ಥಿತಿಯ ರೂಪುರೇಷೆ ಕರಡು ನಿರ್ಣಯದಲ್ಲಿದೆ. ಐಕ್ಯರಂಗದ ಓದುಗರಿಗೆ ವರದಿಯಲ್ಲಿ ಪ್ರಮುಖ ಅಂಶಗಳನ್ನು ಪರಿಚಯಿಸುವ ಲೇಖನ ಮಾಲೆ ಆರಂಭಗೊಂಡಿದೆ. ಮೊದಲ ಕಂತು ಇಲ್ಲಿ....

ಶರತ್‌ಚಂದ್ರ

16ನೇ ಮಹಾಧಿವೇಶನದ ನಂತರದ ಅಂತರ್ರಾಷ್ಟ್ರೀಯ ಬೆಳವಣಿಗೆಗಳು

ಸಿಪಿಐ(ಎಂ) ನ 16ನೇ ಮಹಾಧಿವೇಶನದ ರಾಜಕೀಯ ನಿರ್ಣಯ ಅಂತರ್ರಾಷ್ಟ್ರೀಯ ವಿದ್ಯಮಾನಗಳಲ್ಲಿ ಎರಡು ಪ್ರಮುಖ ಪ್ರವೃತ್ತಿಗಳನ್ನು ಗುರುತಿಸಿತ್ತು. ಸೋವಿಯತ್ ಒಕ್ಕೂಟ ಮತ್ತು ಪೂರ್ವಯುರೋಪಿನಲ್ಲಿ ಸಮಾಜವಾದಿ ವ್ಯವಸ್ಥೆ ಕಳಚಿ ಬಿದ್ದ ಹಿನ್ನೆಲೆಯಲ್ಲಿ ಸಾಮ್ರಾಜ್ಯಶಾಹಿಯ ಬಲ ಹೆಚ್ಚಾಗಿದ್ದು ಅದು ತನ್ನ ಏಕಚಕ್ರಾಧಿಪತ್ಯ ಸ್ಥಾಪಿಸಲು ಧಾಳಿ ಆರಂಭಿಸಿದೆ. ಆದರೆ ಈ ಧಾಳಿಗೆ ರಾಜಕೀಯ, ಸೈದ್ಧಾಂತಿಕ ಮತ್ತು ಆರ್ಥಿಕ ಹಂತಗಳಲ್ಲಿ ಅಷ್ಟೇ ತೀವ್ರ ಪ್ರತಿರೋಧವೂ ಕಂಡು ಬಂದಿದೆ. ಸೆಪ್ಟೆಂಬರ್ 11 ರ ಘಟನೆಗಳ ನಂತರ, ಸಾಮ್ರಾಜ್ಯಶಾಹಿ ತನ್ನ ಏಕಚಕ್ರಾಧಿಪತ್ಯವನ್ನು ಇನ್ನೂ ಮೇಲ್ ಹಂತಕ್ಕೇರಿಸಲು ಹೆಣಗುತ್ತಿದೆ. ಶೀತಲ ಸಮರದ ದಶಕಗಳ ಕಾಲಾವಧಿಯಲ್ಲಿ 'ಕಮ್ಯುನಿಸಂ ವಿರುದ್ಧ ಹೋರಾಟ'ದ ಘೋಷಣೆಯ ಬದಲಿಗೆ ಈಗ 'ಭಯೋತ್ಪಾದನೆಯ ವಿರುದ್ಧ ಹೋರಾಟ' ವೆಂಬುದು ಸಾಮ್ರಾಜ್ಯಶಾಹಿಯ ಹೊಸ ರಣಭೇರಿಯಾಗಿದೆ. ಇದರ ವಿರುದ್ಧ ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಜಾಗತಿಕ ಪ್ರತಿರೋಧವನ್ನು ಕಟ್ಟಿ ಬೆಳೆಸುವುದು ಮತ್ತು ಭಾರತೀಯ ಜನತೆಯನ್ನು ಅದಕ್ಕಾಗಿ ಅಣಿ ನೆರೆಸಲು ಪಕ್ಷ ಪಣತೊಡುವುದು ಎಂಬುದು ಸಿಪಿಐ(ಎಂ) ನ 17ನೇ ಮಹಾಧಿವೇಶನದ ಕರಡು ನಿರ್ಣಯದ ಸಾರ.

ತೀವ್ರ ಜಾಗತಿಕ ಆರ್ಥಿಕ ಹಿಂಜರಿತ ಈ ಅವಧಿಯ ಇನ್ನೊಂದು ಪ್ರಮುಖ ಬೆಳವಣಿಗೆ. ಸೆಪ್ಟೆಂಬರ್ 11ರ ಘಟನೆಗಳು ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟನ್ನು ಇನ್ನಷ್ಟು ತೀವ್ರಗೊಳಿಸಿವೆ. ಬೆಳವಣಿಗೆ ದರದಲ್ಲಿ ಕಡಿತ, ಜಾಗತಿಕ ವ್ಯಾಪಾರದ ಬೆಳವಣಿಗೆಯಲ್ಲಿ ಕುಸಿತವಾಗಿದ್ದು ಈ ಆರ್ಥಿಕ ಬಿಕ್ಕಟ್ಟಿನ ಭಾರವನ್ನು ವಿಕಾಸಶೀಲ ದೇಶಗಳ ಜನತೆಯ ಮೇಲೆಹೊರಿಸಲಾಗುತ್ತಿದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟು

16ನೇ ಮಹಾಧಿವೇಶನದ ನಿರ್ಣಯ ಜಾಗತಿಕ ಬಂಡವಾಳಶಾಹಿಯ ಎರಡು ಪ್ರಮುಖ ಲಕ್ಷಣಗಳನ್ನು ಗುರುತಿಸಿತ್ತು. ಉದ್ಯೋಗರಹಿತ ಬೆಳವಣಿಗೆ ಮತ್ತು ಅಸಮಾನತೆಗಳು



ಹೆಚ್ಚುತ್ತಿರುವುದು. ಇವೆರಡೂ ಆ ನಂತರದ ಅವಧಿಯಲ್ಲಿ ಇನ್ನೂ ಹರಿತಗೊಂಡಿವೆ. ನಿರುದ್ಯೋಗ ದರ, ಅಭಿವೃದ್ಧಿ ದೇಶಗಳಲ್ಲಿ ಶ್ರೀಮಂತರ - ಬಡವರ ನಡುವಿನ ಅಂತರ, ಶ್ರೀಮಂತ - ಬಡ ದೇಶಗಳ ನಡುವಿನ ಅಂತರ ಹೆಚ್ಚಿದೆ. ಹಲವು ದೇಶಗಳ ಮಾನವ ಅಭಿವೃದ್ಧಿ ಸೂಚ್ಯಂಕ 1985 ರಿಂದೀಚೆಗೆ ಸತತವಾಗಿ ಕಡಿಮೆಯಾಗಿದೆ. ಉತ್ಪಾದನೆಯಲ್ಲಿ ವಿನಿಯೋಗ ವಾಗುವ ಕೈಗಾರಿಕಾ ಬಂಡವಾಳದ ತುಲನೆಯಲ್ಲಿ, ಹಣಕಾಸು ಬಂಡವಾಳದ ಬಲ ಹೆಚ್ಚಿದೆ. ಜಾಗತಿಕ ಹಣಕಾಸು ಮಾರುಕಟ್ಟೆಗಳಲ್ಲಿ ವಹಿವಾಟು, ಜಾಗತಿಕ ವ್ಯಾಪಾರದ 50 ಪಟ್ಟು - ಎನ್ನುವುದೇ ಪರಿಸ್ಥಿತಿಯ ಭೀಕರತೆಯನ್ನು ತೋರಿಸುತ್ತದೆ.

ಒಡೆದು, ಹೊಸ ಜಾಗತಿಕ ಬಿಕ್ಕಟ್ಟಿಗೆ ಹಾದಿ ಮಾಡಿಕೊಟ್ಟಿದೆ. ಬಂಡವಾಳಶಾಹಿ ಬಿಕ್ಕಟ್ಟು ಎಲ್ಲಾ ಬಂಡವಾಳಶಾಹಿ ಕೇಂದ್ರಗಳನ್ನು ಆವರಿಸಿದ್ದು, ಇದು ಈ ಬಾರಿಯ ಬಿಕ್ಕಟ್ಟಿನ ವಿಶೇಷ. ಯುರೋಪಿಯನ್ ಒಕ್ಕೂಟ, ಜಪಾನ್, ಉತ್ತರ ಅಮೆರಿಕ - ಎಲ್ಲವೂ ಬಿಕ್ಕಟ್ಟಿನಲ್ಲಿವೆ. ಈ ಜಾಗತಿಕ ಆರ್ಥಿಕ ಬಿಕ್ಕಟ್ಟು ಮುಖ್ಯವಾಗಿ ವಿಕಾಸಶೀಲ ದೇಶಗಳ ಜನತೆಯನ್ನು ತೀವ್ರವಾಗಿ ತಟ್ಟಿದೆ. ಐಎಂಎಫ್ 'ಮಾದರಿ ದೇಶ' ಎಂದುಹಾಡಿ ಹೊಗಳಿದ್ದ ಅರ್ಜೆಂಟಿನಾದ ಇತ್ತೀಚಿನ ಬಿಕ್ಕಟ್ಟು, ಇದಕ್ಕಿಂತ ಮುಂಚೆ ಇಂಡೋನೇಶ್ಯಾ, ತುರ್ಕಿಗಳಲ್ಲಿ ಅಲ್ಲೋಲ-ಕಲ್ಲೋಲ ಇದಕ್ಕೆ ಇತ್ತೀಚಿನ ಉದಾಹರಣೆಗಳು. ಬಂಡವಾಳಶಾಹಿಯ ಅಮಾನವೀಯ ಸ್ವರೂಪ ಎಲ್ಲಾ ನಾಲ್ಕು ಜಾಗತಿಕ ಸಾಮಾಜಿಕ ವೈರುಧ್ಯಗಳನ್ನು ತೀಕ್ಷ್ಣಗೊಳಿಸಿದೆ. ಅದರಲ್ಲೂ ಸಾಮ್ರಾಜ್ಯಶಾಹಿ ಮತ್ತು ವಿಕಾಸಶೀಲ ದೇಶಗಳ ನಡುವಣ ವೈರುಧ್ಯಗಳು ಇನ್ನಷ್ಟು ತೀಕ್ಷ್ಣಗೊಂಡಿವೆ.

ರಾಜಕೀಯ-ಮಿಲಿಟರಿ ಅಧಿಪತ್ಯಕ್ಕೆ ಹುನ್ನಾರ

ಅಮೆರಿಕ ಈ ಅವಧಿಯಲ್ಲಿ ತನ್ನ ರಾಜಕೀಯ-ಮಿಲಿಟರಿ ಅಧಿಪತ್ಯ ಗಟ್ಟಿಗೊಳಿಸಲು ಪ್ರಯತ್ನಿಸಿದೆ. ಪ್ಯಾಲೆಸ್ಟೀನ್ ಜನತೆ ಮೇಲೆ ಇಸ್ರೇಲಿ ಆಕ್ರಮಣಕ್ಕೆ ಸತತ ಕುಮ್ಮಕ್ಕು, ಇರಾಕಿನ ಮೇಲೆ ಆಕ್ರಮಣ ಮತ್ತು ಅಮಾನವೀಯ ಆರ್ಥಿಕ ದಿಗ್ಬಂಧನ, ಯುಗೋಸ್ಲಾವಿಯಾದ ಮೇಲೆ 78 ದಿನಗಳ ಬರ್ಬರ ಬಾಂಬ್ ಧಾಳಿ, ಕೊಸೊವೊವನ್ನು ಅಧೀನ ಸಾಮಂತ ಪ್ರದೇಶವಾಗಿಸಿದ್ದು - ಇವು ಕೆಲವು ಉದಾಹರಣೆಗಳು. ನಾಟೋ ಹೆಚ್ಚಿಚ್ಚು ಅಮೆರಿಕದ ಯಜಮಾನಿಕೆಗೆ ಒಳಗಾಗಿದೆ. ವಿಶ್ವಸಂಸ್ಥೆ ಹೆಚ್ಚಿಚ್ಚು ಅಮೆರಿಕದ ನಾಯಕತ್ವದ ನಾಟೋ ಮಿಲಿಟರಿ ಕೂಟದ ತೊತ್ತಾಗಿದೆ. ಜಾರ್ಜ್ ಬುಶ್ ಅಧ್ಯಕ್ಷರಾದ ಮೇಲೆ ಅಮೆರಿಕದ ಮಿಲಿಟರಿ ಅಧಿಪತ್ಯದ ಹುಚ್ಚು ತಾರಕಕ್ಕೇರಿದೆ. 1972 ರ ಕ್ಷಿಪಣಿ- ವಿರೋಧಿ ಒಪ್ಪಂದವನ್ನು ಅಮೆರಿಕ ಏಕಪಕ್ಷೀಯವಾಗಿ ತಿರಸ್ಕರಿಸಿದ್ದು, ಹೊಸ ಮಿನಿ-ತಾರಾಸಮರ ಪ್ರಯತ್ನ ...

ಶಸ್ತ್ರಾಸ್ತ್ರ ಪೈಪೋಟಿಯನ್ನು ಆರಂಭಿಸುವ, ವಿಶ್ವಶಾಂತಿಗೆ ತೀವ್ರ ಅಪಾಯ ಒಡ್ಡುವ ಸಂಭವವಿದೆ.

ಆದರೆ ಅಮೆರಿಕ ಈ ಹುನ್ನಾರಕ್ಕೆ ಅಷ್ಟೇ ತೀವ್ರವಾದ ಪ್ರತಿರೋಧವೂ ಬರುತ್ತಿದೆ. **ಎನ್‌ಎಂಡಿ**ಗೆ ರಶ್ಯಾ-ಚೀನಾಗಳ ಜಂಟಿ ವಿರೋಧ, ಚೀನಾ-ರಶ್ಯಾಗಳ ನಡುವೆ ನಿಕಟ ಮಿಲಿಟರಿ ಒಪ್ಪಂದ, ಚೀನಾ-ರಶ್ಯಾಗಳ ಜತೆ ನಾಲ್ಕು ಮಧ್ಯ ಏಶ್ಯಾಗಳು 'ಷಾಂಘಾಯ್ ವೇದಿಕೆ' ಯ ರಚನೆ, ಎನ್‌ಎಂಡಿಗೆ ಅಮೆರಿಕ ನಾಟೋ ಮಿತ್ರರಿಂದಲೂ ವಿರೋಧ, ಅಮೆರಿಕದ ನಿಲುವು ಧಿಕ್ಕರಿಸಿ 186 ದೇಶಗಳು ಅಂಗೀಕರಿಸಿದ ಕ್ಯೋಟೊ ಪರಿಸರ - ರಕ್ಷಣಾ ಒಪ್ಪಂದ, ಕ್ಯೂಬಾದ ಮೇಲೆ ದಿಗ್ಬಂಧನ ತೆಗೆಯಲು ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಸತತ ಭಾರಿ ಬಹುಮತದ ನಿರ್ಣಯ, ವಿಶ್ವಸಂಸ್ಥೆ ಮಾನವ ಹಕ್ಕು ಕಮಿಷನ್ನಿನ ಚುನಾವಣೆಯಲ್ಲಿ ಅಮೆರಿಕಕ್ಕೆ ಅವಮಾನಕಾರಿ ಸೋಲು, ದರ್ಬಾನ್‌ನಲ್ಲಿ ನಡೆದ ವರ್ಣಬೇಧ ವಿರೋಧಿ ಅಂತರ್ರಾಷ್ಟ್ರೀಯ ಸಮ್ಮೇಳನದಲ್ಲಿ ಅಮೆರಿಕವನ್ನು ಧಿಕ್ಕರಿಸಿ ಜಂಟಿ ಘೋಷಣೆ ಅಂಗೀಕಾರ- ಇವೆಲ್ಲಾ ಇಂತಹ ಪ್ರತಿರೋಧದ ಉತ್ತಮ ಉದಾಹರಣೆಗಳು.

ವಿಕಾಸಶೀಲ ದೇಶಗಳ ಆರ್ಥಿಕ ಸಾರ್ವಭೌಮತ್ವದ ಮೇಲೆ ಅಮೆರಿಕನ್ ಧಾಳಿ ಅವ್ಯಾಹತವಾಗಿ ಮುಂದುವರೆದಿದೆ. ದೋಹಾದಲ್ಲಿ ಡಬ್ಲ್ಯುಟಿಓ ಮಂತ್ರಿಗಳ ಸಭೆಯಲ್ಲಿ ಬಡದೇಶಗಳ ಮೇಲೆ ಶ್ರೀಮಂತ ದೇಶಗಳ ಅಜೆಂಡಾ ಹೊರಿಸಿದ್ದು, ಯುರೋಪಿಯನ್ ಒಕ್ಕೂಟ 'ಯುರೋ' ಸಾಮಾನ್ಯ ನಾಣ್ಯದ ಜತೆಗೆ ಹೊಸ ಹಂತ ಮುಟ್ಟಿರುವುದು, FTAA ವಾಣಿಜ್ಯ ಒಕ್ಕೂಟ ಸ್ಥಾಪನೆ - ಇವೆಲ್ಲಾ ಅಮೆರಿಕದ ಆರ್ಥಿಕ ಅಧಿಪತ್ಯ ಬಲಪಡಿಸುವ ಬೆಳವಣಿಗೆಗಳು.

ಜಾಗತಿಕ ಜನತಾ ಪ್ರತಿರೋಧ

ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ತೀವ್ರ ಜಾಗತಿಕ ಪ್ರತಿಭಟನಾ ಚಳುವಳಿ ಮೂಡಿಬಂದಿದ್ದು ಈ ಅವಧಿಯ ಅತ್ಯಂತ ಪ್ರಮುಖ ಬೆಳವಣಿಗೆ. 1999 ರಲ್ಲಿ ಅಮೆರಿಕದ ಸಿಯಾಟ್ಲ್‌ನಲ್ಲಿ ನಡೆದ WTO ಸಭೆಯ ಸಂದರ್ಭದಲ್ಲಿ ಆರಂಭವಾದ ಪ್ರತಿಭಟನಾ ಪರಂಪರೆ ಕಳೆದ ಮೂರು ವರ್ಷಗಳಲ್ಲಿ ಗಟ್ಟಿಗೊಂಡಿದೆ. ಸಾಮ್ರಾಜ್ಯಶಾಹಿ ಸಂಘಟನೆಗಳು (ಉದಾ: ಐಎಂಎಫ್, ವಿಶ್ವ ಬ್ಯಾಂಕ್, ಡಬ್ಲ್ಯುಟಿಓ) ಯಾವುದೇ ಅಂತರ್ರಾಷ್ಟ್ರೀಯ ಸಭೆಗಳು ಭಾರಿ ಸಾಮೂಹಿಕ ನಾಟೋ ಪ್ರತಿಭಟನೆಗಳಿಲ್ಲದೆ ನಡೆದಿಲ್ಲ. ಸಭೆಯಿಂದ ಸಭೆಗೆ ಭಾಗವಹಿಸುವವರ ಸಂಖ್ಯೆ ಹೆಚ್ಚುತ್ತಾ ನಡೆದಿದೆ. ಉತ್ತರ ಅಮೆರಿಕಾ, ಯುರೋಪಿನ ಅಭಿವೃದ್ಧ ದೇಶಗಳಲ್ಲೂ ಭಾರಿ ಪ್ರತಿಭಟನೆಗಳು ನಡೆದಿವೆ.

ಸಮಾಜವಾದದ ಬೆಳಗು

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಘೋರ ಎಲ್ಲರ ಗಮನ ಸೆಳೆದಿದೆ. ವಿಯೆಟ್ನಾಮ್, ಕ್ಯೂಬಾ, ಉತ್ತರ ಕೊರಿಯಾಗಳು ಸಹ ಅವು ಎದುರಿಸುತ್ತಿರುವ ಸಂಕಷ್ಟಗಳ ನಡುವೆಯೂ ಉತ್ತಮ ಪ್ರಗತಿ ಸಾಧಿಸಿವೆ. ಮಾಜಿ ಸಮಾಜವಾದಿ ದೇಶಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಪುನಃ ಸ್ಥಾಪಿಸುವ ಪ್ರಯತ್ನ ಮತ್ತು ಅದರ ಪರಿಣಾಮಗಳು ಜನರಿಗೆ ಸ್ಪಷ್ಟವಾಗಿದ್ದು ಅದಕ್ಕೆ ಪ್ರತಿಕ್ರಿಯೆ ಆರಂಭವಾಗಿದೆ. ಬಂಡವಾಳಶಾಹಿ ಪುನಃ ಸ್ಥಾಪನೆ ಪ್ರಕ್ರಿಯೆ ಆರಂಭಿಸಿದ ಪ್ರತಿ-ಕ್ರಾಂತಿ ಶಕ್ತಿಗಳು ಚುನಾವಣೆಗಳಲ್ಲಿ ಪರಾಭವ ಹೊಂದುತ್ತಿರುವುದು ಇದರ ಲಕ್ಷಣ. ಮೊದಲು ಮಂಗೋಲಿಯಾ, ಮಾಲ್ಡಿವಿಯಾ, ಉಕ್ರೇನ್ ಮತ್ತು ಇತ್ತೀಚೆಗೆ ಪೋಲೆಂಡ್ ಇದಕ್ಕೆ ಉತ್ತಮ ಉದಾಹರಣೆ. ರಶ್ಯಾದಿಂದ ಆರಂಭಿಸಿ ಈ ಎಲ್ಲಾ ದೇಶಗಳಲ್ಲಿ ಎಡ ಶಕ್ತಿಗಳ ಗಟ್ಟಿಯಾಗಿ ಪ್ರಮುಖ ರಾಜಕೀಯ ಶಕ್ತಿಯಾಗುತ್ತಿರುವುದು ಬಂಡವಾಳಶಾಹಿ ಪುನಃ ಸ್ಥಾಪನೆ ವಿರುದ್ಧ ದೀರ್ಘ ಹೋರಾಟದ ಪ್ರಕ್ರಿಯೆಯ ಭಾಗ.

ಸಾಮ್ರಾಜ್ಯಶಾಹಿ ಹುನ್ನಾರ

ಈ ಹಿನ್ನೆಲೆಯಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳು, ಸೆಪ್ಟೆಂಬರ್ 11 ರ ಘಟನೆಗಳನ್ನು ಬಳಸಿ ಇಡೀ ಜಗತ್ತನ್ನು ಭಯೋತ್ಪಾದನೆಯ ಪರ ಮತ್ತು ವಿರುದ್ಧದ ಬಣಗಳಿಗೆ ಕೃತಕವಾಗಿ ಇಬ್ಭಾಗ ಮಾಡಲು ಪ್ರಯತ್ನಿಸುತ್ತಿವೆ. ಭಯೋತ್ಪಾದನೆ ವಿರುದ್ಧ ಹೋರಾಟದ ನೆಪದಲ್ಲಿ ಸಾಮ್ರಾಜ್ಯಶಾಹಿ ವಿರುದ್ಧ ಎಲ್ಲಾ ಪ್ರತಿರೋಧವನ್ನು ಎಲ್ಲಾ ದೇಶಗಳಲ್ಲಿ ಆಂತರಿಕವಾಗಿಯೂ ಅಂತರ್ರಾಷ್ಟ್ರೀಯವಾಗಿಯೂ ಹತ್ತಿಕ್ಕುವ ಹುನ್ನಾರ ನಡೆಸಿವೆ. 'ಭಯೋತ್ಪಾದನೆಯ ವಿರುದ್ಧ ಯುದ್ಧ'ವನ್ನು ಅಫಘಾನಿಸ್ತಾದಿಂದ ಆರಂಭಿಸಿ ಇಡೀ ಜಗತ್ತಿಗೆ ಹಬ್ಬಿಸುವ ಮಾತಾಡುವಷ್ಟು ಆ ಶಕ್ತಿಗಳಿಗೆ ಧೈರ್ಯ ಬಂದಿದೆ. ಇರಾಕ್ ಮತ್ತು ಸೋಮಾಲಿಯಾ ಮುಂದಿನ ಬಲಿಪಶು ಎನ್ನಲಾಗಿದೆ. ಉತ್ತರ ಕೊರಿಯಾ, ಇರಾನ್‌ನನ್ನು ಗುರಿಯಾಗಿಸಲಾಗಿದೆ.

ಪ್ರತಿಗಾಮಿಗಳ ಬಳಕೆ

ಕಳೆದ ಐದು ದಶಕಗಳಲ್ಲಿ ತನ್ನ ಅಧಿಪತ್ಯ ಮುಂದುವರೆಸಲು ಸಾಮ್ರಾಜ್ಯಶಾಹಿ ಎಲ್ಲಾ ರೀತಿಯ ಪ್ರತಿಗಾಮೀ ಮತ್ತು ಮೂಲಭೂತವಾದಿ ಶಕ್ತಿಗಳನ್ನು ಬಳಸಿಕೊಂಡಿವೆ. ಜಗತ್ತಿನಾದ್ಯಂತ ಪ್ರಗತಿಪರ ಸರ್ಕಾರಗಳ, ಚಳುವಳಿಗಳ ವಿರುದ್ಧ ಬಳಸಲು ಇಂತಹ ಶಕ್ತಿಗಳನ್ನು ಹುಟ್ಟು ಹಾಕಿವೆ, ಪೋಷಿಸಿವೆ. ಆರ್ಥಿಕ ಮಿಲಿಟರಿ ಬೆಂಬಲ ನೀಡಿವೆ. ಅಮೆರಿಕ 'ಪ್ರಭುತ್ವದ ಭಯೋತ್ಪಾದನೆ' ಯ ನೀತಿಯನ್ನು ಹಿಂದಿನಿಂದಲೂ ಪಾಲಿಸುತ್ತಾ ಬಂದಿದೆ. ಅಮೆರಿಕನ್ ಮಾದರಿಯ 'ಪ್ರಭುತ್ವದ ಭಯೋತ್ಪಾದನೆ' ಮತ್ತು ಸೆಪ್ಟೆಂರ್ 11 ರ ಮಾದರಿಯ 'ವೈಯಕ್ತಿಕ ಭಯೋತ್ಪಾದನೆ'ಗಳು ಅವಳಿಗಳು. ಇವೆರಡೂ ಪ್ರಗತಿಪರ-ಪ್ರಜಾಸತ್ತಾತ್ಮಕ ಬೆಳವಣಿಗೆಗೆ ಅಪಾಯಕಾರಿ. ಇಸ್ಲಾಮಿಕ್ ಅಥಾವ ಇತರ ಯಾವುದೇ 'ಮೂಲಭೂತವಾದ' ಹಲವರು ಅಂದುಕೊಂಡಂತೆ ಸಾಮ್ರಾಜ್ಯಶಾಹಿಗೆ ನಿಜವಾದ ಪ್ರತಿರೋಧ ಒಡ್ಡುವುದಿಲ್ಲ. ಅವುಗಳಿಗೆ ಹಲವು ಕಡೆ ಜನಬೆಂಬಲ ಇರುವಂತೆ ಕಂಡರೂ ಅವು ಪ್ರಗತಿಪರ, ಪ್ರಜಾಸತ್ತಾತ್ಮಕ ಬೆಳವಣಿಗೆಗೆ ವಿರೋಧವಾಗಿರುವ ಶಕ್ತಿಗಳು.

ಈ ಹಿನ್ನೆಲೆಯಲ್ಲಿ 'ಭಯೋತ್ಪಾದನೆ ಬೇಡ', 'ಸಾಮ್ರಾಜ್ಯಶಾಹಿ ಬೇಡ', 'ಸಾಮ್ರಾಜ್ಯಶಾಹಿ ಜಾಗತೀಕರಣ ಬೇಡ' ಎಂಬ ಘೋಷಣೆಯೊಡನೆ ಭಾರತದ ಜನಸಮೂಹಗಳನ್ನು ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಬೆಳವಣಿಗೆಗಾಗಿ ಅಣಿನೆರೆಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತದೆ



ವಿಕಾರಗಳೇ ಮನೋರಂಜನೆ 'ಫ್ರೆಂಡ್ಸ್'

ಕೆ.ಎನ್.ಉಮೇಶ್


ಕಾಲೇಜು ಹುಡುಗರ ಬಾಯಲ್ಲೆಲ್ಲಾ 'ತಿರುಪತಿ ತಿರುಮಲ ವೆಂಕಟೇಶ....', 'ಆ ದೇವರು ವರವನು ಕೊಟ್ರೆ.....' ಹಾಡುಗಳು, ಸಿನಿಮಾ ಡೈಲಾಗುಗಳೇ. ಜಾಹಿರಾತಿನ ರೂಪದಲ್ಲಿ ಕಂಡು, ಯಶಸ್ವಿ ಚಿತ್ರ 'ಫ್ರೆಂಡ್ಸ್' ಎಂಬ ಅಭಿಪ್ರಾಯ ಕೇಳಿ ಏನಿದೆ ಇದರಲ್ಲಿ ಎಂದು ಸಿನಿಮಾ ನೋಡಿದೆ. ಆದರೆ ಸಿನಿಮಾ ನೋಡಿದ ಮೇಲಂತೂ ಏಕೆ ನೋಡಿದೆ ಎಂಬ ಪ್ರಶ್ನೆ... ಸಿನಿಮಾ ನೋಡಿ ತಲೆನೋವು ಬಂದದ್ದಂತೂ ಸತ್ಯ.

ಕಾಲೇಜುಗಳ ಹುಡುಗರ ನಡುವೆ ಬೆಳೆದಿರುವ, ಬೆಳೆಯುತ್ತಿರುವ ವಿಕಾರಗಳು, ಟೀನೇಜ್ ವಿಕಾರಗಳನ್ನೇ ಬಂಡವಾಳವಾಗಿಸಿ, ಈ ವಿಕಾರಗಳಿಂದ ಹೊರಬರಬೇಕು, ಓದಬೇಕು, ಸಾಧಿಸಬೇಕು ಎಂಬ ಸಂದೇಶವನ್ನು ಇಡೀ ಸಿನಿಮಾ ಒಟ್ಟಾರೆಯಾಗಿ ತಿಳಿಸ ಬಯಸುತ್ತದೆ. ಈ ವಿಕಾರಗಳನ್ನು ತಿಳಿಸಲು ಸಿನಿಮಾ ಉದ್ದಕ್ಕೂ ದ್ವಂದ್ವ ಅರ್ಥ(double Meaning) ಸಂಭಾಷಣೆಗಳನ್ನು ಹೇರಳವಾಗಿ ಬರೆಸಲಾಗಿದೆ. ಆ ಮಾತುಗಳನ್ನು ಕೇಳಿದೊಡನೆ ಪುಳಕಿತ ರಾಗುವ ಕಾಲೇಜು ಹುಡುಗರು, ತಮ್ಮ ಮಾತುಗಳು ಖಾಸಗಿಯಾಗಿ ಫ್ರೆಂಡ್ಸ್ ಗಳೊಳಗೆ ಮಾತನಾಡಿಕೊಳ್ಳುವ ಅಂಶಗಳನ್ನು ಇಷ್ಟು ಬಹಿರಂಗವಾಗಿ ಹೇಳುವುದನ್ನು ನೋಡಿ ಶಿಳ್ಳೆ ಹೊಡೆಯುವುದು ಸಹಜವೇ! ಆದರೆ ***'ಮನೋರಂಜನೆ' ಮಾಧ್ಯಮವಾಗಿರುವ ಸಿನಿಮಾ ಟೀನೇಜ್ ಹುಡುಗರ ವಿಕಾರ ಗಳನ್ನೇ ಮನೋರಂಜನೆ ಯನ್ನಾಗಿಸಲು ಹೊರಟಿರುವುದರ ಸೂಚಕವಾಗಿದೆ ಈ ಫ್ರೆಂಡ್ಸ್ ಸಿನಿಮಾ.*** ಇದರ ಯಶಸ್ಸು ಮುಂದೆ ಬರುವ ಸಿನಿಮಾಗಳನ್ನು ಈ ಜಾಡಿಗೆ ಎಳೆದರೆ ಅದೊಂದು ದುರಂತವನ್ನೇ ಸೃಷ್ಟಿಸಬಹುದು.

ಶಿಕ್ಷಣದ ಮೂಲಭೂತ ದೃಷ್ಟಿ ಕೋನವೇ ಇಲ್ಲದಿರುವ ಸದ್ಯದ ಪರಿಸ್ಥಿತಿ ಯಲ್ಲಿ ಇಂತಹ ವಿಕಾರಗಳು ಹೆಚ್ಚುವುದು ಸಹಜವೇ. ಆದರೆ ಇಂತಹ ವಿಕಾರಗಳಿಂದ ಹೊರಬರಲು ಈ ಸಿನಿಮಾ ತೋರುವ ದಾರಿಯಂತೂ ಸಹಜವಾದು ದಲ್ಲ. ಬದಲಿಗೆ ಮತ್ತಷ್ಟು ಆತಂಕಕಾರಿ ಯಾದದ್ದು. ದಾರಿ ತಪ್ಪುವ ವಿದ್ಯಾರ್ಥಿ ಗಳನ್ನು ದಾರಿಗೆ ತರುವ ಆದರ ಮಾದರಿ ಅನುಕರಣೀಯ ವಾದುದಲ್ಲ, ಸಾಧುವೂ ಅಲ್ಲ. ಹುಡುಗಿಯ ಪ್ರೀತಿ-ಅಲ್ಲ, ದೇಹ ಸುಖ ಪಡೆಯುವ ಸಲುವಾಗಿ, ಸಿನಿಮಾದ ನಾಲ್ಕುಜನ ಮಿತ್ರರು ಏನು ಸಾಧಿಸದಿದ್ದ ಕಾರಣದಿಂದ ಆಕೆ ಇವರಿಗೆ ಒಲಿಯಲಿಲ್ಲ, ಏನಾದರೂ ಸಾಧಿಸಬೇಕು, ಸಾಧಿಸಿದ ನಂತರ ಆಕೆ ದಕ್ಕುತ್ತಾಳೆ ಎಂಬ ಭ್ರಮೆ ಅವರನ್ನು ಸರಿ ದಾರಿಗೆ ತರುತ್ತದೆ ಎಂಬ ದಾರಿ ಪರಿಹಾರವಲ್ಲ. ನಂತರ ಇನ್ನೊಬ್ಬ ಮಿತ್ರನ ಪರೋಕ್ಷ ಸಹಾಯ, ಜ್ಞಾನೋದಯ, ಅವರು ಸರಿದಾರಿಗೆ ಬರುವ ಕೃತಕ ಕಲ್ಪನೆಯಾಗಿಯೇ ಉಳಿದೀತು! ಸಿನಿಮಾ ಕ್ಲೈಮಾಕ್ಸ್ ಹೇಳುವುದಂತೂ ಅತ್ಯಂತ ಅಪಾಯಕಾರಿ. ಎರಡು ವರ್ಷದ ನಂತರ ಸುಧಾರಿತ 'ಫ್ರೆಂಡ್ಸ್' ಕಾಲ್ನಡಿಗೆಯಿಂದ ಕೊಯಲಿಸ್ ಏರುವುದನ್ನು ಸರಿ ಎಂದು ಭಾವಿಸಿದ, ಅದು ಸಾಧ್ಯವೇ ಎಂಬ ದೊಡ್ಡ ಪ್ರಶ್ನೆ, ಬದುಕಿನ ಬವಣೆ ಅರಿತವರಿಗೆ ಮಾತ್ರ ಅರ್ರಿಯಲು ಸಾಧ್ಯ.

ಪ್ರಸ್ತುತ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಹಾಗೂ ಯಾವುದೇ ಗೊತ್ತು-ಗುರಿ ಇಲ್ಲದ, ಯುವ ವಯಸ್ಕ ವಿದ್ಯಾರ್ಥಿಗಳ ಸೃಜನಶೀಲ ತುಡಿತಗಳಿಗೆ ನೆಲೆಯಾಗದ ಪ್ರಸ್ತುತ ಶಿಕ್ಷಣ ವ್ಯವಸ್ಥೆ ಈ ವಿಕಾರಗಳಿಗೆ ಕಾರಣೀಭೂತ. ಆದರೆ ಅದಾವುದರ ಗಂಧವನ್ನು ಕಿಂಚಿತ್ತೂ ಸಂಕೇತಿಸದೆ, ವಿಕಾರಗಳಿಗೆ 'ಫ್ರೆಂಡ್ಸ್' ಸೂಚಿಸುವ ಪರಿಹಾರ, ಪ್ರಸ್ತುತ ಹಣಕಾಸು ಮಾಡುವುದೇ ಪರಮಧ್ಯೇಯವಾಗಿಸಿರುವ ಜಾಗತೀಕರಣ, ಉದಾರೀಕರಣದ ಪರಿಹಾರವನ್ನು ಸೂಚ್ಯವಾಗಿ ಸೂಚಿಸಿದೆ. ಇದರ ಭಾಗವಾಗಿ 'ತಿರುಪತಿ-ತಿರುಮಲ ವೆಂಕಟೇಶ' ಹಾಡು ಸಿನಿಮಾದಲ್ಲಿ ಸೇರಿಸಲಾಗಿದೆ ಎಂದರೆ ಅತಿಶಯೋಕ್ತಿಯಾಗ ಲಾರದು. ಗೇಲಿಯಂತೆ ಕಂಡರೂ ಓದು ಇಲ್ಲ, ಕೆಲಸನೂ ಇಲ್ಲ, ಆದರೆ ದುಡ್ಡು ಮಾತ್ರ ಹೇಗೆ ಬರುತ್ತೆ. ಆ ದಾರಿಯನ್ನು ನಮಗೂ ತೋರಿಸು ಎಂಬ ಪ್ರಶ್ನೆಯ ಹಾಡಿನ ಸಾಲು, ಗಣಪನ ಜೊತೆ ಡೀಲ್, ಕೈಲಾಸದಲ್ಲಿ ಸೈಟಿಗೆ ಎಂಬ ಸಾಲು 'ಉದ್ಯೋಗ ರಹಿತ ಬೆಳವಣಿಗೆಯ' ಜಾಗತೀಕರಣ ಪ್ರಕ್ರಿಯೆಯ ಪ್ರತೀಕವಾಗಿದೆ. ಶಿಕ್ಷಣ ಪಡೆದರೂ, ಉದ್ಯೋಗ ಸಿಗದ ಪ್ರಸ್ತುತ ಪರಿಸ್ಥಿತಿಯಲ್ಲಿ ಇಂತಹ ಸಾಲಿನ ಹಾಡುಗಳು, ಯುವಕರನ್ನು ಸೆಳೆಯುವುದು ಸಹಜವೇ.

ಪ್ರಸಕ್ತ ಪರಿಸ್ಥಿತಿಯನ್ನು ಸೃಜನಶೀಲ ವಾಗಿ, ಸಾಂಸ್ಕೃತಿಕವಾಗಿ ಕನ್ನಡ ಸಾಹಿತ್ಯ, ಸಿನಿಮಾ, ಕಲೆ, ಮಾಧ್ಯಮ ಸಮರ್ಪಕವಾಗಿ ಎದುರಿಸದಿದ್ದರೆ, ಇಂತಹ ವಿಕಾರಗಳೇ ಮನೋರಂಜನೆಯಾಗಿ, ಸಿನಿಮಾ ಸಾಹಿತ್ಯ, ಮಾಧ್ಯಮಗಳಲ್ಲಿ ಹೊರಹೊಮ್ಮುತ್ತವೆ. ವಿಕಾರಗಳನ್ನು ಪರಿಹರಿಸುವ ಆತುರದಲ್ಲಿ ಮತ್ತಷ್ಟು ವಿಕೃತ ದಾರಿಗಳನ್ನು ಯುವಜನತೆ ಹಿಡಿಯಲು ಪೂರಕವಾಗುವ ಅಭಿಪ್ರಾಯ ವನ್ನು ರೂಪಿಸುತ್ತವೆ. ಈ ಜಾಡು ಅತ್ಯಂತ ಅಪಾಯಕಾರಿ



ಕನ್ನಡ ಸಾಹಿತ್ಯ ಸಮ್ಮೇಳನ ಸಮಾರೋಪ

ಜಾಗತೀಕರಣದಿಂದ ಸಾಂಸ್ಕೃತಿಕ ದಾರಿದ್ರ್ಯ ; ಕಂಬಾರ

ಜಾಗತೀಕರಣವನ್ನು ಒಪ್ಪಿ ಕೊಂಡಿದ್ದೇ ಆದಲ್ಲಿ ಮುಂದೊಂದು ದಿನ ಸಾಂಸ್ಕೃತಿಕ ದಾರಿದ್ರ್ಯ ಅನುಭವಿಸಬೇಕಾಗುತ್ತದೆ. ಎಂದು ಖ್ಯಾತ ಸಾಹಿತಿ ಡಾ। ಚಂದ್ರಶೇಖರ ಕಂಬಾರ ಎಚ್ಚರಿಸಿದ್ದಾರೆ.

69ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಕಂಬಾರರು



ಜಾಗತೀಕರಣವೆಂದರೆ ಅಮೆರಿಕೀಕರಣ ಎಂಬ ಮಾತನ್ನು ಸಮ್ಮೇಳನಾಧ್ಯಕ್ಷರಾದ ಅನಂತಮೂರ್ತಿಯವರು ತುಂಬ ಅರ್ಥಪೂರ್ಣವಾಗಿ ಹೇಳಿದ್ದಾರೆ. ಅಮೇರಿಕೀಕರಣವನ್ನು ಒಪ್ಪಿಕೊಳ್ಳುವುದು ಜಾಗತೀಕರಣವನ್ನು ಒಪ್ಪಿ ಕೊಂಡಂತೆಯೇ. ಅಮೆರಿಕ ಇಂದು ಸಾಂಸ್ಕೃತಿಕ ದಾರಿದ್ರ್ಯದಿಂದ ಬಳಲುತ್ತಿದೆ. ಅಮೆರಿಕೀಕರಣವನ್ನು ಅನುಸರಿಸಿದ್ದೇ ಆದಲ್ಲಿ ಅದಕ್ಕೆ ತಕ್ಕ ದಂಡವನ್ನು ಮುಂದೊಮ್ಮೆ ತೆರಬೇಕಾಗುತ್ತದೆ ಎಂದು ಹೇಳಿದರು.

ಕನ್ಸೂಮರಿಸಂನ ಪ್ರಭಾವ ನಮ್ಮ ಮೇಲೆ ಹೆಚ್ಚಾಗಿ ಆಗುತ್ತಿದೆ. ಇದರ ಬಗ್ಗೆ ಅರ್ಥಪೂರ್ಣ ಚರ್ಚೆಯಾಗ ಬೇಕಿದೆ. ಕನ್ಸೂಮರಿಸಂನಲ್ಲಿ ಉತ್ಪಾದಕ, ಮಾರಾಟಗಾರ ಅಥವಾ ದಲ್ಲಾಳಿ ಮತ್ತು ಗ್ರಾಹಕ ಎಂಬ ಮೂರು ಹಂತಗಳಿವೆ. ದಲ್ಲಾಳಿಗೆ ಮಾಧ್ಯಮದ ಅಗತ್ಯವಿದೆ. ಈ ಮಾಧ್ಯಮ ಜಾಗತೀಕರಣದ ರೂಪದಲ್ಲಿ ನಮ್ಮ ಮೇಲೆ ಪ್ರಭಾವ ಬೀರಿದೆ. ಮಾಧ್ಯಮದ ಮುಖ್ಯ ಗುರಿ ಅಂತಹ ಗೋಡೆಗಳನ್ನು ಒಡೆಯುವುದು. ಜಾಗತೀಕರಣ ಈ ಕೆಲಸವನ್ನು ಅವರಿಗಾಗಿ ಮಾಡುತ್ತಿದೆ. ಅದರ ನಿಯಂತ್ರಣದ ಕಡೆಗೆ ಗಮನ ಹರಿಸುವ ಅಗತ್ಯವಿದೆ. ಪ್ರಗತಿಗಾಗಿ ಎಲ್ಲಡೆಯಿಂದ ನಾವು ಹೊಸ ತಂತ್ರಜ್ಞಾನ ತರುತ್ತಿದ್ದೇವೆ. ಆದರೆ ಹಾಗೆ ತರುವಾಗ ನಮ್ಮ ದೇಶದ ಬೆನ್ನೆಲುಬಾದ ರೈತನಂತವನ ಬಗ್ಗೆಯೂ ಚಿಂತಿಸುವ ಅಗತ್ಯವನ್ನು ಹೇಳಿದರು.

ಮರುಭೂಮಿಗೆ ಕರೆದುಕೊಂಡು ಹೋಗಿ ಉಪ್ಪು ನೀರು ಕುಡಿಸಿದಂತಹ ಪರಿಸ್ಥಿತಿ ಜಾಗತೀಕರಣದಿಂದ ಉಂಟಾಗಲಿದೆ. ಈ ಬಗ್ಗೆ ನಾವು ಈಗಲೇ ಎಚ್ಚರಗೊಳ್ಳಬೇಕಿದೆ ಎಂದು ಹೇಳಿದರು.

ಹಿರಿಯ ಸಾಹಿತಿಗಳ ಅಭಿಪ್ರಾಯಗಳು

ಸಂತೆ ಹೊತ್ತು ನೆಯ್ದ ಮೂರು ಮೊಳ ; ಶಿವರುದ್ರಪ್ಪ ಕಿಡಿ

ಅಧ್ಯಕ್ಷ ಭಾಷಣವನ್ನು ಬಿಟ್ಟರೆ ಇಡೀ ಸಮ್ಮೇಳನದಲ್ಲಿ ಮೌಲಿಕವಾದದ್ದು ಏನೂ ಇಲ್ಲ, ಸಕಾಲಿಕವಲ್ಲದ, ಹೊಸತನವಿಲ್ಲದ ಸವಕಲು ವಿಷಯಗಳನ್ನೇ ಮತ್ತೆ ಚರ್ಚೆಗೆ ಇಡಲಾಗಿದೆ. ಇಂಥ ಅವ್ಯವಸ್ಥೆಗೆ ತರಾತುರಿಯೇ ಕಾರಣವಾಗಿರಬೇಕು. ಒಟ್ಟಿನಲ್ಲಿ ಸಮ್ಮೇಳನ "ಸಂತೆ ಹೊತ್ತು ನೇಯ್ದ ಮೂರು ಮೊಳ" ಎಂಬ ಗಾದೆಯಂತಾಗಿ ಮೂಲ ಉದ್ದೇಶವನ್ನೇ ಮರೆತಿದೆ. ಕನ್ನಡ ನಾಡು ನುಡಿಯ ನೈಜ ಸಮಸ್ಯೆಗಳು ಸವಾಲುಗಳನ್ನು ಗಣನೆಗೆ ತೆಗೆದುಕೊಳ್ಳದೇ ಇರುವುದು ವಿಷಾದನೀಯ. ಸಮಕಾಲೀನ ಸಾಹಿತ್ಯದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಗೋಷ್ಠಿಗಳಿದ್ದಾಗ ಸಮ್ಮೇಳನ ಅರ್ಥಪೂರ್ಣವಾಗುತ್ತದ"

- ಹಿರಿಯ ಕವಿ **ಜಿ.ಎಸ್. ಶಿವರುದ್ರಪ್ಪ.**

★ ★ ★

'ಇಂಥ ಅವ್ಯವಸ್ಥೆ, ಗೊಂದಲ ಮತ್ತು ತುರಾತುರಿಯ ಸಮ್ಮೇಳನಗಳನ್ನು ನಡೆಸುವುದಕ್ಕಿಂತ ಸಾಹಿತ್ಯ ಪರಿಷತ್ ಅಧ್ಯಕ್ಷರ ಮೂರು ವರ್ಷಗಳ ಅಧಿಕಾರಾವಧಿಯಲ್ಲಿ ಆತ್ಮತೃಪ್ತ ಎನ್ನುವ ಒಂದು ಸಮ್ಮೇಳನ ನಡೆಸಿದರೂ ಸಾಕು' ಕನ್ನಡ ನಾಡು-ನುಡಿ, ಸಂಸ್ಕೃತಿ ಕನ್ನಡ ಮಾಧ್ಯಮ ಪ್ರಾದೇಶಿಕ ಅಸಮಾನತೆಗಳಂಥ ವಿಷಯಗಳ ಬಗ್ಗೆ ಚರ್ಚಿಸುವ ಗೋಷ್ಠಿಗಳೇ ಇಲ್ಲದಿದ್ದ ಮೇಲೆ ಸಮ್ಮೇಳನ ನಡೆಸುವ ಆಗತ್ಯವೇನಿದೆ" - ಹಿರಿಯ ಕವಿಚೇತನ **ಚನ್ನವೀರಕಣವಿ**

★ ★ ★

"ಪ್ರಪ್ರಥಮ ಬಾರಿಗೆ ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತರು ಸಮ್ಮೇಳನಾಧ್ಯಕ್ಷರಾದ ಸಮ್ಮೇಳನದಲ್ಲಿ ಲಾಠಿ ಪ್ರಹಾರವೇ ಸಾಧನೆ. ರಾಜಕೀಯವೇ ಮರೆದು ಪೊಲೀಸರೇ ಸಮ್ಮೇಳನ ನಿಯಂತ್ರಿಸುವುದಾದರೆ ಇಂಥ ಸಮ್ಮೇಳನಗಳಿಂದ ಏನು ಪ್ರಯೋಜನ"


- ಪ್ರೊ। ಕೆ.ಜಿ. ನಾಗರಾಜಪ್ಪ

★ ★ ★

"ಹೊಸತನವಿಲ್ಲ : ಗೋಷ್ಠಿಗಳನ್ನು ನಿಗದಿ ಮಾಡುವ ವೇಳೆ ಹಿಂದಿನ ಗೋಷ್ಠಿಗಳಲ್ಲಿ ಯಾವ ಚರ್ಚೆಗಳು ನಡೆದಿವೆ ಎಂದು ನೋಡಿಕೊಂಡು ಹೊಸ ಗೋಷ್ಠಿಗಳನ್ನು ನಿಗದಿಮಾಡಬೇಕು. ಇಂಥ ಸವಕಲು ವಿಷಯಗಳ ಬಗ್ಗೆಯೇ ಗೋಷ್ಠಿಗಳನ್ನು ನಡೆಸುವುದು ಕೆಟ್ಟ ಸಂಪ್ರದಾಯ"

- ಕವಿ **ಜಿ.ಎಸ್. ಸಿದ್ದಲಿಂಗಯ್ಯ**

ಚಿನ್ನದ ಪದಕ ಗಳಿಸಿದ ಲಕ್ಷ್ಮಿ ನರಸಮ್ಮ



ಲಕ್ಷ್ಮಿ ನರಸಮ್ಮ ಬೆಂಗಳೂರು ವಿಶ್ವವಿದ್ಯಾಲಯದ ಎಂ.ಎ. ಕನ್ನಡ ಪದವಿಯಲ್ಲಿ ಆರು ಚಿನ್ನದ ಪದಕಗಳನ್ನು ಗಳಿಸಿದ್ದಾರೆ. ಶ್ರೀರಾಮಪುರದಲ್ಲಿ ಅತಿ ಬಡಜನ ವಾಸಿಸುವ ಪ್ರದೇಶದಲ್ಲಿ ಸಾಮಾನ್ಯ ನೇಕಾರ ಕುಟುಂಬದಿಂದ ಬಂದು ಇಂತಹ ಸಾಧನೆ ಗೈದುದು ಪ್ರಶಂಸನೀಯ. ಲಕ್ಷ್ಮಿ ನರಸಮ್ಮನವರು ಡಿವೈಎಫ್ಐ ನ ರಾತ್ರಿ ಉಚಿತ ಪಾಠಶಾಲೆ, ಸಾಕ್ಷರತಾ ಆಂದೋಲನದ ಮೂಲಕ ಶ್ರೀರಾಮಪುರದ ಡಿವೈಎಫ್ಐನ ಪ್ರದೇಶ ಸಮಿತಿಯ ಖಜಾಂಚಿಯಾಗಿದ್ದು ಹಲವಾರು ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹಲವಾರು ಕವಿತೆಗಳನ್ನು ರಚಿಸಿದ್ದಾರೆ. ಎಲ್ಲಾ ಸಂಕಷ್ಟಗಳ ಜೊತೆಯಲ್ಲಿ ಕಠಿಣ ಪರಿಶ್ರಮದಿಂದ ಚಿನ್ನದ ಪದಕ ಗಳಿಸಿರುವುದು ನಮ್ಮೆಲ್ಲರಿಗೂ ಸಂತೋಷ ತಂದಿದೆ. ಇವರಿಗೆ ಡಿವೈಎಫ್ಐ, ಎಸ್ಎಫ್ಐ ಮತ್ತು ಐಕ್ಯರಂಗ ಅಭಿನಂದಿಸಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002